ಮಂಗಳವಾರ, ಡಿಸೆಂಬರ್ 10, 2024 | ₹ 7.00

www.prajavani.net


prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಬಾಲಿವುಡ್ ನಟಿ ರಕುಲ್ ಪ್ರೀತ್ ಸಿಂಗ್ ಫೋಟೊಗೆ ಪೋಸ್ ನೀಡಿದ್ದು ಹೀಗೆ...



1974ರ ಗೆಜೆಟ್ ಹಿಂಪಡೆಯಲು ಛಲವಾದಿ ನಾರಾಯಣಸ್ವಾಮಿ ಆಗ್ರಹ • ಕಲಾಪ ಮಂಗಳವಾರಕ್ಕೆ ಮುಂದೂಡಿಕೆ

ವಕ್ಫ್ ಆಸ್ತಿ ವಿವಾದ: ಪರಿಷತ್‌ನಲ್ಲಿ ವಾಕ್ಸಮರ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ವಕ್ಫ್ ಆಸ್ತಿ ವಿಚಾರ ವಿಧಾನಮಂಡಲ ಅಧಿವೇಶನದ ಮೊದಲ ದಿನವಾದ ಸೋಮವಾರ ವಿಧಾನಪರಿಷತ್‌ನಲ್ಲಿ ಆಡಳಿತರೂಢ ಕಾಂಗ್ರೆಸ್ ಮತ್ತು ವಿರೋಧ ಪಕ್ಷ ಬಿಜೆಪಿ ಸದಸ್ಯರ ನಡುವೆ ವಾದ- ಪ್ರತಿವಾದವು ಕಾವೇರಿದ ವಾಕ್ಸಮರಕ್ಕೆ ಕಾರಣವಾಯಿತು.

ಮಾತಿನ ಜಟಾಪಟಿ ನಿಯಂತ್ರಿಸಲು ಸಭಾಪತಿ ಬಸವರಾಜ ಹೊರಟ್ಟಿ ಎದ್ದು ನಿಂತು ಎಚ್ಚರಿಕೆ ನೀಡಬೇಕಾಗಿ ಬಂತು. ಅಲ್ಲದೆ, 10 ನಿಮಿಷ ಸದನ ಮುಂದೂಡಿದರು. ಗದ್ದಲ ಮುಂದುವರಿದ ಕಾರಣ ಸಭಾಪತಿ ಪೀಠದಲ್ಲಿದ್ದ ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಿದರು.

ನಿಯಮ 68ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, 'ವಕ್ಫ್ ಕುರಿತು ಇರುವ 1974ರ ಗೆಜೆಟ್ ಅನ್ನು ರಾಜ್ಯ ಸರ್ಕಾರ ಹಿಂಪಡೆಯಬೇಕು. 2013ರಲ್ಲಿ ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ವಕ್ಫ್ ಮಂಡಳಿಗೆ ಪರಮಾಧಿಕಾರ ಸಿಕ್ಕಿದೆ. ಪಹಣಿಯಕಾಲಂ11ರಲ್ಲಿವಕ್ಫ್‌ಎಂದುನಮೂದಿಸಲಾಗಿದೆ. ರೈತರಿಂದ ಜಮೀನು ಮಾಲೀಕತ್ವ ಕೈಬಿಟ್ಟು ಹೋಗುತ್ತಿದ್ದು, ರೈತರು ಆತಂಕದಲ್ಲಿದ್ದಾರೆ' ಎಂದರು.

ಆಗ ಮಧ್ಯಪ್ರವೇಶಿಸಿದ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, 'ಸದನಕ್ಕೆ ತಪ್ಪು ಮಾಹಿತಿ ನೀಡಲಾಗುತ್ತಿದೆ' ಎಂದು ಆರೋಪಿಸಿದರು. 'ವಕ್ಫ್ ಸಂಬಂಧಿತ ಪ್ರಕರಣಗಳು ಜಿಲ್ಲಾ ನ್ಯಾಯಾಲಯದಿಂದ ಸುಪ್ರೀಂ ಕೋರ್ಟ್‌ವರೆಗೂ ವಿಚಾರಣೆ ಹಂತದಲ್ಲಿವೆ' ಎಂದು ಏರುಧ್ವನಿಯಲ್ಲಿ ಪ್ರಸ್ತಾಪಿಸಿದರು. ಸಭಾನಾಯಕ ಎನ್.ಎಸ್. ಬೋಸರಾಜು, ಸದಸ್ಯರಾದ ನಜೀರ್ ಅಹಮದ್, ಸಲೀಂ ಅಹಮದ್ ಮತ್ತಿತರರು ದನಿಗೂಡಿಸಿದರು.




ವಕ್ಫ್ ಆಸ್ತಿ ವಿಚಾರದ ಕುರಿತು ವಿಧಾನಪರಿಷತ್‌ನಲ್ಲಿ ವಾಕ್ಸಮರ ನಡೆಯುತ್ತಿದ್ದಾಗ ಸಚಿವ ಪ್ರಿಯಾಂಕ್ ಖರ್ಗೆ ಅವರು ಕಾಂಗ್ರೆಸ್‌ನ ನಜೀರ್ ಅಹಮದ್ ಮತ್ತು ಬಿ.ಕೆ. ಹರಿಪ್ರಸಾದ್ ಜೊತೆ ಚರ್ಚೆ ನಡೆಸಿದರು (ಎಡಚಿತ್ರ) ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿದರು ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

ನಿವೃತ್ತ ಅಧಿಕಾರಿಗಳು ತೆರೆಯ ಹಿಂದೆ ವಕ್ಫ್ ಆಸ್ತಿ ಗುರುತಿಸುವ ಕೆಲಸ ಮಾಡುತ್ತಿದ್ದು, ಪಹಣಿಯಲ್ಲಿ ವಕ್ಫ್ ಹೆಸರು ಬರುವಂತೆ ನೋಡಿಕೊಳ್ಳುತ್ತಿದ್ದಾರೆ
ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ಪಹಣಿ ಕಾಲಂ ನಂ. 11ರಲ್ಲಿ ವಕ್ಫ್ ಎಂದು ನಮೂದಿಸಿದ ಮಾತ್ರಕ್ಕೆ ವಕ್ಫ್ ಮಾಲೀಕತ್ವ ಸಿಗಲಿದೆ ಎಂಬುದು ಸುಳ್ಳು. ಕಾಲಂ 9ರಲ್ಲಿ ನಮೂದಾದ ಹೆಸರಿನವರು ಮಾತ್ರ ಮಾಲೀಕರಾಗುತ್ತಾರೆ
ಪ್ರಿಯಾಂಕ್ ಖರ್ಗೆ, ಸಚಿವ

ಯಾರದ್ದೋ ಪಹಣಿಯ ಕಾಲಂ ನಂ. 11ರಲ್ಲಿ ಮತ್ಯಾರದ್ದೊ ಹೆಸರನ್ನು ಏಕಾಏಕಿ ನಮೂದಿಸಲು ಹೇಗೆ ಸಾಧ್ಯ?
ಎನ್. ರವಿಕುಮಾರ್, ಬಿಜೆಪಿ ಸದಸ್ಯ

ರಾಜೀನಾಮೆ ಸವಾಲ್– ಜವಾಬ್

2013ರಲ್ಲಿ ವಕ್ಫ್ ಮಂಡಳಿಗೆ ಪರಮಾಧಿಕಾರ ನೀಡಿರುವ ಕುರಿತು ತಿದ್ದುಪಡಿಯಾಗಿದ್ದರೆ ರಾಜೀನಾಮೆ ನೀಡುವುದಾಗಿ ಕಾಂಗ್ರೆಸ್‌ನ ನಜೀರ್ ಅಹ್ಮದ್ ಸವಾಲು ಹಾಕಿದರು. ಇದಕ್ಕೆ ಪ್ರತ್ಯುತ್ತರ ನೀಡಿದ ಸಿ.ಟಿ. ರವಿ, 'ದೇಶದಲ್ಲಿ ಇಸ್ಲಾಂ ಧರ್ಮವೇ ಹುಟ್ಟಿರದ ಕಾಲದಲ್ಲಿ, 1,500 ವರ್ಷಗಳ ಹಿಂದೆ ನಿರ್ಮಾಣವಾದ ಚಾಲುಕ್ಯರ ಕಾಲದ ಸೋಮೇಶ್ವರ ದೇವಾಲಯ ವಕ್ಫ್ ಆಸ್ತಿ ಹೇಗಾಗುತ್ತದೆ? ಇಂತಹ ಪರಮಾಧಿಕಾರ ಕೊಟ್ಟವರು ಯಾರು? ನಾನೂ ರಾಜೀನಾಮೆ ಸವಾಲು ಸ್ವೀಕರಿಸುತ್ತೇನೆ' ಎಂದರು.

ಈ ವೇಳೆ ಕ್ರಿಯಾಲೋಪ ಎತ್ತಿದ ಬಿ.ಕೆ. ಹರಿಪ್ರಸಾದ್, '2013ರಲ್ಲಿ ಮನಮೋಹನ್ ಸಿಂಗ್ ಸರ್ಕಾರದಲ್ಲಿ ಹರಿಯಾಣ, ಪಂಜಾಬ್, ಹಿಮಾಚಲ ರಾಜ್ಯಕ್ಕೆ ಸಂಬಂಧಿಸಿದಂತೆ ದರ್ಗಾ, ಸ್ಮಶಾನ ವಿಚಾರದಲ್ಲಿ ಸಣ್ಣ ತಿದ್ದುಪಡಿ ಆಗಿದೆ. ಸಿ.ಟಿ. ರವಿ ಅವರು ತಪ್ಪು ಮಾಹಿತಿ ನೀಡುತ್ತಿದ್ದಾರೆ' ಎಂದರು. ಹರಿ ಪ್ರಸಾದ್ ಉತ್ತರವನ್ನೇ ಪ್ರಶ್ನಿಸಿದ ಸಿ.ಟಿ. ರವಿ, 'ಹೌದು ಸ್ವಾಮೀ, ವಕ್ಫ್‌ಗೆ ಪರಮಾಧಿಕಾರ ನೀಡಿದ್ದು ಹೇಗೆ? ಯಾಕೆ? ಎಲ್ಲಿ? ಎಂಬುದನ್ನು ತಿಳಿಸಿ' ಎಂದರು.

ಮಾತು ಮುಂದುವರಿಸಿದ ನಾರಾಯಣಸ್ವಾಮಿ, 'ರಾಜ್ಯದಲ್ಲಿ ಹಲವೆಡೆ ದಲಿತರ ಶವ ಸಂಸ್ಕಾರಕ್ಕೆ ಜಾಗವಿಲ್ಲ. ಏಕಾಏಕಿ ಒಂದೇ ಅಲ್ಪಸಂಖ್ಯಾತ ಸಮುದಾಯದವರ ಹೆಸರಿಗೆ ಸಾವಿರಾರು ಎಕರೆ ಜಮೀನು ಉದ್ಭವಿಸುತ್ತಿರುವುದು ಹೇಗೆ. ಅಲ್ಪಸಂಖ್ಯಾತರ ಹಕ್ಕು ಎಂದು ಮಾತನಾಡುವ ಆಡಳಿತ ಪಕ್ಷಕ್ಕೆ ಕೇವಲ ಒಂದೇ ಸಮುದಾಯದ ಕಾಣುತ್ತಿದೆ. ಅಲ್ಪಸಂಖ್ಯಾತರಲ್ಲಿ ಜೈನ್, ಕ್ರಿಶ್ಚಿಯನ್ ಸೇರಿದಂತೆ ಇತರೆ ಸಮುದಾಯಗಳೂ ಇವೆ. ಅಂತಹ ಸಮುದಾಯಗಳಿಗೂ ಜಮೀನು ಹಂಚಿಕೆ ಆಗಬೇಕಲ್ಲವೇ' ಎಂದು ಪ್ರಶ್ನಿಸಿದರು.

ವಕ್ಫ್ ವಿಚಾರ ಚರ್ಚೆ ನಡೆಯುತ್ತಿದ್ದಾಗ ಪ್ರಿಯಾಂಕ್ ಖರ್ಗೆ ಆಗಾಗ ಮಧ್ಯ ಪ್ರವೇಶಿಸುವುದನ್ನು ಆಕ್ಷೇಪಿಸಿದ ಛಲವಾದಿ ನಾರಾಯಣಸ್ವಾಮಿ, 'ಏ ಕುತ್ಕೊಳ್ರಿ ಸಾಕು' ಎಂದು ಸಂಬೋಧಿಸಿದಾಗ ಸಿಟ್ಟಾದ ಪ್ರಿಯಾಂಕ್ ಖರ್ಗೆ, 'ನೀವು ಕುತ್ಕೊಳ್ರಿ. ದಾಖಲೆ ಇಲ್ಲದೇ ಸುಳ್ಳು ಮಾಹಿತಿ ಸದನದಲ್ಲಿ ಪ್ರಸ್ತಾಪಿಸಬೇಡಿ' ಎಂದರು. ಈ ವೇಳೆ ಗಲಾಟೆ ಜೋರಾಯಿತು.

'ಅಕ್ರಮ ಬಿಪಿಎಲ್ ಕಾರ್ಡ್ ಎಪಿಎಲ್‌ಗೆ ಪರಿವರ್ತನೆ'

ಪ್ರಜಾವಾಣಿ ವಾರ್ತೆ



ಮುನಿಯಪ್ಪ

ಸುವರ್ಣ ವಿಧಾನಸೌಧ (ಬೆಳಗಾವಿ): ಆರ್ಥಿಕ ಸ್ಥಿತಿವಂತರು ಹೊಂದಿರುವ ಬಿಪಿಎಲ್ ಕಾರ್ಡ್‌ಗಳನ್ನು ಪತ್ತೆ ಹಚ್ಚಿ, ಅವುಗಳನ್ನು ಎಪಿಎಲ್ ಕಾರ್ಡ್‌ಗಳಾಗಿ ಪರಿವರ್ತಿಸಲಾಗುವುದು. ಅರ್ಹರಿಗೆ ತೊಂದರೆಯಾಗದಂತೆ ಮೂರು ತಿಂಗಳ ಒಳಗೆ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಟಿ.ಎನ್. ಜವರಾಯಿಗೌಡ, ಟಿ.ಎ. ಶರವಣ, ಬಿಜೆಪಿಯ ಸಿ.ಟಿ. ರವಿ, ಹಣಮಂತ ನಿರಾಣಿ, ಕಾಂಗ್ರೆಸ್‌ನ ಐವನ್ ಡಿಸೋಜ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ 1.28 ಕೋಟಿ ಕುಟುಂಬಗಳು ಅಂತ್ಯೋದಯ ಹಾಗೂ ಆದ್ಯತಾ ವಲಯದ ಪಡಿತರ ಕಾರ್ಡ್‌ಗಳನ್ನು ಹೊಂದಿದ್ದಾರೆ. ಮೇ 23ರವರೆಗೆ 3.35 ಲಕ್ಷ ಅನರ್ಹ ಪಡಿತರ ಕಾರ್ಡ್‌ಗಳನ್ನು ಪತ್ತೆ ಹಚ್ಚಿ ₹13.51 ಕೋಟಿ ದಂಡ ವಸೂಲಿ ಮಾಡಲಾಗಿದೆ. ಇನ್ನೂ ಶೇ 20ರಷ್ಟು ಅನರ್ಹ ಬಿಪಿಎಲ್ ಕಾರ್ಡ್ ಇರುವ ಮಾಹಿತಿ ಇದೆ. ಇಂತಹ ಎಲ್ಲ ಕಾರ್ಡ್‌ಗಳನ್ನೂ ಎಪಿಎಲ್‌ಗೆ ಪರಿವರ್ತಿಸುತ್ತೇವೆ' ಎಂದರು.

ಬಿಪಿಎಲ್ ಕಾರ್ಡ್ ನೀಡಲು ಹೊಸದಾಗಿ 2.95 ಲಕ್ಷ ಅರ್ಜಿ ಸಲ್ಲಿಕೆಯಾಗಿದ್ದವು. 1.69 ಲಕ್ಷ ಅರ್ಜಿಗಳಿಗೆ ಅನುಮೋದನೆ ನೀಡಲಾಗಿದೆ. 59,528 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ₹1.20 ಲಕ್ಷಕ್ಕಿಂತ ಹೆಚ್ಚು ಆದಾಯ ಹಾಗೂ ನಿಯಮದಂತೆ ಇತರೆ ಸೌಲಭ್ಯ ಹೊಂದಿರುವ ಎಲ್ಲರ ಬಿಪಿಎಲ್ ರದ್ದು ಮಾಡಿ, ಎಪಿಎಲ್ ಕಾರ್ಡ್ ನೀಡಲಾಗುವುದು ಎಂದು ಹೇಳಿದರು.


ಆಂಧ್ರಪ್ರದೇಶ, ತೆಲಂಗಾಣ ಸೇರಿದಂತೆ ಬಹುತೇಕ ರಾಜ್ಯಗಳಲ್ಲಿ ಬಿಪಿಎಲ್ ಕುಟುಂಬಗಳ ಸಂಖ್ಯೆ ಅಲ್ಲಿನ ಜನಸಂಖ್ಯೆಯ ಶೇ 50 ಮೀರಿಲ್ಲ. ರಾಜ್ಯದಲ್ಲಿ ಮಾತ್ರ ಈ ಪ್ರಮಾಣ ಶೇ 65ರಿಂದ 70ರಷ್ಟು ಇದೆ. ಗ್ರಾಮ ಹಾಗೂ ಗ್ರಾಮವಾರು ಪರಿಶೀಲನೆ ನಡೆಸಲಾಗುವುದು. ಇಂತಹ ಅಕ್ರಮ ತಡೆಗೆ ವಿರೋಧ ಪಕ್ಷಗಳು ಸಹಕಾರ ನೀಡಬೇಕು. ರಾಜಕೀಯ ಮಾಡಬಾರದು ಎಂದು ಕೋರಿದರು.

'ಬಾಂಗ್ಲಾದಿಂದ ಅಕ್ರಮವಾಗಿ ವಲಸೆ ಬಂದವರಿಗೂ ರಾಜ್ಯ ಸರ್ಕಾರ ಬಿಪಿಎಲ್ ಕಾರ್ಡ್ ನೀಡುತ್ತಿದೆ' ಎಂಬ ಸಿ.ಟಿ. ರವಿ ಆರೋಪ ವಾಗ್ವಾದಕ್ಕೆ ಕಾರಣವಾಯಿತು. 'ಅಕ್ರಮವಾಗಿ ಅವರನ್ನು ಬಿಟ್ಟುಕೊಂಡವರೇ ನೀವು. ಈಗ ಆರೋಪ ಮಾಡುತ್ತಿದ್ದೀರಿ' ಎಂದು ಸಚಿವ ಪ್ರಿಯಾಂಕ ಖರ್ಗೆ ಟೀಕಿಸಿದರು.

2.23 ಲಕ್ಷ ಅರ್ಜಿಗಳ ತಿರಸ್ಕಾರ

ಬಗರ್ ಹುಕುಂ: ವಿಧಾನಸಭೆಯಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ

ಪ್ರಜಾವಾಣಿ ವಾರ್ತೆ



ಕೃಷ್ಣ ಬೈರೇಗೌಡ

ಸುವರ್ಣ ವಿಧಾನಸೌಧ (ಬೆಳಗಾವಿ): ಸರ್ಕಾರಿ ಜಮೀನುಗಳಲ್ಲಿನ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವಂತೆ (ಬಗರ್ ಹುಕುಂ) ಕೋರಿ ಸಲ್ಲಿಕೆಯಾಗಿದ್ದ 2.23 ಲಕ್ಷ ಅರ್ಜಿಗಳನ್ನು ಈವರೆಗೆ ತಿರಸ್ಕರಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಧೀರಜ್ ಮುನಿರಾಜು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ನಮೂನೆ-50, ನಮೂನೆ-53 ಮತ್ತು ನಮೂನೆ-57ರ ಅಡಿಯಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು 20 ಮಾನದಂಡಗಳ ಆಧಾರದಲ್ಲಿ ಪರಿಶೀಲಿಸಲಾಗುತ್ತಿದೆ. ಅನರ್ಹ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸಲ್ಲಿಕೆಯಾಗಿದ್ದ 42,350 ಅರ್ಜಿಗಳ ಪೈಕಿ, 33,499 ಅರ್ಜಿಗಳನ್ನು ತಿರಸ್ಕರಿಸಲಾಗಿದೆ' ಎಂದರು.

ರಾಜ್ಯದಲ್ಲಿ ತಿರಸ್ಕೃತವಾಗಿರುವ ಅರ್ಜಿಗಳ ಕುರಿತು ಮಾಹಿತಿ ಪಡೆಯಲಾಗಿದೆ. 18 ವರ್ಷ ವಯಸ್ಸಾಗದ 7,000ಕ್ಕೂ ಹೆಚ್ಚು ಜನರು ಸಲ್ಲಿಸಿರುವ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಕೆರೆ, ರಸ್ತೆ, ಗುಂಡುತೋಪು, ದೇವರಕಾಡು ಸೇರಿದಂತೆ ಸಾರ್ವಜನಿಕ ಉದ್ದೇಶಕ್ಕೆ ಮೀಸಲಾದ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವುದಾಗಿ ಸಲ್ಲಿಸಿದ್ದ 27,452 ಅರ್ಜಿಗಳು, ನಗರ ಮತ್ತು ಪಟ್ಟಣಗಳ ಬಫರ್ ವಲಯದ ವ್ಯಾಪ್ತಿಯಲ್ಲಿ ಸಾಗುವಳಿ ಮಾಡುತ್ತಿರುವುದಾಗಿ ಸಲ್ಲಿಸಿದ್ದ 33,000 ಅರ್ಜಿಗಳು, ಅರಣ್ಯ ಜಮೀನಿಗೆ ಸಂಬಂಧಿಸಿದ 12,000 ಅರ್ಜಿಗಳನ್ನೂ ತಿರಸ್ಕರಿಸಲಾಗಿದೆ ಎಂದು ವಿವರಿಸಿದರು.

ಕೃಷಿಕರೇ ಅಲ್ಲದವರು, ಅರ್ಜಿಯಲ್ಲಿ ಉಲ್ಲೇಖಿಸಿದ ಜಮೀನುಗಳಲ್ಲಿ ಸಾಗುವಳಿಯನ್ನೇ ಮಾಡದವರು, ಕುಟುಂಬದಲ್ಲಿ 5 ಎಕರೆಗಿಂತ ಹೆಚ್ಚು ಜಮೀನು ಹೊಂದಿರುವವರು ಸಲ್ಲಿಸಿರುವ ಅರ್ಜಿಗಳನ್ನೂ ತಿರಸ್ಕರಿಸಲಾಗಿದೆ ಎಂದರು.

10,651 ಖಾತೆ ಬಾಕಿ: ಕಾಂಗ್ರೆಸ್‌ನ ಟಿ.ಬಿ. ಜಯಚಂದ್ರ ಅವರ ಪ್ರಶ್ನೆಗೆ ಉತ್ತರಿಸಿದ ಕಂದಾಯ ಸಚಿವರು, 'ಬಗರ್ ಹುಕುಂ ಸಾಗುವಳಿ ಸಮಿತಿಗಳ ನಿರ್ಣಯದಂತೆ ಭೂ ಮಂಜೂರಾತಿಯಾಗಿರುವ 10,651 ಪ್ರಕರಣಗಳಲ್ಲಿ ಈವರೆಗೂ ರೈತರ ಹೆಸರಿಗೆ ಖಾತೆ ಮಾಡದಿರುವುದು ಕಂಡುಬಂದಿದೆ' ಎಂದು ವಿಧಾನಸಭೆಗೆ ತಿಳಿಸಿದರು.

ತುಮಕೂರು ಜಿಲ್ಲೆಯಲ್ಲಿ 2,749, ಹಾಸನ ಜಿಲ್ಲೆಯಲ್ಲಿ 2,679, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1,527 ಮತ್ತು ರಾಮನಗರ ಜಿಲ್ಲೆಯಲ್ಲಿ 1,144 ಪ್ರಕರಣಗಳಲ್ಲಿ ಇನ್ನೂ ಖಾತೆಯಾಗಿಲ್ಲ ಎಂದು ಮಾಹಿತಿ ನೀಡಿದರು.

ಜಂಟಿ ಸರ್ವೆಯ ಭರವಸೆ: ಬಿಜೆಪಿಯ ಆರಗ ಜ್ಞಾನೇಂದ್ರ ಮಾತನಾಡಿ, 'ರಾಜ್ಯದಲ್ಲಿ ಈಗ ರೂಪಿಸಿರುವ ಬಗರ್ ಹುಕುಂ ಭೂ ಮಂಜೂರಾತಿ ನಿಯಮಗಳು ಜಟಿಲವಾಗಿವೆ. ಅಧಿಕಾರಿಗಳೇ ಎಲ್ಲ ಅರ್ಜಿಗಳನ್ನು ತಿರಸ್ಕರಿಸುತ್ತಿದ್ದಾರೆ. ಕಂದಾಯ– ಅರಣ್ಯ ಜಮೀನು ಜಂಟಿಯಾಗಿರುವ ಸರ್ವೆ ನಂಬರ್‌ಗಳಲ್ಲಿ ಜಂಟಿ ಸರ್ವೆ ಪೂರ್ಣಗೊಳ್ಳದಿದ್ದರೂ ಅರಣ್ಯದ ನೆಪದಲ್ಲಿ ಅರ್ಜಿ ತಿರಸ್ಕರಿಸಲಾಗುತ್ತಿದೆ' ಎಂದು ದೂರಿದರು.

'ಕಂದಾಯ– ಅರಣ್ಯ ಜಮೀನುಗಳು ಒಂದೇ ಸರ್ವೆ ನಂಬರ್‌ಗಳಲ್ಲಿ ಇದ್ದು, ಜಂಟಿ ಸರ್ವೆ ನಡೆಸಿ ಗಡಿ ಗುರುತಿಸದ ಪ್ರಕರಣಗಳಿದ್ದರೆ ನೇರವಾಗಿ ನನ್ನ ಗಮನಕ್ಕೆ ತನ್ನಿ. ತಕ್ಷಣವೇ ಜಂಟಿ ಸರ್ವೆ ನಡೆಸಲು ಕ್ರಮ ಕೈಗೊಳ್ಳುವೆ' ಎಂದು ಭರವಸೆ ನೀಡಿದರು.

'ಜ.1ರಿಂದ ಎಲ್ಲ ದಾಖಲೆಗಳ ಸ್ಕ್ಯಾನಿಂಗ್'

ಕಡತಗಳ ನಾಪತ್ತೆ ಮತ್ತು ಕಡತಗಳನ್ನು ಮುಚ್ಚಿಟ್ಟು ಅಕ್ರಮ ಎಸಗುವುದನ್ನು ತಡೆಯಲು 2025ರ ಜನವರಿ 1ರಿಂದ ರಾಜ್ಯದಲ್ಲಿರುವ ಭೂ ಮಂಜೂರಾತಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಿ, ಡಿಜಿಟಲ್ ರೂಪದಲ್ಲಿ ಸಂಗ್ರಹಿಸುವ ಪ್ರಕ್ರಿಯೆ ಆರಂಭವಾಗಲಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಬಗರ್ ಹುಕುಂ, ಭೂ ಸುಧಾರಣಾ ಕಾಯ್ದೆಯಡಿ ಭೂ ಮಂಜೂರಾತಿ, ಇನಾಂ ರದ್ಧತಿ ಕಾಯ್ದೆಯಡಿ ಮಂಜೂರು ಸೇರಿದಂತೆ ಎಲ್ಲ ಬಗೆಯ ಭೂ ಮಂಜೂರಾತಿಯ ದಾಖಲೆಗಳನ್ನೂ ಸ್ಕ್ಯಾನಿಂಗ್ ಮಾಡಲಾಗುವುದು. ಈವರೆಗೆ ಮುಚ್ಚಿಟ್ಟಿರುವ ಹಲವು ದಾಖಲೆಗಳು ಸ್ಕ್ಯಾನಿಂಗ್ ವೇಳೆ ಹೊರಬರಬಹುದು ಎಂಬ ನಿರೀಕ್ಷೆ ಇದೆ ಎಂದರು.

ಸುದ್ದಿ 2 ನಿಮಿಷ

ವಿಧಾನಸಭಾ ಸಭಾಧ್ಯಕ್ಷರಿಗೆ ₹45 ಲಕ್ಷ ವೆಚ್ಚದಲ್ಲಿ ಹೊಸ ಪೀಠ

ಸುವರ್ಣ ವಿಧಾನಸೌಧ (ಬೆಳಗಾವಿ): ಇಲ್ಲಿನ ವಿಧಾನಸಭೆಯ ಸಭಾಂಗಣದಲ್ಲಿ ಸಭಾಧ್ಯಕ್ಷರು ಆಸೀನರಾಗಲು ₹45 ಲಕ್ಷದ ವೆಚ್ಚದಲ್ಲಿ ಬೀಟೆ ಮರದ ಹೊಸ ಪೀಠವನ್ನು ಅಳವಡಿಸಲಾಗಿದೆ. ವಿಧಾನಮಂಡಲದ ಚಳಿಗಾಲದ ಅಧಿವೇಶನದ ಮೊದಲ ದಿನವಾದ ಸೋಮವಾರ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಹೊಸ ಪೀಠದಲ್ಲಿ ಕುಳಿತು ಕಲಾಪ ನಡೆಸಿದರು.

ಹೊಸ ಪೀಠ ಅಳವಡಿಸಿರುವ ಕುರಿತು ಸದನದಲ್ಲಿ ಪ್ರಕಟಿಸಿದ ಖಾದರ್, 'ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನಸಭೆಯಲ್ಲಿನ ಪೀಠದ ಪ್ರತಿರೂಪದಂತಿರುವ ಹೊಸ ಪೀಠವನ್ನು ಇಲ್ಲಿ ಅಳವಡಿಸಲಾಗಿದೆ. ಪೀಠದಲ್ಲಿ ಕುಳಿತು ನಾನು ಅದನ್ನು ಉದ್ಘಾಟಿಸಿದ್ದೇನೆ' ಎಂದರು.



ಕೆಂಗಲ್ ಹನುಮಂತಯ್ಯ ಅವರು ವಿಧಾನಸೌಧ ನಿರ್ಮಾಣದ ಸಂದರ್ಭದಲ್ಲಿ ತಮ್ಮ ಕನಸಿನಂತೆ ವಿಧಾನಸಭೆಯ ಅಧ್ಯಕ್ಷರ ಪೀಠವನ್ನು ರೂಪಿಸಿದ್ದರು. ಶಿವಮೊಗ್ಗ ಜಿಲ್ಲೆಯಿಂದ ಬೀಟೆ ಮರವನ್ನು ತರಿಸಿ, ಅದರಿಂದ ಪೀಠವನ್ನು ರಚಿಸಲಾಗಿತ್ತು. ಅದೇ ಮಾದರಿಯಲ್ಲಿ ಗಂಡಭೇರುಂಡ ಲಾಂಛನ, ಸಿಂಹ ಲಾಂಛನ, ಸೂರ್ಯಕಾಂತಿ ಹೂವಿನ ಚಿತ್ತಾರದ ಮೇಲ್ಭಾಗ, ಮಾವಿನಕಾಯಿಯ ಚಿತ್ರಗಳುಳ್ಳ ಹೊಸ ಪೀಠವನ್ನು ರಚಿಸಲಾಗಿದೆ.

'ಸಭಾಧ್ಯಕ್ಷರ ಹುದ್ದೆಗೆ ಸಂವಿಧಾನದಲ್ಲಿ ದೊಡ್ಡ ಗೌರವವಿದೆ. ಅದೇ ರೀತಿ ಪೀಠಕ್ಕೂ ಗೌರವವಿದೆ. ಈ ಕಾರಣಕ್ಕಾಗಿ ಬೆಂಗಳೂರಿನ ವಿಧಾನಸೌಧದ ವಿಧಾನಸಭೆಯ ಸಭಾಂಗಣದಲ್ಲಿ ಇರುವಂತಹ ಪೀಠ ನಿರ್ಮಿಸಲಾಗಿದೆ' ಎಂದು ಖಾದರ್ ವಿಧಾನಸಭೆಗೆ ತಿಳಿಸಿದರು.

'ಅಭಿವೃದ್ಧಿ ಚಾನೆಲ್ ಆನ್ ಮಾಡಿ...'

ಸುವರ್ಣ ವಿಧಾನಸೌಧ (ಬೆಳಗಾವಿ): 'ಎಲ್ಲ ಚುನಾವಣೆಗಳೂ ಮುಗಿದವು. ಇನ್ನೂ ರಾಜಕೀಯ ಬೇಡ. ಚುನಾವಣೆ ಚಾನೆಲ್ ಆಫ್ ಮಾಡಿ, ಅಭಿವೃದ್ಧಿ ಚಾನೆಲ್ ಆನ್ ಮಾಡಿ' ಎಂದು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ಅವರು ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರಿಗೆ ಸಲಹೆ ನೀಡಿದರು.

ನವೆಂಬರ್‌ನಲ್ಲಿ ನಡೆದ ಉಪ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾಗಿರುವ ಈ. ಅನ್ನಪೂರ್ಣ, ಯಾಸೀರ್ ಅಹಮದ್ ಪಠಾಣ್ ಮತ್ತು ಸಿ.ಪಿ. ಯೋಗೇಶ್ವರ್ ಅವರು ವಿಧಾನಸಭೆಯಲ್ಲಿ ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ಆ ಸಂದರ್ಭದಲ್ಲಿ ರಾಜಕೀಯ ಹೇಳಿಕೆಗಳೂ ತೂರಿ ಬರಲಾರಂಭಿಸಿದವು.

ಮಧ್ಯ ಪ್ರವೇಶಿಸಿದ ಸ್ಪೀಕರ್, 'ಚುನಾವಣೆಗಳು, ರಾಜಕೀಯ ಎಲ್ಲ ಮುಗಿದವು. ಇದೊಂದು ರೀತಿ ಟೆಲಿವಿಷನ್ ಚಾನೆಲ್ ಬದಲಿಸಿದಂತೆ. ಸಿನಿಮಾ ಚಾನೆಲ್, ಸುದ್ದಿ ಚಾನೆಲ್ ಒಂದರ ನಂತರ ಒಂದು ಬದಲಿಸುತ್ತೇವಲ್ಲಾ ಹಾಗೆ. ಈಗ ಚುನಾವಣೆ ಚಾನೆಲ್ ಬಂದ್ ಮಾಡಿ, ಅಭಿವೃದ್ಧಿ ಚಾನೆಲ್ ಆನ್ ಮಾಡಿ' ಎಂದರು.

ವಿಧಾನಮಂಡಲದ ಚಳಿಗಾಲದ ಅಧಿವೇಶನದ ಮೊದಲ ದಿನ ಕಲಾಪ ಆರಂಭವಾಗುತ್ತಿದ್ದಂತೆಯೇ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಮೂವರು ಹೊಸ ಶಾಸಕರಿಗೆ ಪ್ರಮಾಣ ಬೋಧಿಸಿದರು. ಅನ್ನಪೂರ್ಣ ಮತ್ತು ಯೋಗೇಶ್ವರ್ ಅವರು ಭಗವಂತನ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರೆ, ಯಾಸೀರ್ ಅಹಮದ್ ಅವರು ತಂದೆ–ತಾಯಿ ಮತ್ತು ಸಂವಿಧಾನದ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರು.

ಯಾಸಿರ್ ಅಹಮದ್ ಪ್ರಮಾಣ ವಚನ ಸ್ವೀಕರಿಸಲು ಬರುತ್ತಿದ್ದಂತೆಯೇ 'ಇದು ಬಿಜೆಪಿಯಿಂದ ಗೆದ್ದದ್ದು' ಎಂದು ಕಾಂಗ್ರೆಸ್‌ನ ಶಾಸಕರು ಜೋರಾಗಿ ಹೇಳಿದರು. ಯೋಗೇಶ್ವರ್ ಪ್ರಮಾಣವಚನಕ್ಕೆ ಬಂದಾಗ, 'ಯತ್ನಾಳ್ ಸರ್, ಈಗ ಎಲ್ಲರಿಗಿಂತ ನಿಮಗೆ ಹೆಚ್ಚು ಖುಷಿಯಾಗಿದೆ' ಎಂದು ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಹೇಳಿದರು.

ಗ್ಯಾಲರಿಯಲ್ಲಿ ಪತಿಯ ಸಂತಸ: ಅನ್ನಪೂರ್ಣ ಅವರು ಪ್ರಮಾಣವಚನ ಸ್ವೀಕರಿಸುವಾಗ ಬಳ್ಳಾರಿ ಸಂಸದರೂ ಆಗಿರುವ ಅವರ ಪತಿ ಈ. ತುಕಾರಾಂ ಅವರು ಮಾಧ್ಯಮ ಪ್ರತಿನಿಧಿಗಳ ಗ್ಯಾಲರಿಯಲ್ಲಿದ್ದು, ಚಪ್ಪಾಳೆ ಹೊಡೆದು ಸಂಭ್ರಮಿಸಿದರು.

ಆಯುರ್ವೇದ ವಿ.ವಿ ಸದ್ಯಕ್ಕಿಲ್ಲ

ರಾಜ್ಯದ ಪ್ರಥಮ ಆಯುರ್ವೇದ ವಿಶ್ವವಿದ್ಯಾಲಯವನ್ನು ಶಿವಮೊಗ್ಗದಲ್ಲಿ ಸ್ಥಾಪಿಸಲು ಹಿಂದಿನ ಸರ್ಕಾರ ನಿರ್ಧಾರ ತೆಗೆದುಕೊಂಡಿತ್ತು. ಆದರೆ, ಸದ್ಯಕ್ಕೆ ವಿಶ್ವವಿದ್ಯಾಲಯ ಆರಂಭಿಸುವ ಯಾವುದೇ ತರಾತುರಿ ಇಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಬಿಜೆಪಿಯ ಡಿ.ಎಸ್. ಅರುಣ್ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಹಿಂದಿನ ಸರ್ಕಾರ ವಿಶ್ವವಿದ್ಯಾಲಯಕ್ಕೆ ₹20 ಕೋಟಿ ನೀಡಿತ್ತು. 8.10 ಎಕರೆ ಮೀಸಲಿಡಲಾಗಿತ್ತು. ಒಂದು ವಿಶ್ವವಿದ್ಯಾಲಯ ಸ್ಥಾಪನೆಗೆ ಕನಿಷ್ಠ 100 ಎಕರೆ ಬೇಕಿದೆ. ಔಷಧೀಯ ಸಸ್ಯಗಳ ಉದ್ಯಾನಕ್ಕಾಗಿಯೇ 50 ಎಕರೆ ಅಗತ್ಯವಿದೆ. ಅಲ್ಲದೇ, ಈಗಿರುವ ವಿಶ್ವವಿದ್ಯಾಲಯಗಳೇ ಅವ್ಯವಸ್ಥೆಯ ತಾಣವಾಗಿವೆ. ಅದಕ್ಕೆ ಮತ್ತೊಂದು ವಿಶ್ವವಿದ್ಯಾಲಯ ಸೇರ್ಪಡೆ ಬೇಡ. ಸ್ಥಾಪನೆಯಿಂದ ಆಗುವ ಪ್ರಯೋಜನ, ಸಮಸ್ಯೆಗಳ ಕುರಿತು ಸುದೀರ್ಘವಾಗಿ ಚರ್ಚಿಸಬೇಕಿದೆ. ಸದ್ಯಕ್ಕೆ ಆಯುರ್ವೇದ ವಿಶ್ವವಿದ್ಯಾಲಯ ಸ್ಥಾಪನೆ ಇಲ್ಲ ಎಂದರು.

ಪ್ರೌಢಶಾಲಾ ಶಿಕ್ಷಕರಿಗೆ ಶೀಘ್ರ ಬಡ್ತಿ

ಪ್ರೌಢಶಾಲೆಗಳ ಅರ್ಹ ಶಿಕ್ಷಕರಿಗೆ ಮೂರು ತಿಂಗಳ ಒಳಗೆ ಸರ್ಕಾರಿ ಪಿಯು ಕಾಲೇಜುಗಳಿಗೆ ಬಡ್ತಿ ನೀಡಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಬಿಜೆಪಿಯ ಎಸ್.ವಿ. ಸಂಕನೂರ ಪ್ರಶ್ನೆಗೆ ಉತ್ತರಿಸಿದ ಅವರು, ನಿಯಮದಂತೆ ಶೇ 25ರಷ್ಟು ಉಪನ್ಯಾಸಕರ ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಲಾಗುತ್ತದೆ. ಆದರೆ, ರಾಜ್ಯದ ಎಲ್ಲ ಪ್ರೌಢಶಾಲೆಗಳ ಶಿಕ್ಷಕರಿಗೆ ಏಕ ರೀತಿಯ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸುವ ಕಾರ್ಯ ನಡೆಯುತ್ತಿದೆ. ಕಳೆದ 12 ವರ್ಷಗಳಿಂದ ಬಡ್ತಿ ನೀಡಿರಲಿಲ್ಲ. ಎಲ್ಲ ಪ್ರಕ್ರಿಯೆಗಳನ್ನು ತ್ವರಿತವಾಗಿ ಮುಗಿಸಿ, ಬಡ್ತಿ ನೀಡಲಾಗುತ್ತದೆ ಎಂದು ಭರವಸೆ ನೀಡಿದರು.

ಅರಣ್ಯಭೂಮಿ ಗುತ್ತಿಗೆ: ₹1,492 ಕೋಟಿ ಬಾಕಿ

ಸ್ವಾತಂತ್ರ್ಯಪೂರ್ವದಲ್ಲಿ ಕಾಫಿ, ರಬ್ಬರ್ ಮತ್ತಿತರ ಬೆಳೆ ಬೆಳೆಯುವ ಉದ್ದೇಶಕ್ಕೆ ವಿವಿಧ ಕಂಪನಿಗಳಿಗೆ ಗುತ್ತಿಗೆ ನೀಡಿದ್ದ ಅರಣ್ಯ ಭೂಮಿಯ ಬಾಕಿ ಮೊತ್ತ ₹1,492 ಕೋಟಿ ಇದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಬಿಜೆಪಿಯ ಎಂ.ಪಿ. ಕುಶಾಲಪ್ಪ ಪ್ರಶ್ನೆಗೆ ಉತ್ತರಿಸಿದ ಅವರು, ಬ್ರಿಟಿಷ್ ಸರ್ಕಾರ 1930ರಲ್ಲಿ ಮರ್ಕೇರಾ, ನೀಲಾಂಬುರ್, ಟಾಟಾ ಥಾಮ್‌ಸನ್ ಮತ್ತಿತರ ಕಂಪನಿಗಳಿಗೆ ಸಾವಿರಾರು ಎಕರೆ ಅರಣ್ಯ ಭೂಮಿಯನ್ನು 999 ವರ್ಷಗಳಿಗೆ ಗುತ್ತಿಗೆ ನೀಡಿತ್ತು. ನಂತರ ರಾಜ್ಯ ಸರ್ಕಾರ ಗುತ್ತಿಗೆ ಅವಧಿಯನ್ನು 99 ವರ್ಷಗಳಿಗೆ ಮರುನಿಗದಿ ಮಾಡಿದೆ. ಕೆಲ ಕಂಪನಿಗಳು ಸುಪ್ರೀಂಕೋರ್ಟ್‌ನಲ್ಲಿ ದಾವೆ ಹೂಡಿವೆ. ಪ್ರಕರಣ ಇತ್ಯರ್ಥಕ್ಕೆ ಸರ್ಕಾರ ಕ್ರಮಕೈಗೊಂಡಿದೆ. ಬಾಕಿ ವಸೂಲಿಗೆ ಹಾಗೂ ಅರಣ್ಯಭೂಮಿ ಮರು ಸ್ವಾಧೀನಕ್ಕೆ ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದೆ ಎಂದರು.

ಗುರುಗಳಾದ ಸಭಾಧ್ಯಕ್ಷರು!

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಕಾಂಗ್ರೆಸ್‌ನ ಯತೀಂದ್ರ ಅವರು ರಾಜ್ಯದ ಆಸ್ಪತ್ರೆಗಳಲ್ಲಿನ ಆಮ್ಲಜನಕ ಘಟಕಗಳ ಬಗ್ಗೆ ಆರೋಗ್ಯ ಸಚಿವರಿಗೆ ಪ್ರಶ್ನೆ ಕೇಳುವಾಗ, ಸಭಾಧ್ಯಕ್ಷರನ್ನು 'ಗುರುಗಳೇ' ಎಂದು ಸಂಬೋಧಿಸಿದರು. ಆಗ ಸಭಾಧ್ಯಕ್ಷರು ಸೇರಿದಂತೆ ಇಡೀ ಸದನ ನಗೆಗಡಲಲ್ಲಿ ತೇಲಿತು. ತಕ್ಷಣ ಯತೀಂದ್ರ ಮತ್ತೆ 'ಸಭಾಧ್ಯಕ್ಷರೇ' ಎಂದು ಸಂಬೋಧಿಸಿ, ಮಾತು ಮುಂದುವರಿಸಿದರು.

ಮಹಾ ಮೇಳಾವ್ ವಿಫಲ: ಮುಖಂಡರ ವಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿಧಾನಮಂಡಲ ಅಧಿವೇಶನ ವಿರೋಧಿಸಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ನಗರದಲ್ಲಿ ಸೋಮವಾರ ನಡೆಸಲು ಯೋಜಿಸಿದ್ದ ಮಹಾಮೇಳಾವ್ ವಿಫಲವಾಯಿತು. ಸಮಾವೇಶ ಮಾಡಲು ಮುಂದಾದ ಬೆರಳೆಣಿಕೆಯಷ್ಟು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಪೊಲೀಸರ ಬಿಗಿ ಭದ್ರತೆ ಮಧ್ಯೆಯೂ ಕ್ಯಾಂಪ್ ಪ್ರದೇಶ, ಕೇಳಕರ ಬಾಗ್ ಹಾಗೂ ಕಿರ್ಲೋಸ್ಕರ್ ರಸ್ತೆಯಿಂದ ಸಂಭಾಜಿ ವೃತ್ತದ ಕಡೆಗೆ ಗುಂಪು ಗುಂಪಾಗಿ ಬಂದ ಎಂಇಎಸ್‌ನ 30ಕ್ಕೂ ಅಧಿಕ ಕಾರ್ಯಕರ್ತರನ್ನು ಪೊಲೀಸರು ತಡೆದರು.

'ಬೆಳಗಾವಿ, ನಿಪ್ಪಾಣಿ, ಕಾರವಾರ, ಬೀದರ್, ಭಾಲ್ಕಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಿ' ಹಾಗೂ 'ನಾವು ಇರುವುದಾದರೆ ಮಹಾರಾಷ್ಟ್ರದಲ್ಲಿ ಇಲ್ಲದಿದ್ದರೆ ಜೈಲಿನಲ್ಲಿ' ಎಂದು ಕಾರ್ಯಕರ್ತರು ಮಹಾರಾಷ್ಟ್ರ ಪರ ಘೋಷಣೆ ಕೂಗಿದರು.

ಮಹಾಮೇಳಾವ್ ತಡೆಯುವ ದೃಷ್ಟಿಯಿಂದ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಎಂಇಎಸ್ ಕಾರ್ಯಾಧ್ಯಕ್ಷ ಮನೋಹರ ಕಿಣೇಕರ ಹಾಗೂ ಖಜಾಂಚಿ ಪ್ರಕಾಶ ಮರಗಾಲೆ ಸಂಭಾಜಿ ವೃತ್ತದ ಕಡೆ ತೆರಳುತ್ತಿದ್ದಾಗ, ರಾಮಲಿಂಗಖಿಂಡ ಗಲ್ಲಿಯ ಎಂಇಎಸ್ ಕಚೇರಿ ಬಳಿ ಪೊಲೀಸರು ವಶಕ್ಕೆ ಪಡೆದರು. ಮಾಜಿ ಶಾಸಕ ದಿಗಂಬರ ಪಾಟೀಲ ಅವರನ್ನು ಸಂಭಾಜಿ ವೃತ್ತದಲ್ಲಿ ವಶಕ್ಕೆ ಪಡೆಯಲಾಯಿತು.

ಮಹಾಮೇಳಾವ್ ಬೆಂಬಲಿಸಿ ಬೆಳಗಾವಿಗೆ ಬರುತ್ತಿದ್ದ ಶಿವಸೇನಾ (ಉದ್ಧವ್ ಠಾಕ್ರೆ ಬಣ) ಕೊಲ್ಹಾಪುರ ಜಿಲ್ಲಾ ಘಟಕದ ಅಧ್ಯಕ್ಷ ವಿಜಯ ದೇವಣೆ ಹಾಗೂ ಅವರ ಸಂಗಡಿಗರನ್ನು ನಿಪ್ಪಾಣಿ ತಾಲ್ಲೂಕಿನ ಕೊಗನೊಳ್ಳಿ ಚೆಕ್‌ಪೋಸ್ಟ್ ಪುಣೆ– ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ಪೊಲೀಸರು ಬಂಧಿಸಿದರು.



ನಿಪ್ಪಾಣಿ ತಾಲ್ಲೂಕಿನ ಕೊಗನೊಳ್ಳಿ ಬಳಿ ಸೋಮವಾರ ಕರ್ನಾಟಕ–ಮಹಾರಾಷ್ಟ್ರ ಗಡಿಯಲ್ಲಿ ಶಿವಸೇನಾ (ಉದ್ಧವ್ ಠಾಕ್ರೆ ಬಣ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಆದಿತ್ಯ ಠಾಕ್ರೆ ಅವರದು ಹುಚ್ಚುತನದ ಹೇಳಿಕೆ. ಬೆಳಗಾವಿ ಯಾವತ್ತಿದ್ದರೂ ರಾಜ್ಯದ ಅವಿಭಾಜ್ಯ ಅಂಗ. ವಿನಾಕಾರಣ ಸಮುದಾಯದ ಶಾಂತಿ ಕದಡಬಾರದು
ಲಕ್ಷ್ಮಣ ಸವದಿ, ಶಾಸಕ

'ಬೆಳಗಾವಿಯನ್ನು ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸಿ'



ಆದಿತ್ಯ ಠಾಕ್ರೆ

ಪುಣೆ (ಪಿಟಿಐ): ಬೆಳಗಾವಿಯಲ್ಲಿ ಮರಾಠಿ ಭಾಷಿಕರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಹೀಗಾಗಿ, ಕೇಂದ್ರ ಸರ್ಕಾರವು ತಕ್ಷಣವೇ ಮಧ್ಯ ಪ್ರವೇಶಿಸಿ, ಬೆಳಗಾವಿಯನ್ನು 'ಕೇಂದ್ರಾಡಳಿತ ಪ್ರದೇಶ'ವೆಂದು ಘೋಷಿಸಬೇಕು ಎಂದು ಶಿವಸೇನಾ (ಯುಬಿಟಿ) ನಾಯಕ ಆದಿತ್ಯ ಠಾಕ್ರೆ ಒತ್ತಾಯಿಸಿದ್ದಾರೆ.

ಮುಂಬೈನಲ್ಲಿ ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ಮಹಾರಾಷ್ಟ್ರದಲ್ಲಿ ನೂತನ ಸರ್ಕಾರ ರಚನೆಯ ಸಂಭ್ರಮ ನಡೆಯುತ್ತಿದ್ದರೆ, ಬೆಳಗಾವಿಯಲ್ಲಿ ಪರಿಸ್ಥಿತಿ ತೀರಾ ಹದಗೆಟ್ಟಿದೆ' ಎಂದು ಹೇಳಿದರು.

'ಬೆಳಗಾವಿ ಭಾಗದಲ್ಲಿ ಪರಿಸ್ಥಿತಿ ವಿಕೋಪದ ಹಂತಕ್ಕೆ ತಿರುಗಿದ್ದು, ನಮ್ಮ ಪಕ್ಷದ ಕಾರ್ಯಕರ್ತರನ್ನು ವಶಕ್ಕೆ ಪಡೆಯಲಾಗಿದೆ. ಮಹಾರಾಷ್ಟ್ರದ ಈ ಹಿಂದಿನ ಮುಖ್ಯಮಂತ್ರಿ (ಏಕನಾಥ ಶಿಂದೆ), ಮರಾಠಿ ಭಾಷಿಕರು ನೆಲಸಿರುವ ವಿವಾದಿತ ಪ್ರದೇಶಗಳಿಗೆ ಹೆಚ್ಚಿನ ಅನುದಾನ ನೀಡುವುದಾಗಿ ಹೇಳಿದ್ದರು. ಆ ಭರವಸೆ ಏನಾಯಿತು' ಎಂದು ಪ್ರಶ್ನಿಸಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು, ಬೆಳಗಾವಿಯನ್ನು ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸಲು ಸಿದ್ಧವಿದೆಯೇ ಎಂದು ಪ್ರಶ್ನಿಸಿದ ಅವರು, 'ಬೆಳಗಾವಿ ಕೇಂದ್ರಾಡಳಿತ ಪ್ರದೇಶವಾಗಬೇಕೆಂಬ ನಮ್ಮ ನಿಲುವು ಎಂದಿಗೂ ಬದಲಾಗದು' ಎಂದು ತಿಳಿಸಿದರು.

ಬಸ್ ಚಾಲಕರ ಕೈ ಕಟ್ಟಿಹಾಕಿದ ರೈತರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಲ್ಲಿನ ಸುವರ್ಣ ವಿಧಾನಸೌಧ ಮಾರ್ಗದ ಬಳಿ ರೈತರು ಸೋಮವಾರ ತೀವ್ರ ಪ್ರತಿಭಟನೆ ನಡೆಸಿದರು. ರಾಷ್ಟ್ರೀಯ ಹೆದ್ದಾರಿ ಪಕ್ಕದ ಸರ್ವಿಸ್ ರಸ್ತೆ ತಡೆ ಮಾಡಿದ ರೈತರನ್ನು ಎಳೆದೊಯ್ದು ಪೊಲೀಸರು ಬಸ್ ಹತ್ತಿಸಿದರು. ಇದರಿಂದ ಆಕ್ರೋಶಗೊಂಡ ರೈತರು ಬಸ್ ಚಾಲಕರ ಕೈಗಳನ್ನು ಹಸಿರು ಟವಲ್‌ನಿಂದ ಕಟ್ಟಿಹಾಕಿದರು.

ರಾಜ್ಯ ರೈತ ಸಂಘದ ಕಾರ್ಯಕರ್ತರು ಹಲಗಾ ಗ್ರಾಮದಿಂದ ಸುವರ್ಣ ಸೌಧದವರೆಗೆ ಜಾಥಾ ಆರಂಭಿಸಿದರು. ಇದಕ್ಕೆ ಪೊಲೀಸರು ಅವಕಾಶ ಕೊಡಲಿಲ್ಲ. ರೊಚ್ಚಿಗೆದ್ದ ರೈತರು ಧರಣಿ ಕುಳಿತರು. ಆಗ ಎಲ್ಲರನ್ನೂ ಎತ್ತಿಕೊಂಡು ಬಸ್‌ನಲ್ಲಿ ಹತ್ತಿಸಿ ಸುವರ್ಣ ಸೌಧದ ಪ್ರತಿಭಟನಾ ಸ್ಥಳಕ್ಕೆ ಬಿಡಲು ಮುಂದಾದರು.

ಬಸ್ಸಿನಲ್ಲೂ ಪ್ರತಿಭಟನೆ ಮುಂದುವರಿಸಿದ ರೈತ ನಾಯಕರು, ಟವಲ್‌ಗಳಿಂದ ಎರಡು ಬಸ್‌ಗಳ ಚಾಲಕರ ಕೈಗಳನ್ನು ಕಟ್ಟಿಹಾಕಿದರು. ಬಸ್ಸಿನ ಸ್ಟೇರಿಂಗ್ ಕೂಡ ಕಟ್ಟಿ ಓಡಿಸದಂತೆ ತಡೆದರು.

ಬಳಿಕ, ಸುವರ್ಣಸೌಧದ ಬಳಿ ಇಡೀ ದಿನ ಧರಣಿ ನಡೆಸಿದರು. ಸಂಜೆ ಸ್ಥಳಕ್ಕೆ ಬಂದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮನವಿ ಪಡೆದರು. ಈ ವೇಳೆ ರೈತರು ಅವರನ್ನು ಸುತ್ತುವರಿದು ಸರ್ಕಾರದ ಕ್ರಮದ ವಿರುದ್ಧ ಹರಿಹಾಯ್ದರು.



ಬೆಳಗಾವಿಯ ಸುವರ್ಣ ವಿಧಾನಸೌಧದ ಮುಂದೆ ಪ್ರತಿಭಟನೆ ನಡೆಸಲು ಹೊರಟ ರೈತರನ್ನು ಬಸ್ಸಿನಲ್ಲಿ ಹತ್ತಿಸಿದಾಗ, ಟವಲ್‌ಗಳಿಂದ ಚಾಲಕರ ಕೈ ಕಟ್ಟಿ ಹಾಕಿದರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ವಾಹನ ನಿರ್ಬಂಧ ಸರಿಯಲ್ಲ: ಸಚಿವೆ

ಬೆಳಗಾವಿ: 'ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಟ್ರ್ಯಾಕ್ಟರ್ ರ್ಯಾಲಿಗೆ ಜಿಲ್ಲಾಡಳಿತ ನಿರ್ಬಂಧ ವಿಧಿಸಕೂಡದು. ಪ್ರಜಾಪ್ರಭುತ್ವದಲ್ಲಿ ಅದು ಸರಿಯಲ್ಲ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪ್ರತಿಕ್ರಿಯಿಸಿದರು.

ನಗರದಲ್ಲಿ ಸೋಮವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, 'ಈಗ ಕಬ್ಬು ಸಾಗಣೆ ಹಂಗಾಮು ಆಗಿರುವುದರಿಂದ ಟ್ರ್ಯಾಕ್ಟರುಗಳು ಹೆಚ್ಚು ಓಡಾಡುತ್ತಿವೆ. ಅಧಿವೇಶನದ ವೇಳೆ ದುರ್ಘಟನೆ ಆಗಬಾರದು ಎಂಬ ಕಾರಣಕ್ಕೆ ಮುಂಜಾಗ್ರತೆ ದೃಷ್ಟಿಯಿಂದ ಈ ಕ್ರಮ ಕೈಗೊಂಡಿರಬಹುದು' ಎಂದರು.

'ಪಂಚಮಸಾಲಿಗರ 2ಎ ಮೀಸಲಾತಿ ಹೋರಾಟಕ್ಕೆ ನಾನು ಮುಂಚೂಣಿಯಲ್ಲಿ ಇದ್ದವಳು. ಈಗಲೂ ಇದ್ದೇನೆ. ಮಂಗಳವಾರದ ಹೋರಾಟದಲ್ಲಿ ಪಾಲ್ಗೊಳ್ಳುತ್ತೇನೆ' ಎಂದೂ ಹೇಳಿದರು.

'ನಾನು ಸಚಿವೆ ಆಗಿರುವ ಕಾರಣ ಕಲಾಪದ ವೇಳೆ ಧರಣಿ ಮಾಡಲು ಸಾಧ್ಯವಿಲ್ಲ. ಯಾರಾದರೂ ವಿಷಯ ಪ್ರಸ್ತಾಪಿಸಿದರೆ ಧ್ವನಿಯಾಗಿ ನಿಲ್ಲುತ್ತೇನೆ' ಎಂದರು.

2ಎ ಮೀಸಲಾತಿಗಾಗಿ 5,000 ಟ್ರ್ಯಾಕ್ಟರ್ ರ್ಯಾಲಿಗೆ ಪಂಚಮಸಾಲಿಗರು ಸನ್ನದ್ಧ

ಹೋರಾಟ ತಡೆಯುವ ಜಿಲ್ಲಾಧಿಕಾರಿ ಮೂರ್ಖ: ಯತ್ನಾಳ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಪಂಚಮಸಾಲಿ ಸಮಾಜದ ಹೋರಾಟ ಹತ್ತಿಕ್ಕಲು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಸಂಚು ನಡೆಸಿದ್ದಾನೆ. ಹೋರಾಟಗಾರರ ವಾಹನಗಳ ಸಂಚಾರ ನಿಷೇಧ ಮಾಡಿದ್ದಾನೆ. ಈ ಜಿಲ್ಲಾಧಿಕಾರಿ ಮೂರ್ಖ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಏಕವಚನದಲ್ಲೇ ತರಾಟೆ ತೆಗೆದುಕೊಂಡರು.

'ಉದ್ದೇಶಪೂರ್ವಕವಾಗಿ ಒಂದು ಸಮುದಾಯದ ಹೋರಾಟ ಹತ್ತಿಕ್ಕುತ್ತಿದ್ದಾನೆ. ಹೋರಾಟ ತಡೆಯಲು ಕರ್ಫ್ಯೂ ಹೇರುತ್ತೇನೆ ಅಂದಿದ್ದಾನೆ. ಕರ್ಫ್ಯೂ ಹೇರಿದ ಮೇಲೆ ಎಲ್ಲ ಶಾಸಕರು, ಅಧಿಕಾರಿಗಳ ವಾಹನಗಳನ್ನೂ ನಿರ್ಬಂಧಿಸಬೇಕು. ನಿನಗೆ ಅಷ್ಟು ಸಾಮರ್ಥ್ಯವಿದ್ದರೆ ಎಲ್ಲರ ವಾಹನ ತಡೆ. ಯಾರೊಬ್ಬರೂ ಸುವರ್ಣ ವಿಧಾನಸೌಧಕ್ಕೆ ಹೋಗಬಾರದು' ಎಂದು ಅವರು ನಗರದಲ್ಲಿ ಸೋಮವಾರ ಮಾಧ್ಯಮದವರ ಮುಂದೆ ಕಿಡಿಕಾರಿದರು.

'ಈ ಜಿಲ್ಲಾಧಿಕಾರಿ ಯಾರ ಬೆಂಬಲದಿಂದ ಇಷ್ಟು ಅಹಂಕಾರ ತೋರುತ್ತಿದ್ದಾನೆಂದು ಗೊತ್ತಿದೆ. ನಗರದ ಸ್ಮಾರ್ಟ್‌ಸಿಟಿಯಲ್ಲಿ ಬರೀ ತಮ್ಮದೇ ಸಮುದಾಯದವರನ್ನು ತಂದು ಇಟ್ಟುಕೊಂಡಿದ್ದಾನೆ. ಎಲ್ಲವನ್ನೂ ನಾವು ಗಮನಿಸುತ್ತಿದ್ದೇವೆ. ಅಧಿವೇಶನದಲ್ಲಿ ಹೋರಾಟ ತಡೆದರೆ ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡುತ್ತೇವೆ' ಎಂದು ತಿಳಿಸಿದರು.

'ಇದು ಬರೀ ಪಂಚಮಸಾಲಿಗರ ಹೋರಾಟವಲ್ಲ. ಜೈನರು, ಮರಾಠ, ಲಿಂಗಾಯತ, ಕ್ರಿಶ್ಚಿಯನ್ ಸಮುದಾಯದವರಿಗೂ ಅನುಕೂಲವಿದೆ. ಕುರುಬ ಸಮಾಜ ಪರಿಶಿಷ್ಟ ಪಂಗಡಕ್ಕೆ ಹೋದಾಗ ಅವರಿಗೆ ಸೂಕ್ತ ಮೀಸಲಾತಿ ಸಿಗುತ್ತದೆ. ಹಾಲುಮತ ಸಮಾಜ ಬಹಳ ದೊಡ್ಡದು. ಅವರ ಪಾಲನ್ನು ನಾವು ಕಸಿದುಕೊಳ್ಳಲು ತಯಾರಿಲ್ಲ. ಸಂವಿಧಾನದಲ್ಲಿ ಧರ್ಮ ಆಧರಿತ ಮೀಸಲಾತಿ ಇಲ್ಲ. ಜಾತಿ ಆಧರಿಸಿ ನೀಡಬೇಕು ಎಂದಿದೆ. ಆದರೆ, ಕಾಂಗ್ರೆಸ್ಸಿಗರು ಮುಸ್ಲಿಮರಿಗೆ ಪ್ರವರ್ಗ–1, 2ಎ ಮತ್ತು ಅಲ್ಪಸಂಖ್ಯಾತರ ಮೀಸಲಾತಿ ಎಂದು ಮೂರು ಕಡೆ ಲಾಭ ಮಾಡುತ್ತಿದ್ದಾರೆ. ಇದನ್ನು ತೆಗೆಯಿರಿ' ಎಂದು ಆಗ್ರಹಿಸಿದರು.

'ಮೀಸಲಾತಿ ಗೊಂದಲ ನಿವಾರಣೆಗೆ ಪ್ರಧಾನಿ ಮೋದಿ ಹಾಗೂ ಗೃಹಸಚಿವ ಅಮಿತ್ ಶಾ ಅವರು ಹೊಸ ಸೂತ್ರ ಕಂಡುಹಿಡಿದರು. 2ಸಿ ಒಕ್ಕಲಿಗರಿಗೆ, 2ಡಿ ಉಳಿದೆಲ್ಲ ಲಿಂಗಾಯತ, ಮರಾಠ, ಜೈನ, ಕ್ರಿಶ್ಚಿಯನ್ನರಿಗೆ ಕೊಟ್ಟಿದ್ದಾರೆ. ಪಂಚಮಸಾಲಿ ಸಮುದಾಯಕ್ಕೆ ಶೇ 1ರಷ್ಟು ಸಿಕ್ಕರೂ ಸಾಕು. ನಮ್ಮ ಮಕ್ಕಳಿಗೆ ಶಿಕ್ಷಣ, ಉದ್ಯೋಗ ಸಿಗುತ್ತದೆ' ಎಂದರು.

ಜಿಲ್ಲಾಧಿಕಾರಿ ನಮ್ಮ ಮನವೊಲಿಸಲು ಯತ್ನಿಸಿದ್ದಾರೆ. ನಾವು ಒಪ್ಪುವುದಿಲ್ಲ. ಮಂಗಳವಾರ 5,000 ಟ್ರ್ಯಾಕ್ಟರ್ ರ್ಯಾಲಿ ನಡೆಯುವುದು ಖಚಿತ
ಬಸವಜಯ ಮೃತ್ಯುಂಜಯ ಸ್ವಾಮೀಜಿ ಕೂಡಲಸಂಗಮ ಪೀಠ

2ಎ ಮೀಸಲಾತಿಗಾಗಿ ಪಂಚಮಸಾಲಿ ಸಮುದಾಯದವರು ಮಾಡುವ ಹೋರಾಟಕ್ಕೆ ಬಿಜೆಪಿ ಬೆಂಬಲ ನೀಡಲಿದೆ. ಹೋರಾಟ ಹತ್ತಿಕ್ಕುವ ಸರ್ಕಾರದ ಕಿವಿ ಹಿಂಡುತ್ತೇವೆ
ಬಿ.ವೈ.ವಿಜಯೇಂದ್ರ ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಮಂಗಳವಾರ, ಡಿಸೆಂಬರ್ 10, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 341 | ಪುಟ 16

www.prajavani.net


prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ನಾವು ತಿನ್ನುವ ಆಹಾರ ನಮ್ಮ ಆರೋಗ್ಯದ ಜತೆಗೆ ನಮ್ಮ ಕರುಳಿನ ಸೂಕ್ಷ್ಮಜೀವಿಗಳ ಆರೋಗ್ಯವನ್ನೂ ಕಾಪಾಡಬೇಕು



ವಿದೇಶ ವಿದ್ಯಮಾನ

ಜನಾಕ್ರೋಶಕ್ಕೆ ಸರ್ಕಾರಗಳು ಪತನ

ಎಎಪಿ: 16 ಶಾಸಕರಿಗೆ ಟಿಕೆಟ್ ನಿರಾಕರಣೆ 6

‘ಬಾಡೂಟ’ಕ್ಕಾಗಿ ಮೊಟ್ಟೆ 30ದು ಪ್ರತಿಭಟನೆ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,508	24,619	₹80,230 (ಬೆಂಗಳೂರು)	₹95,800 (ಬೆಂಗಳೂರು)	84.86

ವಿಧಾನಮಂಡಲ ಅಧಿವೇಶನದ ಮೊದಲ ದಿನವೇ ವಿಪಕ್ಷದ ಬಿಕ್ಕಟ್ಟು ಬಯಲು

ಬಿಜೆಪಿ ಬಿರುಕು: ಸರ್ಕಾರದ ಮೇಲುಗೈ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣವಿಧಾನಸೌಧ): ಸೋಮವಾರ ಇಲ್ಲಿ ಆರಂಭವಾದ ವಿಧಾನಮಂಡಲದ ಅಧಿವೇಶನದ ಮೊದಲ ದಿನವೇ ಪ್ರಮುಖ ವಿರೋಧ ಪಕ್ಷ ಬಿಜೆಪಿಯ ನಾಯಕರ ಮಧ್ಯದ ಭಿನ್ನಮತ ಪ್ರದರ್ಶನಕ್ಕೆ ವಿಧಾನಸಭೆ ವೇದಿಕೆಯಾಯಿತು. ಪ್ರತಿಪಕ್ಷದ ನಾಯಕರ ಮಧ್ಯೆ ಇರುವ ಒಮ್ಮತದ ಕೊರತೆಯ ಲಾಭ ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಿಜೆಪಿಯ ಹೋರಾಟದ ಕಸುವನ್ನು ಕಿತ್ತುಕೊಳ್ಳುವಲ್ಲಿ ಯಶಸ್ವಿಯಾದರು.

ವಕ್ಫ್ ಮಂಡಳಿಯು ಆಸ್ತಿ ಮಾಲೀಕರಿಗೆ ನೋಟಿಸ್ ನೀಡಿರುವ ಪ್ರಕರಣದ ಕುರಿತು ನಿಲುವಳಿ ಸೂಚನೆ ಮಂಡಿಸುವ ಮೂಲಕ ಅಧಿವೇಶನದ ಮೊದಲ ದಿನವೇ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ವಿರೋಧ ಪಕ್ಷದ ನಾಯಕ ಆರ್. ಅಶೋಕ ನೇತೃತ್ವದಲ್ಲಿ ತಯಾರಿ ನಡೆದಿತ್ತು. ಸಂತಾಪ ಸೂಚನಾ ನಿರ್ಣಯ ಅಂಗೀಕರಿಸಿದ ತಕ್ಷಣವೇ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡುವಂತೆ ಅಶೋಕ ಆಗ್ರಹಿಸಿದರು.

ಸಭಾಧ್ಯಕ್ಷರ ಪೀಠವನ್ನು ಹೊಸತಾಗಿ ನಿರ್ಮಿಸಿರುವ ಕುರಿತು ಹೇಳಿಕೆ ಮಂಡಿಸಿದ ಸಭಾಧ್ಯಕ್ಷ ಯು.ಟಿ. ಖಾದರ್, ವಿಧಾನಸೌಧದ ಪ್ರವೇಶ ದ್ವಾರದ ಮುಂಭಾಗದಲ್ಲಿ ಅನುಭವ ಮಂಟಪದ ತೈಲ ವರ್ಣದ ಕಲಾಕೃತಿ ರಚಿಸಿರುವ ಬಗ್ಗೆ ಹೇಳಿಕೆ ನೀಡಲು ಮುಂದಾದರು. ಆಗ, ವಕ್ಫ್ ಮಂಡಳಿ ನೋಟಿಸ್ ಕುರಿತು ನಿಲುವಳಿ ಸೂಚನೆ ಮಂಡಿಸಲು ಮೊದಲು ಅವಕಾಶ ನೀಡುವಂತೆ ಅಶೋಕ ಮತ್ತು ಇತರ ಬಿಜೆಪಿ ಸದಸ್ಯರು ಆಗ್ರಹಿಸಿದರು. ಆಡಳಿತ ಪಕ್ಷದ ಸಾಲಿನಿಂದ ತೀವ್ರ ವಿರೋಧ ವ್ಯಕ್ತವಾಯಿತು.

‘ಅನುಭವ ಮಂಟಪದ ಚಿತ್ರ ಇರಲಿ, ಬಸವಣ್ಣನ ಮಠಗಳ ಜಮೀನನ್ನು ವಕ್ಫ್ ಮಂಡಳಿ ಕಿತ್ತುಕೊಳ್ಳುತ್ತಿದೆ. ಅದರ ಬಗ್ಗೆ ಚರ್ಚಿಸಲು ಅವಕಾಶ ಕೊಡಿ’ ಎಂದು ಅಶೋಕ ಆಗ್ರಹಿಸಿದರು. ‘ಎಲ್ಲ ಚರ್ಚೆಗೂ ಉತ್ತರ ಕೊಡಲು ಸರ್ಕಾರ ಸಿದ್ಧವಿದೆ. ನಿಮ್ಮ ಕಾಲದಲ್ಲೇ ಎಲ್ಲವೂ ಆಗಿದ್ದು. ನಿಮ್ಮ ಬಂಡವಾಳವನ್ನು ಬಿಚ್ಚಿಡುತ್ತೇವೆ’ ಎಂದು ಕೃಷ್ಣ ಬೈರೇಗೌಡ ಪ್ರತ್ಯುತ್ತರ ನೀಡಿದರು.

5ನೇ ಪುಟ ನೋಡಿ



ಬಸವಣ್ಣನವರು ಸ್ಥಾಪಿಸಿದ ವಿಶ್ವದ ಮೊದಲ ಸಂಸತ್ತು ಎಂಬ ಖ್ಯಾತಿಯ ‘ಅನುಭವ ಮಂಟಪದ’ ಬೃಹತ್ ತೈಲವರ್ಣ ಚಿತ್ರವನ್ನು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಅನಾವರಣಗೊಳಿಸಿದರು. ಸಚಿವರಾದ ಜಿ. ಪರಮೇಶ್ವರ, ಎಚ್.ಕೆ. ಪಾಟೀಲ, ಸಭಾಪತಿ ಬಸವರಾಜ ಹೊರಟ್ಟಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸ್ಪೀಕರ್ ಯು. ಟಿ. ಖಾದರ್, ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಉಪಸ್ಥಿತರಿದ್ದರು — ಚಿತ್ರ: ಎಂ. ಎಸ್. ಮಂಜುನಾಥ್

ಚರ್ಚೆಯ ದಿಕ್ಕು ಬದಲಿಸಿದ ಮುಖ್ಯಮಂತ್ರಿ

ಮಧ್ಯಾಹ್ನದ ಭೋಜನ ವಿರಾಮದ ಬಳಿಕ ಕಲಾಪ ಆರಂಭವಾದಾಗ ಬಿಜೆಪಿಯ ಎರಡೂ ಬಣಗಳ ನಡುವಿನ ಭಿನ್ನಮತವನ್ನು ಬಳಸಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪಂಚಮಸಾಲಿ ಮೀಸಲಾತಿ ಕುರಿತ ಚರ್ಚೆಯನ್ನು ಆರಂಭಿಸಿ, ಪ್ರತಿಪಕ್ಷದ ಅಸ್ತ್ರವನ್ನೇ ಕಿತ್ತುಕೊಂಡರು.

ಪ್ರತಿಪಕ್ಷದವರ ಪ್ರಶ್ನೆಗಳಿಗೆ ಮುಖ್ಯಮಂತ್ರಿ ಉತ್ತರ ನೀಡಿದ ಬಳಿಕ, ಸಭಾಧ್ಯಕ್ಷ ಖಾದರ್ ಅವರು, ಅನುಭವ ಮಂಟಪದ ತೈಲವರ್ಣ ಚಿತ್ರ ಕುರಿತ ಚರ್ಚೆಗೆ ಅವಕಾಶ ಕೊಟ್ಟರು. ಈ ವಿಷಯದ ಚರ್ಚೆಯೇ ದಿನದ ಕಲಾಪದ ಅಂತ್ಯದವರೆಗೂ ನಡೆಯಿತು. ವಕ್ಫ್ ಕುರಿತ ಪ್ರಸ್ತಾವಕ್ಕೆ ವಿರೋಧ ಪಕ್ಷಕ್ಕೆ ಅವಕಾಶವೇ ಸಿಗಲಿಲ್ಲ.

ಮೀಸಲಾತಿ, ಅನುಭವ ಮಂಟಪದ ಕುರಿತ ಮುಖ್ಯಮಂತ್ರಿಯವರ ಮಾತಿಗೆ ದನಿಗೂಡಿಸಿ ಬಿಜೆಪಿ ಸದಸ್ಯರೂ ಚರ್ಚೆಯಲ್ಲಿ ಪಾಲ್ಗೊಂಡರು. ಇದರೊಂದಿಗೆ ವಕ್ಫ್ ಮಂಡಳಿ ನೋಟಿಸ್ ವಿಷಯ ಪ್ರಸ್ತಾಪಿಸಿ ಮೊದಲ ದಿನವೇ ಆಡಳಿತ ಪಕ್ಷವನ್ನು ಕಟ್ಟಿಹಾಕುವ ಬಿಜೆಪಿಯ ತಂತ್ರಗಾರಿಕೆ ವಿಫಲವಾಯಿತು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



‘ಮೀಸಲು: ಬಿಜೆಪಿಯದ್ದೇ ತಪ್ಪು’

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣವಿಧಾನಸೌಧ): ‘ಬಿಜೆಪಿ ಸರ್ಕಾರ ಪಂಚಮಸಾಲಿ ಸಮುದಾಯವನ್ನು 2(ಎ)ಗೆ ಸೇರಿಸಿಲ್ಲ. ಮುಸ್ಲಿಮರ ಶೇ 4 ಮೀಸಲಾತಿ ರದ್ದು ಮಾಡಿ, ಅದರಲ್ಲಿ ಶೇ 2 ಮೀಸಲಾತಿ ಪಂಚಮಸಾಲಿಗೆ ಹಂಚಿಕೆ ಮಾಡಿತು. ಆ ಬಳಿಕ ಸುಪ್ರೀಂ ಕೋರ್ಟ್‌ನಲ್ಲಿ ಮುಸ್ಲಿಮರ ಮೀಸಲಾತಿಯನ್ನು ರದ್ದು ಮಾಡುವುದಿಲ್ಲ, ಯಥಾಸ್ಥಿತಿ ಕಾಪಾಡುವುದಾಗಿ ಪ್ರಮಾಣಪತ್ರ ಸಲ್ಲಿಸಿತು. ಆ ಪ್ರಮಾಣ ಪತ್ರ ಮತ್ತು ನ್ಯಾಯಾಲಯದ ಆದೇಶವನ್ನು ಸದನದಲ್ಲಿ ಮಂಡಿಸುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಳಗಾವಿಯಲ್ಲಿ ಪಂಚಮಸಾಲಿ ಸಮುದಾಯದ ಮೀಸಲಾತಿ ಪ್ರತಿಭಟನೆಗೆ ಅನುಮತಿ ನೀಡುವ ಕುರಿತು ವಿಧಾನಸಭೆಯಲ್ಲಿ ಚರ್ಚೆಗೆ ಉತ್ತರಿಸಿದ ಅವರು ಬಿಜೆಪಿ ಆಕ್ಷೇಪಕ್ಕೆ ಮೇಲಿನಂತೆ ಪ್ರತಿಕ್ರಿಯಿಸಿದರು.

‘ಪಂಚಮಸಾಲಿ ಸಮುದಾಯದ ಸ್ವಾಮೀಜಿಯೊಂದಿಗೆ ಮಾತುಕತೆ ನಡೆಸಿದ್ದೇನೆ. ನಿಮ್ಮ ಸಮುದಾಯ 2(ಎ) ಅಡಿ ಬರುವುದಿಲ್ಲ. 2 (ಎ)ಗೆ ಹೊಸದಾಗಿ ಸೇರಿಸಬೇಕಾದರೆ ಹಿಂದುಳಿದ ವರ್ಗಗಳ ಆಯೋಗ ಶಿಫಾರಸು ಮಾಡಬೇಕಾಗುತ್ತದೆ ಎಂದು ಸ್ವಾಮೀಜಿ ಅವರಿಗೆ ತಿಳಿಸಿದ್ದೇನೆ’ ಎಂದರು.

ಆಗ ಮಧ್ಯ ಪ್ರವೇಶಿಸಿದ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಮುಸ್ಲಿಂ ಮೀಸಲಾತಿಯ ವಿಷಯದಲ್ಲಿ ಯಥಾಸ್ಥಿತಿ ಕಾಪಾಡುವುದು ನ್ಯಾಯಾಲಯದ ಮುಂದಿನ ಆದೇಶದವರೆಗೆ ಮಾತ್ರ. ನಿಮ್ಮ ಸರ್ಕಾರ ನ್ಯಾಯಾಲಯದ ಮುಂದೆ ಹೋಗಲಿಲ್ಲ ಎಂದರು.

ಬಿಜೆಪಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ‘ಪ್ರಮಾಣ ಪತ್ರದಲ್ಲಿ ಏನಿದೆ ಹೇಳಿ’ ಎಂದು ಪ್ರಶ್ನಿಸಿದರು.

11ನೇ ಪುಟ ನೋಡಿ

ಅಧಿವೇಶನ 19ಕ್ಕೇ ಕೊನೆ

ವಿಧಾನಸಭೆ ಅಧಿವೇಶನ ಇದೇ 19ರಂದು ಕೊನೆಗೊಳ್ಳಲಿದೆ. ಮಂಡ್ಯ ಸಾಹಿತ್ಯ ಸಮ್ಮೇಳನದ ಕಾರಣ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಈ ನಿರ್ಣಯ ತೆಗೆದು-ಕೊಳ್ಳಲಾಗಿದೆ ಎಂದು ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಸದನಕ್ಕೆ ತಿಳಿಸಿದರು.

‘ಇದೇ 12 ರಿಂದ ಉತ್ತರ ಕರ್ನಾಟಕದ ವಿಷಯಗಳಿಗೆ ಸಂಬಂಧಿಸಿದ ಚರ್ಚೆ ನಡೆಸಲಾಗುವುದು. ಬೆಳಿಗ್ಗೆ 10ರಿಂದ ರಾತ್ರಿ 7ರವರೆಗೆ ಕಲಾಪ ನಡೆಯಲಿದೆ’ ಎಂದು ಅವರು ಹೇಳಿದರು.

₹4 ಸಾವಿರ ಕೋಟಿ ದಾಟಿದ ಸಂಗ್ರಹ; ಗುರಿ ಸಾಧನೆಗೆ ನಾಲ್ಕು ತಿಂಗಳು ಬಾಕಿ

ಬಿಬಿಎಂಪಿ: ಆಸ್ತಿ ತೆರಿಗೆ ಸಂಗ್ರಹದಲ್ಲಿ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮೊದಲ ಬಾರಿಗೆ ₹4 ಸಾವಿರ ಕೋಟಿಗೂ ಹೆಚ್ಚಿನ ಆಸ್ತಿ ತೆರಿಗೆ ಸಂಗ್ರಹ ಮಾಡಿದ್ದು, ದಾಖಲೆ ಸೃಷ್ಟಿಸಿದೆ.


2023–24ನೇ ಆರ್ಥಿಕ ವರ್ಷದ ಪೂರ್ಣ ಅವಧಿಯಲ್ಲಿ ಸಂಗ್ರಹಿಸಿದ್ದ ಮೊತ್ತವೇ ಈವರೆಗೆ ದಾಖಲೆ ಆಗಿದ್ದರೂ, ₹4 ಸಾವಿರ ಕೋಟಿ ತಲುಪಲು ಸಾಧ್ಯ ಆಗಿರಲಿಲ್ಲ. ಜೊತೆಗೆ ಗುರಿಯನ್ನೂ ತಲುಪಿರಲಿಲ್ಲ. ಪ್ರಸಕ್ತ ಆರ್ಥಿಕ ವರ್ಷ ಮುಕ್ತಾಯವಾಗಲು ಇನ್ನೂ ನಾಲ್ಕು ತಿಂಗಳು ಇರುವಂತೆಯೇ ₹4 ಸಾವಿರ ಕೋಟಿಗೂ ಹೆಚ್ಚು ಆಸ್ತಿ ತೆರಿಗೆ ಸಂಗ್ರಹಿಸಿದೆ. ಕಳೆದ ಆರ್ಥಿಕ ವರ್ಷದ ಡಿಸೆಂಬರ್ ಅಂತ್ಯಕ್ಕೆ ₹3,246.61 ಕೋಟಿ ಸಂಗ್ರಹ ಆಗಿದ್ದು, ಅದಕ್ಕೆ ಹೋಲಿಸಿದರೆ ಶೇ 32.02ರಷ್ಟು ಹೆಚ್ಚು ಸಂಗ್ರಹ ಮಾಡಲಾಗಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ 20.57 ಲಕ್ಷ ಆಸ್ತಿಗಳಿಗೆ ₹3,828.64 ಕೋಟಿ ಆಸ್ತಿ ತೆರಿಗೆಯನ್ನು ನಿರೀಕ್ಷಿಸಲಾಗಿದೆ. ಇದರಲ್ಲಿ 15,84,107 ಆಸ್ತಿಗಳಿಂದ ₹3,432.02 ಕೋಟಿ ಸಂಗ್ರಹವಾಗಿದೆ. ಇನ್ನೂ 4 ಲಕ್ಷಕ್ಕೂ ಹೆಚ್ಚು ಆಸ್ತಿಗಳಿಂದ ₹396.62 ಕೋಟಿ ಸಂಗ್ರಹವಾಗಬೇಕಿದೆ.

ತೆರಿಗೆಯಿಂದ ಹೊರಗಿರುವ ಅಥವಾ ತೆರಿಗೆ ನಿಗದಿಯಾಗದ 73,615 ಆಸ್ತಿಗಳಿವೆ ಎಂದು ಅಂದಾಜಿಸಲಾಗಿತ್ತು. ಮಹದೇವಪುರ, ರಾಜರಾಜೇಶ್ವರಿನಗರ, ಬೊಮ್ಮನಹಳ್ಳಿ, ಯಲಹಂಕ ವಲಯದಲ್ಲಿ ಇಂತಹ ಆಸ್ತಿಗಳು ಅತಿ ಹೆಚ್ಚಿವೆ. ಇವುಗಳಿಂದ ಈ ಆರ್ಥಿಕ ವರ್ಷದಲ್ಲಿ ₹262.90 ಕೋಟಿ ಪಾವತಿಯಾಗಬೇಕಿತ್ತು. ಇದರಲ್ಲಿ 140 ಆಸ್ತಿಗಳು ಮಾತ್ರ ₹13 ಲಕ್ಷ ತೆರಿಗೆಯನ್ನು ಪಾವತಿಸಿವೆ.

ಮುನೀಶ್ ಮೌದ್ಗಿಲ್ ಅವರು ಕಂದಾಯ ವಿಭಾಗದ ವಿಶೇಷ ಆಯುಕ್ತರಾಗಿ ಬಂದಮೇಲೆ ತೆರಿಗೆ ಸಂಗ್ರಹಕ್ಕೆ ಹೆಚ್ಚಿನ ಒತ್ತು ನೀಡಲಾಗಿತ್ತು. ತೆರಿಗೆ ಬಾಕಿದಾರರಿಗೆ ಎಸ್‌ಎಂಎಸ್ ಕಳುಹಿಸುವುದು, ಕರೆ ಮಾಡುವುದು, ನೋಟಿಸ್ ನೀಡುವುದು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಬಾಕಿ ಉಳಿಸಿಕೊಂಡ ವಾಣಿಜ್ಯ ಕಟ್ಟಡಗಳಿಗೆ ಬೀಗ, ಜಪ್ತಿಯಂತಹ ಪ್ರಕ್ರಿಯೆಗೆ ಚಾಲನೆ ನೀಡಿದ್ದರು. ಅಲ್ಲದೆ, ಒಂದು ಬಾರಿ ಪರಿಹಾರ ಯೋಜನೆ (ಒಟಿಎಸ್) ಸಂಗ್ರಹಕ್ಕೆ ಹೆಚ್ಚು ಕೊಡುಗೆ ನೀಡಿದೆ.

5 ವರ್ಷಗಳಲ್ಲಿ ಆಸ್ತಿ ತೆರಿಗೆ ಸಂಗ್ರಹ (₹ಕೋಟಿಗಳಲ್ಲಿ)



ಆಸ್ತಿ ತೆರಿಗೆ ಸಂಗ್ರಹ (ಡಿಸೆಂಬರ್ 7ರವರೆಗೆ)

ವಲಯ	ಗುರಿ (₹ಕೋಟಿಗಳಲ್ಲಿ)	ಸಂಗ್ರಹ (₹ಕೋಟಿಗಳಲ್ಲಿ)	ಪ್ರಮಾಣ
ಮಹದೇವಪುರ	₹1,309.04	₹1,154.49	88.19%
ಪೂರ್ವ	₹891.89	₹715.97	80.28%
ದಕ್ಷಿಣ	₹769.50	₹617.77	80.28%
ಪಶ್ಚಿಮ	₹610.39	₹486.47	79.70%
ಯಲಹಂಕ	₹445.24	₹415.08	93.23%
ಬೊಮ್ಮನಹಳ್ಳಿ	₹585.11	₹421.67	72.07%
ರಾಜರಾಜೇಶ್ವರಿನಗರ	₹434.35	₹337.80	77.77%
ದಾಸರಹಳ್ಳಿ	₹164.95	₹138.79	82.93%
ಒಟ್ಟು	₹5,210.48	₹4,286.04	82.26%

ಮುಖ್ಯಾಂಶಗಳು
- ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 32.02ರಷ್ಟು ಹೆಚ್ಚು ಸಂಗ್ರಹ
- 4 ಲಕ್ಷಕ್ಕೂ ಹೆಚ್ಚು ಆಸ್ತಿಗಳಿಂದ ₹396.62 ಕೋಟಿ ಸಂಗ್ರಹವಾಗಬೇಕು
- ತೆರಿಗೆ ಸಂಗ್ರಹಕ್ಕೆ ಹೆಚ್ಚಿನ ಒತ್ತು ನೀಡಿದ ಆಯುಕ್ತ



ಆರ್ಥಿಕ ವರ್ಷ ಮುಗಿಯಲು ಇನ್ನೂ ನಾಲ್ಕು ತಿಂಗಳಿದ್ದು, ಗುರಿ ಸಾಧಿಸಲು ಪ್ರಯತ್ನಿಸಲಾಗುವುದು

ಮುನೀಶ್ ಮೌದ್ಗಿಲ್, ವಿಶೇಷ ಆಯುಕ್ತ, ಕಂದಾಯ ವಿಭಾಗ, ಬಿಬಿಎಂಪಿ

ಒಟಿಎಸ್: ₹399 ಕೋಟಿ ಸಂಗ್ರಹ



ಆಸ್ತಿ ತೆರಿಗೆ ಸುಸ್ತಿದಾರ-ರಾಗಿದ್ದ 3.95 ಲಕ್ಷ ಆಸ್ತಿ ಮಾಲೀಕರಲ್ಲಿ 1.82 ಲಕ್ಷ ಮಾಲೀಕರು ಒಂದು ಬಾರಿ ಪರಿಹಾರ ಯೋಜನೆ (ಒಟಿಎಸ್) ಪ್ರಯೋಜನ ಪಡೆದಿದ್ದು, ₹399.17 ಕೋಟಿ ಪಾವತಿಸಿದ್ದಾರೆ. ಒಟಿಎಸ್ ನವೆಂಬರ್ 30ಕ್ಕೆ ಅಂತ್ಯವಾದರೂ ಇನ್ನೂ 2.12 ಲಕ್ಷ ಆಸ್ತಿ ಮಾಲೀಕರು ಸುಸ್ತಿದಾರರಾಗಿದ್ದು, ಬಡ್ಡಿ ಮತ್ತು ದಂಡವನ್ನು ಹೊರತುಪಡಿಸಿ ₹334.44 ಕೋಟಿ ಪಾವತಿ ಮಾಡಬೇಕಿದೆ.

ಅತಿಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ 82,842 ಆಸ್ತಿಗಳನ್ನು ‘ಋಣಭಾರ’ ಪ್ರಕ್ರಿಯೆಗೆ ಒಳಪಡಿಸಲಾಗಿದ್ದು, 6,676 ವಾಣಿಜ್ಯ ಕಟ್ಟಡಗಳಿಗೆ ಬೀಗಮುದ್ರೆ ಹಾಕಲಾಗಿದೆ. 15,731 ಆಸ್ತಿಗಳ ತೆರಿಗೆಯನ್ನು ಪರಿಷ್ಕೃತಗೊಳಿಸಲಾಗಿದ್ದು, ₹398.49 ಕೋಟಿ ನಿಗದಿಪಡಿಸಲಾಗಿತ್ತು. ಇದರಲ್ಲಿ, 9,202 ಆಸ್ತಿಗಳು ₹114.74 ಕೋಟಿಯನ್ನು (ಡಿ.7ರವರೆಗೆ) ಪಾವತಿಸಿವೆ.

‘ಸೂರ್ಯಘರ್’ ಯೋಜನೆ: 5.14 ಲಕ್ಷ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಧಾನಮಂತ್ರಿ ಸೂರ್ಯಘರ್–ಮುಫ್ತ್ ಬಿಜ್ಲಿ ಯೋಜನೆಯಡಿ (ಪಿಎಂಎಸ್‌ಜಿಎಂಬಿವೈ) ರಾಜ್ಯದಾದ್ಯಂತ 5,14,000 ನೋಂದಣಿಯಾಗಿದ್ದು, ಈ ಪೈಕಿ 1,17,000 ಅರ್ಜಿಗಳು ಸ್ವೀಕೃತವಾಗಿವೆ’ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಯೋಜನೆಯ ಪರಿಣಾಮಕಾರಿ ಅನುಷ್ಠಾನ ಕುರಿತು ಹೂಡಿಯ ಕೆಪಿಟಿಸಿಎಲ್ ಮಾನವಸಂಪನ್ಮೂಲ ಕೇಂದ್ರದಲ್ಲಿ ಬೆಸ್ಕಾಂ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

‘ಯೋಜನೆಯಡಿ ಕೇಂದ್ರ ಸರ್ಕಾರ ₹30 ಸಾವಿರದಿಂದ ₹78 ಸಾವಿರದವರೆಗೆ ಸಹಾಯಧನ ನೀಡುತ್ತಿದೆ. ಯೋಜನೆ ಅನುಷ್ಠಾನಕ್ಕೆ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯವೂ ದೊರೆಯಲಿದೆ’ ಎಂದು ತಿಳಿಸಿದರು.

ಯೋಜನೆಗಾಗಿ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ಪಡೆಯಲು ಅಪಾರ್ಟ್‌ಮೆಂಟ್ ಒಕ್ಕೂಟಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಒಕ್ಕೂಟದ ಪ್ರತಿನಿಧಿಗಳು ಸಭೆಯ ಗಮನ ಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ಮಹಾಂತೇಶ ಬೀಳಗಿ, ಈ ಯೋಜನೆಯಡಿ ದೊರೆಯುವ ಸಾಲ ಸೌಲಭ್ಯದ ಬಗ್ಗೆ ಗ್ರಾಹಕರಿಗೆ ಸಮರ್ಪಕವಾಗಿ ಮಾಹಿತಿ ನೀಡುವಂತೆ, ಕಾರ್ಯಾಗಾರದಲ್ಲಿದ್ದ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ (ಎಸ್‌ಎಲ್‌ಬಿಸಿ) ಪ್ರತಿನಿಧಿಗೆ ಸೂಚಿಸಿದರು.

ಎಸ್‌ಎಲ್‌ಬಿಸಿ ಪ್ರತಿನಿಧಿ ಮಾತನಾಡಿ, ‘ಪ್ರಸ್ತುತ ಬ್ಯಾಂಕ್‌ಗಳಿಂದ 65 ವರ್ಷದವರೆಗಿನವರಿಗೆ ಮಾತ್ರ ಸಾಲ ಸೌಲಭ್ಯ ಮಿತಿಗೊಳಿಸಲಾಗಿದೆ. ಅದಕ್ಕಿಂತ ಮೇಲ್ಪಟ್ಟ ವಯಸ್ಸಿನ ಗ್ರಾಹಕರು, ಸಾಲ ಪಡೆಯಲು ಇಚ್ಛಿಸಿದರೆ, ತಮ್ಮ ಕುಟುಂಬ ಸದಸ್ಯರನ್ನು ಜಂಟಿ ಅರ್ಜಿದಾರರನ್ನಾಗಿ ಸೇರಿಸಿಕೊಳ್ಳಬೇಕು’ ಎಂದು ವಿವರಿಸಿದರು. ‘ಈ ಯೋಜನೆಯಡಿ ಸಾಲ ಪಡೆಯಲು ಬ್ಯಾಂಕ್‌ಗಳಿಗೆ ಜಾಮೀನು ಭದ್ರತೆಯ ಅಗತ್ಯವಿರುವುದಿಲ್ಲ’ ಎಂದು ಗ್ರಾಹಕರೊಬ್ಬರ ಪ್ರಶ್ನೆಗೆ ಉತ್ತರಿಸಿದರು.

‘ಯೋಜನೆಯಡಿ ಸಾಲಕ್ಕಾಗಿ ಬ್ಯಾಂಕ್‌ಗೆ ಅರ್ಜಿ ಸಲ್ಲಿಸಿದಾಗ, ಅಪಾರ್ಟ್‌ಮೆಂಟ್ ಒಕ್ಕೂಟಗಳನ್ನು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ (ಎಂಎಸ್‌ಎಂಇ) ಎಂದು ಪರಿಗಣಿಸಲಾಗುತ್ತಿದೆ. ಆದರೆ ಈ ಒಕ್ಕೂಟಗಳು ಎಂಎಸ್‌ಎಂಇ ವ್ಯಾಪ್ತಿಗೆ ಒಳಪಡುವುದಿಲ್ಲ’ ಎಂದು ಒಕ್ಕೂಟದ ಪ್ರತಿನಿಧಿಗಳು ವ್ಯವಸ್ಥಾಪಕ ನಿರ್ದೇಶಕರ ಗಮನ ಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ಎಸ್‌ಎಲ್‌ಬಿಸಿ ಪ್ರತಿನಿಧಿ, ‘ಅಪಾರ್ಟ್‌ಮೆಂಟ್ ಒಕ್ಕೂಟಗಳಿಗೆ ಸಾಲ ನೀಡುವ ಕುರಿತು ಹೊಸ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯಿಂದ (ಎಂಎನ್‌ಆರ್‌ಇ) ಸ್ಪಷ್ಟ ನಿರ್ದೇಶನ ಇಲ್ಲ. ಇದಕ್ಕಾಗಿ ಸಂಬಂಧಪಟ್ಟ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಇಲಾಖೆಯನ್ನು ಕೋರಿದ್ದೇವೆ’ ಎಂದು ತಿಳಿಸಿದರು.

ಮುಖ್ಯಾಂಶಗಳು
- 1,17,000 ಅರ್ಜಿಗಳು ಸ್ವೀಕೃತ
- ಯೋಜನೆಯ ಪರಿಣಾಮಕಾರಿ ಅನುಷ್ಠಾನ ಕುರಿತು ಕಾರ್ಯಾಗಾರ
- ಸಾಲ ಸೌಲಭ್ಯ: ಸಮರ್ಪಕ ಮಾಹಿತಿ ನೀಡಲು ಸೂಚನೆ



ಯೋಜನೆಯ ವಿವರ
- 2024ರ ಫೆಬ್ರುವರಿಯಲ್ಲಿ ಯೋಜನೆ ಆರಂಭ
- 2025–26ರ ವರೆಗೆ ₹75000 ಕೋಟಿ ವೆಚ್ಚದಲ್ಲಿ, ದೇಶದ 1 ಕೋಟಿ ಮನೆಗಳಿಗೆ ಪ್ರತಿ ತಿಂಗಳು 300 ಯೂನಿಟ್ ಉಚಿತ ವಿದ್ಯುತ್ ಪೂರೈಕೆ ಗುರಿ
- ಒಂಬತ್ತು ತಿಂಗಳಲ್ಲಿ 6.3 ಲಕ್ಷ ಘಟಕಗಳ ಅನುಷ್ಠಾನ ಪೂರ್ಣ. ತಿಂಗಳಿಗೆ ಸರಾಸರಿ 70 ಸಾವಿರ ಅನುಷ್ಠಾನ
- ಯೋಜನೆ ಅನುಷ್ಠಾನದ ನೋಡಲ್ ಏಜೆನ್ಸಿ ಬೆಸ್ಕಾಂ

ಸಬ್ಸಿಡಿ ವಿವರ

ಘಟಕ (ಕಿ.ವ್ಯಾಗಳಲ್ಲಿ)	ಸಬ್ಸಿಡಿ ಹಣ
1-2	₹30,000-₹60,000
2-3	₹60,000-₹78,000
3 ಕಿಂತ ಅಧಿಕ	ಗರಿಷ್ಠ ₹78,000

ಮುಖ್ಯ ಪರೀಕ್ಷೆ ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಕಳೆದ ಸೆಪ್ಟೆಂಬರ್‌ನಲ್ಲಿ ಐಎಎಸ್, ಐಎಫ್‌ಎಸ್, ಐಪಿಎಸ್ ಮತ್ತು ಇತರ ಕೇಂದ್ರ ಸೇವೆಗಳ ಹುದ್ದೆಗಳಿಗೆ ನಡೆಸಿದ ಮುಖ್ಯ (ಮೇನ್) ಪರೀಕ್ಷೆಯ ಫಲಿತಾಂಶ ಸೋಮವಾರ ಪ್ರಕಟವಾಗಿದೆ.

2,845 ಅಭ್ಯರ್ಥಿಗಳು ಸಂದರ್ಶನಕ್ಕೆ ಆಯ್ಕೆಯಾಗಿದ್ದಾರೆ. ಮುಖ್ಯ ಪರೀಕ್ಷೆ ಸೆ.20 ರಿಂದ 29ರವರೆಗೆ ನಡೆದಿತ್ತು. ಈ ಬಾರಿ ಯುಪಿಎಸ್‌ಸಿ ಪರೀಕ್ಷೆಗೆ 13.4 ಲಕ್ಷ ಅಭ್ಯರ್ಥಿಗಳು ನೋಂದಾಯಿಸಿದ್ದರು. ಅವರಲ್ಲಿ 14,625 ಮಂದಿ ಜೂನ್ 16ರಂದು ನಡೆದ ಪೂರ್ವಭಾವಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರು.

ಡೆಲ್ಟಾ ಎಲೆಕ್ಟ್ರಾನಿಕ್ಸ್–ಬಿಎಂಆರ್‌ಸಿಎಲ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮಸಂದ್ರ ಮೆಟ್ರೊ ನಿಲ್ದಾಣಕ್ಕೆ ಹಣಕಾಸಿನ ನೆರವು ನೀಡಲು ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಶನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಮತ್ತು ಡೆಲ್ಟಾ ಎಲೆಕ್ಟ್ರಾನಿಕ್ಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ನಡುವೆ ಸೋಮವಾರ ಅಂತಿಮ ಒಡಂಬಡಿಕೆ ನಡೆದಿದೆ.

ಈ ಒಡಂಬಡಿಕೆಯ ಪ್ರಕಾರ ಆರ್.ವಿ. ರಸ್ತೆ–ಬೊಮ್ಮಸಂದ್ರ ಮಾರ್ಗದಲ್ಲಿ (ಹಳದಿ) ಬೊಮ್ಮಸಂದ್ರ ಮೆಟ್ರೊ ನಿಲ್ದಾಣ ನಿರ್ಮಾಣಕ್ಕೆ ಡೆಲ್ಟಾ ಎಲೆಕ್ಟ್ರಾನಿಕ್ಸ್ ಇಂಡಿಯಾ ಒಟ್ಟು ₹65 ಕೋಟಿ ನೀಡಿದೆ.

9 ತಿಂಗಳ ಹಿಂದೆ ಒಡಂಬಡಿಕೆ ನಡೆದಿತ್ತು. ಆಗ ₹10 ಕೋಟಿಯನ್ನು ಡೆಲ್ಟಾ ಪಾವತಿಸಿತ್ತು. ಉಳಿದ ₹55 ಕೋಟಿಯನ್ನು ಸೋಮವಾರ ಪಾವತಿ ಮಾಡಿದೆ.



ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಮತ್ತು ಡೆಲ್ಟಾ ಎಲೆಕ್ಟ್ರಾನಿಕ್ಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಅಧ್ಯಕ್ಷ ಬೆಂಜಮಿನ್ ಲಿನ್ ಸೋಮವಾರ ಅಂತಿಮ ಒಡಂಬಡಿಕೆಗೆ ಸಹಿ ಹಾಕಿದರು. ಡೆಲ್ಟಾ ವ್ಯವಸ್ಥಾಪಕ ನಿರ್ದೇಶಕ ನಿರಂಜನ್ ನಾಯಕ್, ಬಿಎಂಆರ್‌ಸಿಎಲ್ ಅಧಿಕಾರಿಗಳು ಉಪಸ್ಥಿತರಿದ್ದರು

ರಾಜ್ಯ ಸರ್ಕಾರದ ಅನುಮೋದನೆ ಪಡೆದ ನಂತರ 30 ವರ್ಷಗಳ ಅವಧಿಗೆ ಬೊಮ್ಮಸಂದ್ರ ಮೆಟ್ರೊ ನಿಲ್ದಾಣದ ನಾಮಕರಣದ ಹಕ್ಕುಗಳನ್ನು ಬಿಎಂಆರ್‌ಸಿಎಲ್ ನೀಡಲಿದೆ. ಬೊಮ್ಮಸಂದ್ರ ನಿಲ್ದಾಣವು ‘ಡೆಲ್ಟಾ ಎಲೆಕ್ಟ್ರಾನಿಕ್ಸ್ ಇಂಡಿಯಾ ನಿಲ್ದಾಣ’ ಎಂದು ನಾಮಕರಣಗೊಳ್ಳಲಿದೆ.

ಆರ್‌ವಿ ರಸ್ತೆಯಿಂದ ಬೊಮ್ಮಸಂದ್ರವನ್ನು ಸಂಪರ್ಕಿಸುವ ಹಳದಿ ಮಾರ್ಗದ 3ನೇ ಒಡಂಬಡಿಕೆ ಇದಾಗಿದೆ. ಕೋನಪ್ಪನ ಅಗ್ರಹಾರ ಮತ್ತು ಹೆಬ್ಬಗೋಡಿ ಮೆಟ್ರೊ ನಿಲ್ದಾಣಗಳಿಗೆ ಕ್ರಮವಾಗಿ ಇನ್ಫೊಸಿಸ್ ಫೌಂಡೇಶನ್ ಮತ್ತು ಬಯೋಕಾನ್ ಫೌಂಡೇಶನ್ ಸಂಸ್ಥೆಗಳೊಂದಿಗೆ ಈಗಾಗಲೇ ಒಪ್ಪಂದ ಮಾಡಿಕೊಳ್ಳಲಾಗಿದೆ.

ಇನ್ನೆರಡು ತಿಂಗಳಲ್ಲಿ ಹಳದಿ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರ ಆರಂಭಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಇ–ಖಾತಾ: 2 ಸಾವಿರ ಅರ್ಜಿ ಬಾಕಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಇ–ಖಾತಾ ನೀಡುವ ಪ್ರಕ್ರಿಯೆಗೆ ವೇಗ ದೊರೆತಿದ್ದು, ಸಹಾಯಕ ಕಂದಾಯ ಅಧಿಕಾರಿಗಳ (ಎಆರ್‌ಒ) ಬಳಿ ಎರಡು ಸಾವಿರ ಅರ್ಜಿಗಳು ಮಾತ್ರ ಬಾಕಿ ಇವೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಎಆರ್‌ಒಗಳ ಬಳಿ 40 ಸಾವಿರ ಅರ್ಜಿಗಳು ಬಾಕಿ ಉಳಿದಿದ್ದವು. ಪ್ರತಿಯೊಂದು ವಾರ್ಡ್‌ಗೂ ಹೆಚ್ಚುವರಿಯಾಗಿ ಒಬ್ಬ ಎಆರ್‌ಒ ಅನ್ನು ನಿಯೋಜಿಸಲಾಗಿದ್ದು, ಪ್ರಕ್ರಿಯೆ ವೇಗವಾಗಿ ನಡೆಯುತ್ತಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಇ–ಖಾತಾಗೆ ಪ್ರತಿನಿತ್ಯವೂ ಎರಡು ಸಾವಿರ ಅರ್ಜಿಗಳು ಬರುತ್ತಿದ್ದು, ಅವುಗಳನ್ನು ಶೀಘ್ರ ವಿಲೇವಾರಿ ಮಾಡಲು ಸೂಚಿಸಲಾಗಿದೆ. ಹೀಗಾಗಿ ಎಆರ್‌ಒ ಹುದ್ದೆಗಿಂತ ಹೆಚ್ಚಿನ ಹುದ್ದೆಯವರಿಗೆ ಜವಾಬ್ದಾರಿ ವಹಿಸಲಾಗಿದೆ ಎಂದರು.

ಇನ್ನೊಂದು ವಾರದಲ್ಲಿ ಎಲ್ಲ ಲಾಗಿನ್‌ಗಳಲ್ಲಿ ಹೆಚ್ಚುವರಿ ಎಆರ್‌ಒಗಳು ಕಾರ್ಯನಿರ್ವಹಿಸಲಿದ್ದು, ಪ್ರತಿನಿತ್ಯ 15 ಸಾವಿರ ಇ–ಖಾತಾಗಳನ್ನು ನೀಡುವ ಗುರಿ ಹೊಂದಲಾಗಿದೆ. ಡಿಸೆಂಬರ್ 15ರ ನಂತರ ಬಿಬಿಎಂಪಿ ವತಿಯಿಂದಲೇ ಆಸ್ತಿ ಮಾಲೀಕರಿಗೆ ಇ–ಖಾತಾ ಪಡೆದುಕೊಳ್ಳುವಂತೆ ನೋಟಿಸ್ ಜಾರಿ ಮಾಡಲಾಗುತ್ತದೆ. ಕರಡು ಇ–ಖಾತಾ ಪ್ರಕಟಿಸಿರುವ 23 ಲಕ್ಷ ಆಸ್ತಿಗಳಿಗೂ ಅಂತಿಮ ಇ–ಖಾತಾ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಇ–ಖಾತಾ ಬಗ್ಗೆ ನೆರವು ನೀಡಲು ಸಹಾಯವಾಣಿ 9480683695 ಪ್ರಾರಂಭಿಸಲಾಗಿದ್ದು, ನಾಗರಿಕರು ಕರೆ ಮಾಡಿ ಪರಿಹಾರ ಕಂಡುಕೊಳ್ಳಬಹುದು ಎಂದರು.



ಮಾನವ ಹಕ್ಕುಗಳ ಆಯೋಗ 7,182 ಪ್ರಕರಣಗಳ ವಿಲೇವಾರಿ

ಬೆಂಗಳೂರು: ‘ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ನೋಂದಾಯಿಸಲಾಗಿದ್ದ 10,209 ಪ್ರಕರಣಗಳಲ್ಲಿ 7,182 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದ್ದು, ಸಂತ್ರಸ್ತರಿಗೆ ಸರ್ಕಾರದಿಂದ ಪರಿಹಾರ ಕೊಡಿಸಲು ಸೂಕ್ತ ಶಿಫಾರಸು ಮಾಡಲಾಗಿದೆ’ ಎಂದು ಆಯೋಗ ತಿಳಿಸಿದೆ.

‘ಈ ಎಲ್ಲ ಪ್ರಕರಣಗಳನ್ನು ನ್ಯಾಯಮಂಡಳಿಯ ಪೂರ್ಣ ಮತ್ತು ಏಕಸದಸ್ಯ ಪೀಠಗಳಲ್ಲಿ ವಿಚಾರಣೆ ನಡೆಸಿ ಇತ್ಯರ್ಥಗೊಳಿಸಲಾಗಿದ್ದು, ಆಯೋಗವು ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ, ಪ್ರಕರಣಗಳ ತುರ್ತು ಇತ್ಯರ್ಥಕ್ಕಾಗಿ ಆಯಾ ಜಿಲ್ಲಾಧಿಕಾರಿ, ಎಸ್‌ಪಿ ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳ ಸಮ್ಮುಖದಲ್ಲಿ ವಿಚಾರಣೆ ನಡೆಸುವ ನೂತನ ಪ್ರಯೋಗಕ್ಕೆ ಚಾಲನೆ ನೀಡಲಾಗಿದೆ’ ಎಂದು ತಿಳಿಸಿದೆ.

‘ಪ್ರಕರಣಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಇತ್ಯರ್ಥಗೊಳಿಸುವುದಲ್ಲದೇ, ಆಯೋಗವು ಹಲವಾರು ಜೈಲು, ಪೊಲೀಸ್ ಠಾಣೆ, ವಸತಿನಿಲಯ, ಬಸ್ ನಿಲ್ದಾಣಗಳಿಗೆ ಅನಿರೀಕ್ಷಿತ ಭೇಟಿ ನೀಡಿ, ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ಕೆಲಸ ಮಾಡುತ್ತಿದೆ. ಆಯೋಗದ ಕಾರ್ಯನಿರ್ವಹಣೆ, ಮಾನವ ಹಕ್ಕುಗಳ ಉಲ್ಲಂಘನೆ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕೆಲಸ ನಡೆಯುತ್ತಿದೆ’ ಎಂದು ಪ್ರಕಟಣೆ ತಿಳಿಸಿದೆ.

ಮಾಜಿ ಸೈನಿಕರಿಂದ 12ರಂದು ಬೆಳಗಾವಿ ಚಲೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಸೈನಿಕರ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಡಿ. 12 ರಂದು ‘ಬೆಳಗಾವಿ ಚಲೋ’ ನಡೆಸಲಾಗುವುದು. ನಮ್ಮ ಬೇಡಿಕೆಗಳಿಗೆ ಸ್ಪಂದಿಸದೇ ಇದ್ದರೆ, ನಮ್ಮ ಪದಕಗಳನ್ನು ರಾಷ್ಟ್ರಪತಿಯವರಿಗೆ ಹಿಂತಿರುಗಿಸಲಾಗುವುದು’ ಎಂದು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಸಂಘದ ರಾಜ್ಯಾಧ್ಯಕ್ಷ ಕೆ.ಎನ್. ಶಿವಣ್ಣ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಮಾಜಿ ಸೈನಿಕರಿಗೆ ಶೇ 10ರಷ್ಟು ಉದ್ಯೋಗ ಮೀಸಲಾತಿ, ನಿವೇಶನ, ಭೂಮಿ ಮಂಜೂರಾತಿ ನೀಡದೇ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ. ಈ ಧೋರಣೆಯನ್ನು ಖಂಡಿಸಿ ಬೆಳಗಾವಿಯಲ್ಲಿ ಐದು ಸಾವಿರಕ್ಕೂ ಅಧಿಕ ಮಾಜಿ ಸೈನಿಕರು ಮತ್ತು ವೀರನಾರಿಯರು ಹೋರಾಟ ನಡೆಸಲಿದ್ದಾರೆ’ ಎಂದರು.

ಮಾಜಿ ಸೈನಿಕರು, ಹುತಾತ್ಮರಾದವರಿಗೆ ನಿವೇಶನ ಮತ್ತು ಭೂ ಮಂಜೂರಾತಿ ಮಾಡಲು ಹಲವು ಬಾರಿ ಆದೇಶಗಳಾಗಿದ್ದರೂ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್‌ಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ. ಪುನರ್ ಉದ್ಯೋಗ ಪಡೆದ ಮಾಜಿ ಸೈನಿಕರಿಗೆ ವೇತನ ಭದ್ರತೆ ಕಲ್ಪಿಸಬೇಕು. ವಿವಿಧ ಜಿಲ್ಲೆಗಳಲ್ಲಿ ಸೈನಿಕ ಭವನ ನಿರ್ಮಿಸಲು ಉಚಿತ ನಿವೇಶನ ಮತ್ತು ಆರ್ಥಿಕ ನೆರವು ನೀಡಬೇಕು. ರಾಜ್ಯ ಸರ್ಕಾರ ಶೇ 50ರಷ್ಟು ಕಂದಾಯ ವಸೂಲಿ ಮಾಡುತ್ತಿದೆ. ರಾಜ್ಯ ಸರ್ಕಾರ ಸಂಪೂರ್ಣ ರಿಯಾಯಿತಿ ನೀಡಬೇಕು ಎಂದು ಆಗ್ರಹಿಸಿದರು.

ನಿಧನ ವಾರ್ತೆ

ಹನುಮಂತ ರಾಯಪ್ಪ



ರಾಜರಾಜೇಶ್ವರಿ ನಗರ: ದೊಡ್ಡಬಿದರ-ಕಲ್ಲು ವಾರ್ಡ್‌ನ ಜೆಡಿಎಸ್ ಅಧ್ಯಕ್ಷರಾಗಿದ್ದ ಹನುಮಂತ ರಾಯಪ್ಪ (54) ಅವರು ಸೋಮವಾರ ನಿಧನರಾದರು. ಅಂತ್ಯಕ್ರಿಯೆ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ದೊಡ್ಡಬಿದರಕಲ್ಲಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.
ಮಾಹಿತಿಗೆ: 99010 42105

ಮಂಗಳವಾರ, ಡಿಸೆಂಬರ್ 10, 2024 | ₹ 7.00
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಲಂಕಾರ
ಕ್ರಿಸ್‌ಮಸ್ ಅಂಗವಾಗಿ ಮುಂಬೈನ ಮಾರುಕಟ್ಟೆಯಲ್ಲಿ ಆಲಂಕಾರಿಕ ವಸ್ತುಗಳನ್ನು ಇಡಲಾಗಿತ್ತು



ಜೈನ ಅಭಿವೃದ್ಧಿ ನಿಗಮ ಸ್ಥಾಪನೆಗೆ ಆಗ್ರಹ 5
'ಸೀಟ್ ಬ್ಲಾಕಿಂಗ್' ದಂಧೆ: ಹೆಚ್ಚಿನ ವಿಚಾರಣೆಗೆ ಆರೋಪಿಗಳು ಪೊಲೀಸ್ ಕಸ್ಟಡಿಗೆ 7
ಬಾಂಗ್ಲಾ ಅಶಾಂತಿ ತಿರುಪುರಕ್ಕೆ ವರ? 6
ಮೂರು ಕಾಲೇಜಿಗೆ ನೋಟಿಸ್ 7

ಭಾರತ– ಬಾಂಗ್ಲಾದೇಶ ವಿದೇಶಾಂಗ ಕಾರ್ಯದರ್ಶಿಗಳ ಸಭೆ

ಅಲ್ಪಸಂಖ್ಯಾತರ ಸುರಕ್ಷೆ; ಆತಂಕ

ಢಾಕಾ (ಪಿಟಿಐ/ಎಎಫ್‌ಪಿ): ಬಾಂಗ್ಲಾದೇಶದಲ್ಲಿರುವ ಅಲ್ಪಸಂಖ್ಯಾತರ ಸುರಕ್ಷತೆ ಕುರಿತಂತೆ ಭಾರತವು ತೀವ್ರ ಕಳವಳ ವ್ಯಕ್ತಪಡಿಸಿದೆ.

ಸಾಂಸ್ಕೃತಿಕ ಮತ್ತು ಧಾರ್ಮಿಕ ಕೇಂದ್ರಗಳು ಹಾಗೂ ರಾಜತಾಂತ್ರಿಕ ಕಚೇರಿಗಳ ಮೇಲೆ ದಾಳಿಗಳು ನಡೆದಿರುವುದು ವಿಷಾದಕರ ಎಂದು ಹೇಳಿದೆ.

ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಬಾಂಗ್ಲಾದೇಶದ ವಿದೇಶಾಂಗ ಕಾರ್ಯದರ್ಶಿ ಮೊಹಮ್ಮದ್ ಜಶೀಂ ಉದ್ದೀನ್ ಜತೆಗೆ ಸೋಮವಾರ ನಡೆಸಿದ ಸಭೆಯಲ್ಲಿ ಭಾರತ ತನ್ನ ಕಳವಳ ವ್ಯಕ್ತಪಡಿಸಿದೆ.

ಆಗಸ್ಟ್ 5ರಂದು ಪ್ರಧಾನ ಮಂತ್ರಿ ಪ್ರಧಾನಿ ಶೇಖ್ ಹಸೀನಾ ಪದಚ್ಯುತಗೊಂಡು, ಭಾರತಕ್ಕೆ ಪಲಾಯನಗೈದ ಬಳಿಕ ಉಭಯ ರಾಷ್ಟ್ರಗಳ ನಡುವೆ ನಡೆದ ಉನ್ನತ ಮಟ್ಟದ ಹಿರಿಯ ಅಧಿಕಾರಿಗಳ ಮೊದಲ ಸಭೆ ಇದಾಗಿದೆ.

'ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸಕಾರಾತ್ಮಕ, ರಚನಾತ್ಮಕ ಹಾಗೂ ಪರಸ್ಪರ ಅನುಕೂಲಕರ ಸಂಬಂಧವನ್ನು ಬಾಂಗ್ಲಾದೇಶದ ಜತೆ ಹೊಂದಲು ಭಾರತ ಬಯಸುತ್ತದೆ. ಉಭಯ ದೇಶಗಳ ಜನರ ಹಿತಾಸಕ್ತಿಗಾಗಿ ಪರಸ್ಪರ ಸಹಕಾರವನ್ನು ಮುಂದುವರಿಸದಿರಲು ಯಾವುದೇ ಕಾರಣ ಇಲ್ಲ' ಎಂದು ಸಭೆಯ ಬಳಿಕ ಮಿಸ್ರಿ ಸುದ್ದಿಗಾರರಿಗೆ ತಿಳಿಸಿದರು.



ಬಾಂಗ್ಲಾ ವಿದೇಶಾಂಗ ಕಾರ್ಯದರ್ಶಿ ಮೊಹಮ್ಮದ್ ಜಶೀಂ ಉದ್ದೀನ್ ಅವರೊಂದಿಗೆ ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಮಾತುಕತೆ ನಡೆಸಿದರು – ಪಿಟಿಐ ಚಿತ್ರ

'ಬಾಂಗ್ಲಾದೇಶದಲ್ಲಿರುವ ಅಲ್ಪಸಂಖ್ಯಾತರ ಸುರಕ್ಷತೆ ವಿಚಾರಗಳ ಕುರಿತಂತೆ ನಮ್ಮ ಕಳವಳವನ್ನು ವ್ಯಕ್ತಪಡಿಸಿದ್ದೇವೆ. ಸಾಂಸ್ಕೃತಿಕ ಮತ್ತು ಧಾರ್ಮಿಕ ಕೇಂದ್ರಗಳು ಹಾಗೂ ರಾಜತಾಂತ್ರಿಕ ಕಚೇರಿಗಳ ಮೇಲೆ ನಡೆದ ದಾಳಿಯ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಈ ಎಲ್ಲ ವಿಷಯಗಳ ಬಗ್ಗೆ ರಚನಾತ್ಮಕ ಕ್ರಮಗಳನ್ನು ಬಾಂಗ್ಲಾದೇಶದಿಂದ ಭಾರತ ನಿರೀಕ್ಷಿಸುತ್ತದೆ' ಎಂದು ಅವರು ಹೇಳಿದರು.

ಯೂನುಸ್ ಜತೆ ಭೇಟಿ: ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನುಸ್ ಹಾಗೂ ವಿದೇಶಾಂಗ ಇಲಾಖೆಯ ಸಲಹೆಗಾರ ಮೊಹಮ್ಮದ್ ತೌಹೀಸ್ ಹುಸ್ಸೈನ್ ಅವರನ್ನು ಸಹ ಮಿಸ್ರಿ ಅವರು ಭೇಟಿಯಾಗಿ ಮಾತುಕತೆ ನಡೆಸಿದರು.

'ಬಾಂಗ್ಲಾದಲ್ಲಿ ಸ್ಥಿರ ಪ್ರಜಾಪ್ರಭುತ್ವ, ಶಾಂತಿ, ಅಭಿವೃದ್ಧಿ ಹಾಗೂ ಎಲ್ಲರನ್ನೂ ಒಳಗೊಳ್ಳುವ ಸರ್ಕಾರ ರಚನೆಯನ್ನು ಭಾರತವು ಬೆಂಬಲಿಸಲಿದೆ ಎಂದು ಮಿಸ್ರಿ ಹೇಳಿದರು' ಎಂದು ದೆಹಲಿಯಲ್ಲಿ ಭಾರತದ ವಿದೇಶಾಂಗ ಇಲಾಖೆ ಬಿಡುಗಡೆಗೊಳಿಸಿದ ಪ್ರಕಟಣೆ ತಿಳಿಸಿದೆ.

'ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಸಲ್ಲ'

'ತನ್ನ ಆತಂರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ದೇಶಕ್ಕೆ ಹಕ್ಕು ಇಲ್ಲ' ಎಂದು ಬಾಂಗ್ಲಾದೇಶ ಹೇಳಿದೆ.

ಭಾರತದ ಹೇಳಿಕೆಗೆ ಪ್ರತಿಕ್ರಿಯಿಸಿರುವ ಬಾಂಗ್ಲಾದೇಶದ ವಿದೇಶಾಂಗ ಕಾರ್ಯದರ್ಶಿ ಮೊಹಮ್ಮದ್ ಜಶೀಂ ಉದ್ದೀನ್, 'ಯಾವುದೇ ದೇಶದ ಆಂತರಿಕ ವಿಷಯಗಳಲ್ಲಿ ಬಾಂಗ್ಲಾ ಹಸ್ತಕ್ಷೇಪ ಮಾಡುವುದಿಲ್ಲ. ಇದೇ ರೀತಿಯ ಗೌರವವನ್ನು ಇತರ ದೇಶಗಳಿಂದಲೂ ನಿರೀಕ್ಷಿಸುತ್ತದೆ' ಎಂದು ಹೇಳಿದ್ದಾರೆ.

'ಭಾರತದಲ್ಲಿ ನಡೆಯುತ್ತಿರುವ ನಕಾರಾತ್ಮಕ ಅಭಿಯಾನವನ್ನು ಅಲ್ಲಿನ ಸರ್ಕಾರ ತಡೆಯುವುದನ್ನು ಬಾಂಗ್ಲಾದೇಶ ನಿರೀಕ್ಷಿಸುತ್ತದೆ. ಬಾಂಗ್ಲಾದೇಶದಲ್ಲಿನ ಜುಲೈ–ಆಗಸ್ಟ್ ಕ್ರಾಂತಿ ಮತ್ತು ನಂತರ, ನಡೆದ ಬೆಳವಣಿಗೆಗಳ ಬಗ್ಗೆ ಭಾರತದ ಮಾಧ್ಯಮಗಳಲ್ಲಿ ತಪ್ಪು ಮತ್ತು ಸುಳ್ಳು ಮಾಹಿತಿಗಳ ಕುರಿತು ಕ್ರಮಕೈಗೊಳ್ಳುವ ಕುರಿತು ಸಭೆಯಲ್ಲಿ ಗಮನ ಸೆಳೆದಿದ್ದೇವೆ. ಬಾಂಗ್ಲಾದೇಶದಲ್ಲಿ ಎಲ್ಲರೂ ತಮ್ಮ ಧಾರ್ಮಿಕ ನಂಬಿಕೆಗಳನ್ನು ಮುಕ್ತವಾಗಿ ಆಚರಿಸುತ್ತಿದ್ದಾರೆ' ಎಂದಿದ್ದಾರೆ.

> **ಉಭಯ ದೇಶಗಳ ಸಂಬಂಧವು ಜನ ಕೇಂದ್ರಿತವಾಗಿದ್ದು, ಎಲ್ಲವೂ ಜನರ ಒಳಿತಿಗಾಗಿಯೇ ಆಗಿರಲಿದೆ. ಈ ವಿಚಾರವೇ ಪ್ರೇರಕ ಶಕ್ತಿಯಾಗಿರಲಿದೆ**
> **ವಿಕ್ರಮ್ ಮಿಸ್ರಿ,** ಭಾರತದ ವಿದೇಶಾಂಗ ಕಾರ್ಯದರ್ಶಿ

ಸಂಜಯ್ ಮಲ್ಹೋತ್ರಾ ಆರ್‌ಬಿಐ ಗವರ್ನರ್



ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) 26ನೇ ಗವರ್ನರ್ ಆಗಿ ಕಂದಾಯ ಇಲಾಖೆಯ ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ಅವರನ್ನು ಕೇಂದ್ರ ಸರ್ಕಾರ ಸೋಮವಾರ ನೇಮಿಸಿದೆ.

ಶಕ್ತಿಕಾಂತ ದಾಸ್ ಅವರ ಅವಧಿ ಮಂಗಳವಾರ (ಡಿಸೆಂಬರ್ 10) ಅಂತ್ಯಗೊಳ್ಳಲಿದೆ. ಸಂಜಯ್ ಮಲ್ಹೋತ್ರಾ ಅವರು ಬುಧವಾರ (ಡಿ.11) ಅಧಿಕಾರ ವಹಿಸಿಕೊಳ್ಳಲಿದ್ದು, ಅಂದಿನಿಂದ ಇವರ ಕಾರ್ಯಾವಧಿ ಮೂರು ವರ್ಷ ಇರಲಿದೆ.

1990ರ ಬ್ಯಾಚ್‌ನ ಐಎಎಸ್ ಅಧಿಕಾರಿ ಮಲ್ಹೋತ್ರಾ, ಕಾನ್ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಎಂಜಿನಿಯರಿಂಗ್ ಪದವಿ ಮತ್ತು ಅಮೆರಿಕದ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಿಂದ ಸಾರ್ವಜನಿಕ ನೀತಿ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಅಂಗವಿಕಲ ವಿದ್ಯಾರ್ಥಿಗಳಿಗಿಲ್ಲ ವಿಶೇಷ ಶಿಕ್ಷಕರ ಬೋಧನೆ

ಸಾಮಾನ್ಯ ಶಾಲೆಗಳಿಗೆ 43,719 ವಿದ್ಯಾರ್ಥಿಗಳು ದಾಖಲು

• ಎಂ.ಎನ್.ಯೋಗೇಶ್

ಚಿತ್ರದುರ್ಗ: ರಾಜ್ಯದ ಸರ್ಕಾರಿ ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಓದುತ್ತಿರುವ ಅಂಗವಿಕಲ ವಿದ್ಯಾರ್ಥಿಗಳಿಗೆ ಅನುಕೂಲಕರವಾದ ಬೋಧನೆಗಾಗಿ ರಾಜ್ಯ ಸರ್ಕಾರ ಸೃಷ್ಟಿಸಿದ್ದ 3,567 ವಿಶೇಷ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದ್ದರೂ ನೇಮಕಾತಿ ಪ್ರಕ್ರಿಯೆ ಆರಂಭಗೊಳ್ಳದ ಕಾರಣ ಸಾಮಾನ್ಯ ಶಾಲೆಗಳಿಗೆ ದಾಖಲಾಗಿರುವ ಅಂಗವಿಕಲ ವಿದ್ಯಾರ್ಥಿಗಳ ಕಲಿಕೆ ಸ್ಥಗಿತಗೊಂಡಿದೆ.

ಅಂಗವಿಕಲರ ಹಕ್ಕುಗಳ ಕಾಯ್ದೆ-2016ರ ಅನ್ವಯ ಸಾಮಾನ್ಯ ಶಾಲೆಗಳಲ್ಲಿ ಅಂಗವಿಕಲ ವಿದ್ಯಾರ್ಥಿಗಳೂ ಕಲಿಯಬೇಕು. ತಾರತಮ್ಯವಿಲ್ಲದ ಸಮನ್ವಯ ಶಿಕ್ಷಣ ಜಾರಿಯಾಗಬೇಕು. ವೈಕಲ್ಯದ ಆಧಾರದ ಮೇಲೆ ಪಾಠ ಬೋಧನೆ ಮಾಡುವ ವಿಶೇಷ ತರಬೇತಿ ಪಡೆದ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಬೇಕು ಎಂದು 2021ರಲ್ಲಿ ಸಲ್ಲಿಕೆಯಾಗಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಆದೇಶಿಸಿತ್ತು.

ರಾಜ್ಯದಲ್ಲಿ 1ರಿಂದ 12ನೇ ತರಗತಿವರೆಗೆ 43,719 ಅಂಗವಿಕಲ ವಿದ್ಯಾರ್ಥಿಗಳು ಸಾಮಾನ್ಯ ಶಾಲೆಗೆ ದಾಖಲಾಗಿದ್ದಾರೆ. 10 ವಿದ್ಯಾರ್ಥಿಗಳಿಗೆ ಒಬ್ಬರಂತೆ ವಿಶೇಷ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ನಡಾವಳಿ ರೂಪಿಸಿದ್ದ ಸರ್ಕಾರ 3,567 ವಿಶೇಷ ಶಿಕ್ಷಕರ ಹುದ್ದೆ ಸೃಷ್ಟಿಸಿದೆ. 2024ರ ಜ.17ರಂದು ಆರ್ಥಿಕ ಇಲಾಖೆ ಇದಕ್ಕೆ ಒಪ್ಪಿಗೆ ನೀಡಿದೆ. ಈ ಕುರಿತು ಈಗಾಗಲೇ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರವನ್ನೂ ಸಲ್ಲಿಸಲಾಗಿದೆ.

ಆದರೆ, ಇಲ್ಲಿಯವರೆಗೆ ವಿಶೇಷ ಶಿಕ್ಷಕರನ್ನು ನೇಮಕ ಮಾಡಿಕೊಳ್ಳದ ಕಾರಣ ಅಂಗವಿಕಲ ವಿದ್ಯಾರ್ಥಿಗಳ ಶಿಕ್ಷಣ ನನೆಗುದಿಗೆ ಬಿದ್ದಿದೆ. ಆ ಮೂಲಕ ಸುಪ್ರೀಂ ಕೋರ್ಟ್‌ನ ಆದೇಶವನ್ನೂ ಉಲ್ಲಂಘಿಸಲಾಗಿದೆ ಎಂದು ವಿಶೇಷ ಶಿಕ್ಷಣ ಪದವಿ ಪಡೆದ ಅಭ್ಯರ್ಥಿಗಳು ಆರೋಪಿಸುತ್ತಾರೆ.

ತಾಲ್ಲೂಕಿಗೆ ನಾಲ್ವರೇ ಶಿಕ್ಷಕರು: ರಾಜ್ಯ ಸರ್ಕಾರ 2018ರಲ್ಲೇ ನೇರಗುತ್ತಿಗೆ ಆಧಾರದ ಮೇಲೆ 836 ವಿಶೇಷ ಶಿಕ್ಷಕರ ನೇಮಕಾತಿ ಮಾಡಿಕೊಂಡಿತ್ತು.

> **ಅಂಗವಿಕಲ ವಿದ್ಯಾರ್ಥಿಗಳಿಗೆ ಸಾಮಾನ್ಯ ಶಿಕ್ಷಕರೇ ಬೋಧನೆ ಮಾಡುತ್ತಿದ್ದಾರೆ. ವಿಶೇಷ ಶಿಕ್ಷಕರ ನೇಮಕಾತಿ ಕುರಿತಂತೆ ಮಾಹಿತಿ ಇಲ್ಲ**
> **ಎಂ.ಆರ್.ಮಂಜುನಾಥ್**
> ಡಿಡಿಪಿಐ ಚಿತ್ರದುರ್ಗ

7ನೇ ಪುಟ ನೋಡಿ

ಗಮನ ಸೆಳೆಯುವ ಪುಟಾಣಿ ರೈಲು, ರಾಕ್ ಕ್ಲೈಂಬಿಂಗ್, ಟ್ರಾಫಿಕ್ ಉದ್ಯಾನ

ಹೊಸ ಹೊಳಪಿನಲ್ಲಿ ಬಾಲಭವನ

• ಖಲೀಲಅಹ್ಮದ ಶೇಖ

ಬೆಂಗಳೂರು: ಹೊಸ ಪುಟಾಣಿ ರೈಲಿನ ಚುಕು ಬುಕು ಸದ್ದು, ಚಂದದ ದೋಣಿಗಳಲ್ಲಿ ವಿಹಾರ, ಕೃತಕ ಬಂಡೆಗಳಿರುವ ಗೋಡೆ (ರಾಕ್ ಕ್ಲೈಂಬಿಂಗ್ ಮಾದರಿ) ಏರುವ ಸಾಹಸ, ಪುಟ್ಟ ವಾಹನದಲ್ಲಿ ಕುಳಿತು ಸಂಚಾರ ಮಾಹಿತಿ ತಿಳಿಯವ ಉಮೇದು, ವಿಜ್ಞಾನ ತಿಳಿಸುವ ಉದ್ಯಾನ, ಅಂಗವಿಕಲ ಮಕ್ಕಳಿಗಾಗಿ ರೂಪಿಸಿರುವ ಕ್ರೀಡೋದ್ಯಾನ...

ಇದು ಉದ್ಯಾನ ನಗರಿಯ ಚಿಣ್ಣರ ಸಂಭ್ರಮದ ತಾಣ ಬಾಲಭವನದಲ್ಲಿ ಕಾಣುವ ಸಂಭ್ರಮದ ದೃಶ್ಯಗಳು.

12 ಎಕರೆ ವಿಸ್ತೀರ್ಣದಲ್ಲಿರುವ ಬಾಲಭವನ ಈಗ ನವೀಕರಣಗೊಂಡಿದೆ. ಸಾಹಸ ಕ್ರೀಡೆಗೊಂದು, ಸಂಚಾರ ಮಾಹಿತಿ ಅರಿಯಲು ಮತ್ತೊಂದು, ವಿಜ್ಞಾನ ವಿಷಯಕ್ಕೊಂದು.. ಹೀಗೆ ವೈವಿಧ್ಯ 'ಉದ್ಯಾನಗಳು' ಮೈದಳೆದಿವೆ. ಇದೆಲ್ಲದರ ಜೊತೆಗೆ ರೈಲು ಪ್ರಯಾಣದ ಅನುಭವ ಕಟ್ಟಿಕೊಡುವ ಪುಟಾಣಿ ರೈಲು ಮಕ್ಕಳ ಆಕರ್ಷಣೆಯ ಕೇಂದ್ರಬಿಂದುವಾಗಿದೆ. ಈಗ ವಾರಾಂತ್ಯದಲ್ಲಿ ಚಿಣ್ಣರ ಕಲರವ ಮತ್ತು ಅವರನ್ನು ಕರೆತರುವ ಕುಟುಂಬದವರ ಸಂಭ್ರಮ ಮತ್ತಷ್ಟು ಹೆಚ್ಚಾಗಿದೆ.

ಸ್ಪರ್ಧೆ–ಸಾಂಸ್ಕೃತಿಕ ಕಾರ್ಯಕ್ರಮ : ವಾರಾಂತ್ಯದಲ್ಲಿ ಇಲ್ಲಿ ಮಕ್ಕಳಿಗಾಗಿ ಸಾಹಿತ್ಯ, ಚಿತ್ರಕಲೆ, ಕರಕುಶಲ, ಜೇಡಿಮಣ್ಣಿನ ಕಲೆ, ಸಮೂಹ ನೃತ್ಯ, ಸಮೂಹ ಗೀತೆ, ಯೋಗ, ರಂಗ ತರಬೇತಿ, ಮೆಹಂದಿ, ಮಡಿಕೆ ಮೇಲೆ ಚಿತ್ರ ರಚನೆ ಮತ್ತು ದೇಶಿ ಆಟಗಳ ಸ್ಪರ್ಧೆಗಳು ನಡೆಯುತ್ತಿದ್ದು, ಎಲ್ಲರಿಗೂ ಉಚಿತ ಪ್ರವೇಶವಿದೆ. ಸ್ಪರ್ಧೆಯಲ್ಲಿ ಗೆದ್ದ ಮಕ್ಕಳಿಗೆ ಬಹುಮಾನ ನೀಡಲಾಗುತ್ತದೆ.

ಮೈಂಡ್‌ಟ್ರೀ ಮತ್ತು ಬಾಲಭವನ ಸೊಸೈಟಿ ಸಹಯೋಗದಲ್ಲಿ ರಾಜ್ಯದ ಮೊದಲ ಅಂಗವಿಕಲ ಸ್ನೇಹಿ ಉದ್ಯಾನವೂ ಇಲ್ಲಿದೆ. ಈ ಉದ್ಯಾನದಲ್ಲಿ ಅಂಗವಿಕಲ ಮಕ್ಕಳು ವ್ಹೀಲ್ ಚೇರ್ ಮೂಲಕ ಆಟಿಕೆಗಳಲ್ಲಿ ಕುಳಿತು ಆಟ ಆಡುವ ವ್ಯವಸ್ಥೆ ಇದೆ. ಪುಟ್ಟ ಸುರಂಗ ಮಾರ್ಗ, ಜಾರುಬಂಡೆ ಮತ್ತು ಆ್ಯಂಪಿ ಥಿಯೇಟರ್ ನಿರ್ಮಿಸಲಾಗಿದೆ. ಬಾಸ್ಕೆಟ್ ಬಾಲ್ ಮೈದಾನಕ್ಕೆ ಇಪಿಡಿಎಂ ನೆಲಹಾಸು ಹೊದಿಸಲಾಗಿದೆ. ಆಟವಾಡುವಾಗ ಮಕ್ಕಳು ಬಿದ್ದರೂ ನೋವಾಗುವುದಿಲ್ಲ. ಸಣ್ಣ ಕೆರೆಯಲ್ಲಿ ದೋಣಿ ವಿಹಾರ ಮಾಡುವ ಅವಕಾಶವೂ ಇದೆ.

ಟ್ರಾಫಿಕ್ ಉದ್ಯಾನ ನವೀಕರಣ: ಮನೋರಂಜನೆಯ ಮೂಲಕ ರಸ್ತೆ ಸುರಕ್ಷತೆ ಹಾಗೂ ಸಂಚಾರ ನಿಯಮಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಆರಂಭಿಸಿದ್ದ 'ಸಂಚಾರ ಉದ್ಯಾನ' ಸ್ಥಗಿತಗೊಂಡಿತ್ತು. ಒಂದೂವರೆ ಎಕರೆ ಪ್ರದೇಶದಲ್ಲಿರುವ ಈ ಉದ್ಯಾನವನ್ನು ₹5 ಲಕ್ಷ ವೆಚ್ಚದಲ್ಲಿ ನವೀಕರಿಸಿ, ಪುನರಾರಂಭಿಸಲಾಗಿದೆ. ಇಲ್ಲಿ ಎರಡು ಕಡೆ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ರಸ್ತೆ ತಿರುವಿನ ಚಿಹ್ನೆಗಳು, ಝೀಬ್ರಾ ಕ್ರಾಸ್ ಕೂಡ ಇದೆ. ಮಕ್ಕಳು ತಾವೇ ವಾಹನಗಳನ್ನು ಚಲಾಯಿಸುವ ಮೂಲಕ ಸಂಚಾರದ ಅನುಭವ ಪಡೆದುಕೊಳ್ಳಬಹುದು. ಇದಕ್ಕಾಗಿಯೇ 10 ಎಲೆಕ್ಟ್ರಿಕ್ ಕಾರುಗಳು, 5 ಬೈಕ್‌ಗಳು, 5 ಸೈಕಲ್‌ಗಳನ್ನು ಖರೀದಿಸಲಾಗಿದೆ. ಮಕ್ಕಳಿಗೆ ₹30 ಪ್ರವೇಶ ದರವಿದೆ.

'ರಸ್ತೆ ಸುರಕ್ಷತೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಮಕ್ಕಳಿಗೆ ರಸ್ತೆ ಸಂಚಾರ ನಿಯಮಗಳ ಕುರಿತು ಅರಿವು ಮೂಡಿಸಲು ಈ ಉದ್ಯಾನ ಪ್ರಾರಂಭಿಸಲಾಗಿದೆ. ಮಕ್ಕಳು ಇಲ್ಲಿ ಪಠ್ಯದ ಜೊತೆಗೆ ಪ್ರಾಯೋಗಿಕವಾಗಿ ವಾಹನ ಚಲಾಯಿಸುವ ಮೂಲಕ ರಸ್ತೆ ಸಂಚಾರದ ನಿಯಮಗಳ ಕುರಿತು ಮಾಹಿತಿ ಪಡೆದುಕೊಳ್ಳಬಹುದು. ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸುವಂತಹ ಸುರಕ್ಷತಾ ಕ್ರಮಗಳ ಬಗ್ಗೆಯೂ ಸಲಹೆ ನೀಡಲಾಗುತ್ತದೆ' ಎಂದು ಜವಾಹರ್ ಬಾಲಭವನ ಸೊಸೈಟಿ ಅಧ್ಯಕ್ಷ ಬಿ.ಆರ್. ನಾಯ್ಡು 'ಪ್ರಜಾವಾಣಿ'ಗೆ ತಿಳಿಸಿದರು.

'ಬಾಲಭವನದಲ್ಲಿನ ಈ ಹೊಸ ಪ್ರಯತ್ನವು ಮಕ್ಕಳಿಗೆ ಶಿಕ್ಷಣ ಮತ್ತು ನೈತಿಕ ಜೀವನ ಶೈಲಿಯನ್ನು ಒಟ್ಟುಗೂಡಿಸುವ ಒಂದು ಹೆಜ್ಜೆ ಆಗಿದೆ. ಶಿಕ್ಷಣ ಸಂಸ್ಥೆ, ಪಾಲಕರು ತಮ್ಮ ಮಕ್ಕಳನ್ನು ಇಲ್ಲಿಗೆ ಕರೆತಂದು ರಸ್ತೆ ಸುರಕ್ಷತೆ, ಸಂಚಾರ ನಿಯಮಗಳ ಕುರಿತು ಪ್ರಾಯೋಗಿಕ ಅನುಭವ ನೀಡಬಹುದು' ಎಂದು ಆಹ್ವಾನ ನೀಡಿದರು.



ನವೀಕರಿಸಲಾದ ಟ್ರಾಫಿಕ್ ಉದ್ಯಾನದಲ್ಲಿ ನಿಂತಿರುವ ಎಲೆಕ್ಟ್ರಿಕ್ ವಾಹನಗಳು




ರಾಕ್ ಕ್ಲೈಂಬಿಂಗ್‌ನ ಮಾದರಿಯನ್ನು ಏರಿದ ಬಾಲಕಿ

₹5 ಲಕ್ಷ ಟ್ರಾಫಿಕ್ ಉದ್ಯಾನದ ನವೀಕರಣದ ವೆಚ್ಚ

₹40 ಲಕ್ಷ ರಾಕ್ ಕ್ಲೈಂಬಿಂಗ್ ಮಾದರಿ ನಿರ್ಮಾಣದ ವೆಚ್ಚ

₹1.50 ಕೋಟಿ ಬಾಲಭವನದ ವಾರ್ಷಿಕ ಸರಾಸರಿ ಆದಾಯ



ಅಂಗವಿಕಲ ಮಕ್ಕಳಿಗಾಗಿ ಉದ್ಯಾನ

ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ.

ಅಂಕಿ ಅಂಶ

12 ಎಕರೆ ಬಾಲಭವನದ ವಿಸ್ತೀರ್ಣ

1.2 ಕಿ.ಮೀ ರೈಲು ಹಳಿಯ ಉದ್ದ

8 ಸಾವಿರದಿಂದ **10** ಸಾವಿರ ವಾರಂತ್ಯದಲ್ಲಿ ಭೇಟಿ ನೀಡುವವರ ಸಂಖ್ಯೆ

₹30 ಟ್ರಾಫಿಕ್ ಉದ್ಯಾನ ಟಿಕೆಟ್ ದರ

₹30 ರಾಕ್ ಕ್ಲೈಂಬಿಂಗ್ ಟಿಕೆಟ್ ದರ (ಮಕ್ಕಳಿಗೆ)

₹10 ಮಕ್ಕಳಿಗೆ, **₹30** ದೊಡ್ಡವರಿಗೆ ಬೋಟಿಂಗ್ ಟಿಕೆಟ್ ದರ

ರಾಕ್ ಕ್ಲೈಂಬಿಂಗ್ ಸಾಹಸ ಕ್ರೀಡೆ

'ಬಾಲಭವನದ ಆವರಣದಲ್ಲಿರುವ ₹40 ಲಕ್ಷ ವೆಚ್ಚದಲ್ಲಿ 30 ಅಡಿ ಎತ್ತರದ ಹಾಗೂ 12 ಅಡಿ ಅಗಲದ ಕೃತಕ ಗೋಡೆಯನ್ನು (ಹಗ್ಗದ ಮೂಲಕ ಬಂಡೆ ಏರುವುದು) ನಿರ್ಮಿಸಲಾಗಿದೆ. ಇಲ್ಲಿ ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಲಾಗುತ್ತದೆ. ಮಕ್ಕಳ ತಾಳ್ಮೆ, ಏಕಾಗ್ರತೆ, ಧೈರ್ಯ, ಆತ್ಮವಿಶ್ವಾಸ ಸಮತೋಲನ ಹೆಚ್ಚಿಸುವಲ್ಲಿ ಈ ಕ್ರೀಡೆ ಸಹಕಾರಿ ಆಗಲಿದೆ' ಎಂದು ಜವಾಹರ್ ಬಾಲಭವನ ಸೊಸೈಟಿಯ ಅಧ್ಯಕ್ಷ ಬಿ.ಆರ್. ನಾಯ್ಡು ಹೇಳಿದರು.



'ಮಕ್ಕಳ ಹಾಗೂ ಬಾಲಭವನದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ. ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರತರಲು ಸೃಜನಶೀಲ ಸಾಮರ್ಥ್ಯ ಹೆಚ್ಚಿಸುವ ಭೌತಿಕ ಮತ್ತು ಮಾನಸಿಕ ಕ್ರೀಡಾ ಚಟುವಟಿಕೆಗಳನ್ನು ಬಾಲಭವನದಲ್ಲಿ ಆಯೋಜಿಸಲಾಗುತ್ತಿದೆ' ಎಂದರು.

ಪೋಥಿಸ್‌ಗೆ ₹1 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ರಾಜ್ಯೋತ್ಸವದ ಅಂಗವಾಗಿ ಗ್ರಾಹಕರನ್ನು ಸೆಳೆಯಲು ಲಕ್ಕಿ ಡಿಪ್ ಘೋಷಣೆ ಮಾಡಿ ಅದನ್ನು ಡ್ರಾ ಮಾಡದೆ ವಂಚಿಸುವ ಮೂಲಕ ಅನ್ಯಾಯದ ವ್ಯಾಪಾರ ನಡೆಸಲಾಗಿದೆ' ಎಂಬ ಆರೋಪದಡಿ ನಗರದ ಪ್ರತಿಷ್ಠಿತ ಪೋಥಿಸ್ ಚಿಲ್ಲರೆ ವ್ಯಾಪಾರ ಲಿಮಿಟೆಡ್, 'ಗ್ರಾಹಕರ ಕಲ್ಯಾಣ ನಿಧಿಗೆ ₹1 ಲಕ್ಷ ಪಾವತಿಸಬೇಕು' ಎಂದು ಬೆಂಗಳೂರು ನಗರ ಜಿಲ್ಲಾ ಗ್ರಾಹಕರ ಪರಿಹಾರ ವೇದಿಕೆ ಆದೇಶಿಸಿದೆ.

ಈ ಸಂಬಂಧ ಜಾಲಹಳ್ಳಿ ಲೇ ಔಟ್‌ನ ಬಿಇಎಲ್ ರಸ್ತೆಯ ನಿವಾಸಿ ಎಚ್.ಕೆ.ಶ್ರೀನಿವಾಸ್ (62) ಸಲ್ಲಿಸಿದ್ದ ದೂರನ್ನು ವೇದಿಕೆಯ ಅಧ್ಯಕ್ಷೆ ಎಂ.ಶೋಭಾ, ಸದಸ್ಯರಾದ ಕೆ.ಅನಿತಾ ಶಿವಕುಮಾರ್ ಮತ್ತು ಸುಮಾ ಅನಿಲ್ ಕುಮಾರ್ ಅವರಿದ್ದ ಪೀಠವು ವಿಚಾರಣೆ ನಡೆಸಿ ಭಾಗಶಃ ಪುರಸ್ಕರಿಸಿದೆ.

ಶ್ರೀನಿವಾಸ್ ಅವರು ಖರೀದಿಸಿರುವ ಒಟ್ಟು ಮೊತ್ತದ ಜತೆಗೆ ಮಾನಸಿಕ ಹಿಂಸೆ ಅನುಭವಿಸಿದ್ದಾಗಿ ₹25 ಸಾವಿರ ಮತ್ತು ಕಾನೂನು ಹೋರಾಟಕ್ಕೆ ಪರಿಹಾರವಾಗಿ ₹5 ಸಾವಿರ ಸೇರಿದಂತೆ ಒಟ್ಟು ₹30 ಸಾವಿರ ಮೊತ್ತದ ಪರಿಹಾರ ಹಾಗೂ ಗ್ರಾಹಕರ ಕಲ್ಯಾಣ ನಿಧಿಗೆ ₹1 ಲಕ್ಷ ಪಾವತಿ ಮಾಡಬೇಕು. ಈ ಮೊತ್ತವನ್ನು ಆದೇಶದ ಪ್ರತಿ ದೊರೆತ 30 ದಿನಗಳಲ್ಲಿ ಪಾವತಿಸಬೇಕು. ಇಲ್ಲವಾದಲ್ಲಿ ವಾರ್ಷಿಕ ಶೇ10ರ ರಷ್ಟು ಬಡ್ಡಿ ದರದೊಂದಿಗೆ ಪಾವತಿಸಬೇಕಾಗುತ್ತದೆ' ಎಂದು ಪೀಠವು ಎಚ್ಚರಿಸಿದೆ.

'ಮಳಿಗೆಯಲ್ಲಿ ವ್ಯಾಪಾರ ಮಾಡಿದ್ದ ದೂರುದಾರರೂ ಆದ ಎಚ್.ಕೆ.ಶ್ರೀನಿವಾಸ್ 18 ಲಕ್ಕಿ ಕೂಪನ್‌ಗಳನ್ನು ಹೊಂದಿದ್ದು, ಪರಿಹಾರವನ್ನು ಪಡೆಯಲು ಅರ್ಹರಾಗಿದ್ದಾರೆ. ಈ 18 ಕೂಪನ್‌ಗಳಿಗೆ ₹1,782 ಮೊತ್ತವನ್ನು ಪಾವತಿಸಿದ್ದಾರೆ. ಪೋಥಿಸ್ ಇಷ್ಟೂ ಮೊತ್ತವನ್ನು ಹಿಂದಿರುಗಿಸುವ ಹೊಣೆಗಾರನಾಗಿದೆ' ಎಂದು ಪೀಠವು ತಿಳಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಎದುರುದಾರರಾದ ಪೋಥಿಸ್‌ಗೆ ನೋಟಿಸ್ ಜಾರಿ ಮಾಡಿದರೂ ಅವರ ಪರವಾಗಿ ಯಾರೂ ಆಯೋಗದ ಮುಂದೆ ಹಾಜರಾಗಿ ತಮ್ಮನ್ನು ಸಮರ್ಥನೆ ಮಾಡಿಕೊಳ್ಳಲು ಮುಂದಾಗಿಲ್ಲ. ಆದ್ದರಿಂದ, ದೂರುದಾರರು ಆರೋಪಿಸಿರುವಂತೆ ಪೋಥಿಸ್‌ಗೆ ಅನ್ಯಾಯದ ವ್ಯಾಪಾರ ನಡೆಸುವ ಅಭ್ಯಾಸ ಇದೆ ಎಂಬ ಆರೋಪವನ್ನು ಗ್ರಾಹಕರ ರಕ್ಷಣಾ ಕಾಯ್ದೆ–2019 ಕಲಂ 39(1) (ಜಿ) ಅನುಸಾರ ಪರಿಗಣಿಸಲಾಗಿದೆ' ಎಂದು ಪೀಠವು ತಿಳಿಸಿದೆ.

ಅತ್ಯಾಚಾರ ಆರೋಪ: ವಜಾ

ಡೇಟಿಂಗ್ ಆ್ಯಪ್ 'ಬಂಬಲ್' ಮೂಲಕ ಮಹಿಳೆ ಪರಿಚಯ

ಪ್ರಜಾವಾಣಿ ವಾರ್ತೆ



ಬೆಂಗಳೂರು: ತನಗೆ ಈಗಾಗಲೇ ಮದುವೆ ಆಗಿದೆ ಎಂಬ ಸತ್ಯವನ್ನು ಮುಚ್ಚಿಟ್ಟು ಪರಪುರುಷನನ್ನು ಪ್ರೇಮಿಸಿ, ಆತನೊಂದಿಗೆ ತನ್ನಂತರಂಗ ಹಂಚಿಕೊಂಡು ಮಿಲನದ ಕ್ಷಣಗಳಲ್ಲಿ ಮಿಂದೆದ್ದ 31ರ ಹರಯದ ಮಹಿಳೆಯೊಬ್ಬರು; 'ಈತ ನನ್ನನ್ನು ವಿವಾಹವಾಗುವುದಾಗಿ ನಂಬಿಸಿ ಮೋಸ ಮಾಡಿದ್ದಾನೆ, ಅತ್ಯಾಚಾರ ಎಸಗಿದ್ದಾನೆ' ಎಂದು ಆರೋಪಿಸಿ ಪರಪುರುಷನ ವಿರುದ್ಧ ದಾಖಲಿಸಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ವಜಾಗೊಳಿಸಿದೆ.

'ನನ್ನ ವಿರುದ್ಧ ನಗರದ 30ನೇ ಎಸಿಎಂಎಂ ವಿಚಾರಣಾ ನ್ಯಾಯಾಲಯದಲ್ಲಿ, ಭಾರತೀಯ ದಂಡ ಸಂಹಿತೆ–1860ರ ಕಲಂ 506, 376 ಮತ್ತು 420ರ ಅಡಿಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸಬೇಕು' ಎಂದು ಕೋರಿ 31 ವರ್ಷದ ಪುರುಷ ದಾಖಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

'ಈಗಾಗಲೇ ನೆರವೇರಿರುವ ಮದುವೆ ಅಮಾನ್ಯವಾಗದ ಹೊರತು ವಿವಾಹಿತ ಮಹಿಳೆಯೊಬ್ಬರನ್ನು ಮತ್ತೊಬ್ಬ ಪುರುಷ ಮದುವೆಯಾಗುತ್ತೇನೆ ಎಂಬ ಭರವಸೆ ನೀಡಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ, ಅರ್ಜಿದಾರ ಸಂತ್ರಸ್ತ ಪುರುಷನ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ನ್ಯಾಯಪೀಠ ರದ್ದುಪಡಿಸಿದೆ.

'ಇಬ್ಬರೂ ಡೇಟಿಂಗ್ ಆ್ಯಪ್ ಮೂಲಕ ಪ್ರಣಯಲೋಕದ ಸ್ಥಾಯಿ ಸಂಬಂಧವೊಂದಕ್ಕೆ ನಾಂದಿ ಹಾಡಿದ್ದಾರೆ. ಇಬ್ಬರ ಮಧ್ಯದ ದೈಹಿಕ ಸಂಬಂಧ ಪರಸ್ಪರ ಒಪ್ಪಿಗೆ ಮೂಲಕ ಮೇಳೈಸಿದೆ. ಹೀಗಾಗಿ, ಇದನ್ನು ಅತ್ಯಾಚಾರ ಎಂದು ಪರಿಗಣಿಸಲು ಆಗದು' ಎಂದು ಹೇಳಿದೆ.

'ಮಹಿಳೆಯು, ತಾನೊಬ್ಬ ವಿಚ್ಛೇದಿತೆ ಎಂದು ಆನ್‌ಲೈನ್ ಡೇಟಿಂಗ್ ತಾಣ 'ಬಂಬಲ್' ನಲ್ಲಿ ತನ್ನನ್ನು ಹೊರಜಗತ್ತಿಗೆ ಪರಿಚಯಿಸಿಕೊಂಡಿದ್ದಾಳೆ. ಇದನ್ನು ನೋಡಿದ್ದ ಅರ್ಜಿದಾರ ಆಕೆಯ ಬಳಿ ತನ್ನ ಸ್ನೇಹ ನಿವೇದನೆ ಮಾಡಿಕೊಂಡಿದ್ದಾರೆ. ಸ್ನೇಹ ಸಂಬಂಧವಾಗಿ ಅರಳಿ ಎರಡು ದೇಹಗಳ ಬೆಸುಗೆಗೆ ತಿದಿ ಒತ್ತಿದೆ. ಇದೆಲ್ಲಾ ಯಾವುದೇ ತಕರಾರಿಗೆ ಅವಕಾಶ ನೀಡದೆ ಸ್ವಚ್ಛಂದದಿಂದ ನಿವೇದನೆಗೊಂಡ ಅಂಶವಾಗಿರುವುದು ಸ್ಪಷ್ಟವಾಗಿದೆ' ಎಂದು ನ್ಯಾಯಪೀಠ ಹೇಳಿದೆ.

'ದಿನಕಳೆದಂತೆ ಅರ್ಜಿದಾರ ಪುರುಷನಿಗೆ ತಾನೇ ಮೋಸ ಹೋಗಿರುವ ಅರಿವಾಗಿದೆ. ಮಹಿಳೆ ವಿಚ್ಛೇದಿತೆ ಅಲ್ಲ. ಆಕೆಯ ಮದುವೆ ಇನ್ನೂ ಬಿಡುಗಡೆಗೊಂಡಿಲ್ಲ. ಆಕೆಗೆ ಐದು ವರ್ಷದ ಮಗಳೂ ಇದ್ದಾಳೆ ಎಂಬುದು ಗೊತ್ತಾಗಿದೆ. ಇದೆಲ್ಲಾ ಆತನ ಮನಸ್ಸಿನ ಆಳಕ್ಕೆ ಇಳಿದು ಘಾಸಿಗೊಳಿಸಿದೆ. ಸಹಜವಾಗಿಯೇ ನಿರಾಸೆಗೊಂಡು ಸಂಬಂಧವನ್ನು ದೂರೀಕರಿಸಿದ್ದಾರೆ. ಹೀಗಾಗಿ, ಮಹಿಳೆ ನೀಡಿರುವ ದೂರು ಮತ್ತು ಈ ಸಂಬಂಧ ವಿಚಾರಣಾ ನ್ಯಾಯಾಲಯದಲ್ಲಿನ ಪ್ರಕರಣ ಮುಂದುವರಿದದ್ದೇ ಆದಲ್ಲಿ, ಅದು ಕಾನೂನಿನ ದುರುಪಯೋಗ ಆಗುತ್ತದೆ' ಎಂದು ನ್ಯಾಯಪೀಠ ಪುರುಷನನ್ನು ಖಟ್ಲೆಯಿಂದ ವಿಮುಕ್ತಗೊಳಿಸಿ ಆದೇಶಿಸಿದೆ.

ಅಪಘಾತ: ಬೈಕ್ ಸವಾರ ಸಾವು

ಬೆಂಗಳೂರು: ಮಹದೇವಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸವಾರರೊಬ್ಬರು ಮೃತಪಟ್ಟಿದ್ದಾರೆ.

ಚಿನ್ನಯ್ಯನಪಾಳ್ಯ ನಿವಾಸಿ ಶ್ರೀಕಾಂತ್(28) ಮೃತ ಸವಾರ. ಸೋಮವಾರ ನಸುಕಿನ ವೇಳೆ ಹೂಡಿ ಮೆಟ್ರೊ ನಿಲ್ದಾಣದ ಬಳಿ ಈ ಘಟನೆ ನಡೆದಿದೆ.

ಖಾಸಗಿ ಕಂಪನಿಯಲ್ಲಿ ಕಚೇರಿ ಸಹಾಯಕರಾಗಿದ್ದ ಶ್ರೀಕಾಂತ್ ಭಾನುವಾರ ರಾತ್ರಿ ಕುಟುಂಬದ ಜತೆಗೆ ತಮ್ಮ ಮಗುವಿನ ಪ್ರಥಮ ವರ್ಷದ ಜನ್ಮದಿನ ಆಚರಿಸಿದ್ದರು. ಬಳಿಕ ಸ್ನೇಹಿತರ ಜತೆಗೆ ಪಾರ್ಟಿ ಮುಗಿಸಿಕೊಂಡು ಮುಂಜಾನೆ ದ್ವಿಚಕ್ರ ವಾಹನದಲ್ಲಿ ಬರುವಾಗ ಮೆಟ್ರೊ ನಿಲ್ದಾಣದ ಬಳಿ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅತಿವೇಗದ ಚಾಲನೆಯೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಈ ಸಂಬಂಧ ಮಹದೇವಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಚಿತ ಪಡಿತರ ಎಷ್ಟು ಕಾಲ ನೀಡಬಹುದು?: 'ಸುಪ್ರೀಂ'



ನವದೆಹಲಿ (ಪಿಟಿಐ): ವಲಸೆ ಕಾರ್ಮಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಅಗತ್ಯವನ್ನು ಒತ್ತಿ ಹೇಳಿರುವ ಸುಪ್ರೀಂ ಕೋರ್ಟ್, 'ಉಚಿತ ಪಡಿತರವನ್ನು ಎಷ್ಟು ಕಾಲ ನೀಡಬಹುದು' ಎಂದು ಕೇಂದ್ರ ಸರ್ಕಾರವನ್ನು ಸೋಮವಾರ ಪ್ರಶ್ನಿಸಿತು.

2013ರ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ 81 ಕೋಟಿ ಜನರಿಗೆ ಉಚಿತ ಅಥವಾ ಸಬ್ಸಿಡಿ ಪಡಿತರವನ್ನು ನೀಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರವು ತಿಳಿಸಿದಾಗ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಮನಮೋಹನ್ ಅವರನ್ನೊಳಗೊಂಡ ಪೀಠ ಅಚ್ಚರಿ ವ್ಯಕ್ತಪಡಿಸಿತು.

'ತೆರಿಗೆ ಪಾವತಿದಾರರು ಮಾತ್ರ ಇದರಿಂದ ಹೊರಗುಳಿದಿದ್ದಾರೆ ಎಂದರ್ಥ' ಎಂದು ಪೀಠವು ಕೇಂದ್ರ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರಿಗೆ ಹೇಳಿತು.

'ಇ–ಶ್ರಮ್' ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿರುವ ಎಲ್ಲ ವಲಸೆ ಕಾರ್ಮಿಕರಿಗೆ ಉಚಿತ ಪಡಿತರ ನೀಡುವುದಕ್ಕೆ ಸಂಬಂಧಿಸಿದಂತೆ ನಿರ್ದೇಶನ ನೀಡಬೇಕು ಎಂದು ಎನ್‌ಜಿಒ ಪರ ಹಾಜರಿದ್ದ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು ಪೀಠವನ್ನು ಕೇಳಿಕೊಂಡರು.

ಅದಕ್ಕೆ ಪೀಠವು, 'ಎಷ್ಟು ಸಮಯದವರೆಗೆ ಉಚಿತ ಪಡಿತರ ನೀಡಬಹುದು? ವಲಸೆ ಕಾರ್ಮಿಕರಿಗೆ ಉದ್ಯೋಗಾವಕಾಶ ದೊರಕಿಸಿಕೊಡಲು ಮತ್ತು ಅವರ ಕೌಶಲ ಅಭಿವೃದ್ಧಿಗಾಗಿ ನಾವು ಏಕೆ ಕೆಲಸ ಮಾಡಬಾರದು? ಎಂದು ಹೇಳಿತು.

ಕೋವಿಡ್ ಸಮಯದಲ್ಲಿ ವಲಸೆ ಕಾರ್ಮಿಕರು ಅನುಭವಿಸಿದ ಸಂಕಷ್ಟವನ್ನು ಮನಗಂಡು ತಾನು ದಾಖಲಿಸಿಕೊಂಡ ಸ್ವಯಂಪ್ರೇರಿತ ದೂರಿನ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

ಹೆಗ್ಗುಂದ : ಮತ್ತೆ 3 ಚಿರತೆ ಪ್ರತ್ಯಕ್ಷ

ದಾಬಸ್ ಪೇಟೆ: ಸೋಂಪುರ ಹೋಬಳಿ ನರಸೀಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಗ್ಗುಂದ ಬೆಟ್ಟದ ತಪ್ಪಲಿನಲ್ಲಿ ಭಾನುವಾರ ಹಾಗೂ ಸೋಮವಾರ ಮೂರು ಚಿರತೆಗಳು ಕಾಣಿಸಿಕೊಂಡಿವೆ.

ಬೆಟ್ಟದ ತಪ್ಪಲಿಗೆ ಹೊಂದಿಕೊಂಡ ಕೆರೆಪಾಳ್ಯ ಭಾಗದಲ್ಲಿ ಬೋನಿಗೆ 7 ವರ್ಷದ ಹೆಣ್ಣು ಚಿರತೆ ಶನಿವಾರ ಬಿದ್ದಿತ್ತು.

ಚಿರತೆ ಸೆರೆಸಿಕ್ಕ ನಂತರ ಇಲ್ಲಿನ ಜನ ಸಮಾಧಾನಗೊಂಡಿದ್ದರು.

ಕೆರೆಪಾಳ್ಯದ ನಿವಾಸಿಗಳು, ಇನ್ನೂ ಚಿರತೆಗಳು ಇರುವ ಬಗ್ಗೆ ಅನುಮಾನ ವ್ಯಕ್ತಪಡಿಸಿದಂತೆ ಬುಗಡಿಹಳ್ಳಿ ಕೆರೆಪಾಳ್ಯ ಕೆರೆಗೆ ಹೊಂದಿಕೊಂಡ ಜಮೀನುಗಳ ಪಕ್ಕದ ಬಂಡೆಗಳ ಮೇಲೆ ಮೂರು ಚಿರತೆಗಳು ಕಾಣಿಸಿಕೊಂಡಿವೆ.

'ಜಾನುವಾರುಗಳಿಗೆ ಮೇವು ತರಲು ಹೊಲದ ಹತ್ತಿರ ಹೋಗುತ್ತಿದ್ದೆ. ಬಂಡೆಗಳ ಮೇಲೆ ಚಿರತೆಗಳು ಓಡಾಡುತ್ತಿದ್ದವು' ಎಂದು ಪ್ರತ್ಯಕ್ಷದರ್ಶಿ ವಸಂತ್ ತಿಳಿಸಿದರು.

ಕಲಹ: ಕಂಪನಿ ನಿರ್ದೇಶಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರತ್‌ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮಂಜುನಾಥ್ ಲೇಔಟ್‌ನಲ್ಲಿ ನೆಲಸಿದ್ದ ವ್ಯಕ್ತಿಯೊಬ್ಬರು, 26 ಪುಟಗಳ ಮರಣ ಪತ್ರ ಬರೆದಿಟ್ಟು ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಅತುಲ್

ಉತ್ತರ ಪ್ರದೇಶದ ಅತುಲ್ ಸುಭಾಷ್(34) ಆತ್ಮಹತ್ಯೆ ಮಾಡಿಕೊಂಡವರು. ಕಂಪನಿಯೊಂದರಲ್ಲಿ ನಿರ್ದೇಶಕರಾಗಿ ಅವರು ಕೆಲಸ ಮಾಡುತ್ತಿದ್ದರು.

ಮರಣ ಪತ್ರವನ್ನೂ ಇ–ಮೇಲ್ ಮೂಲಕ ಸುಪ್ರೀಂ ಕೋರ್ಟ್, ಹೈಕೋರ್ಟ್, ತಮ್ಮ ಕಚೇರಿ, ಸರ್ಕಾರೇತರ ಸಂಸ್ಥೆ, ಕುಟುಂಬ ಸದಸ್ಯರಿಗೆ ಕಳುಹಿಸಿ ಭಾನುವಾರ ರಾತ್ರಿ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಾರತ್‌ಹಳ್ಳಿ ಪೊಲೀಸ್ ಠಾಣೆಯಲ್ಲಿ ಅತುಲ್ ಸುಭಾಷ್ ಪತ್ನಿ ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಅತುಲ್ ಐದು ವರ್ಷದ ಹಿಂದೆ ವಿವಾಹವಾಗಿದ್ದರು. ಆರಂಭದಲ್ಲಿ ಉತ್ತರ ಪ್ರದೇಶದಲ್ಲೇ ದಂಪತಿ ನೆಲಸಿದ್ದರು. ಎರಡು ವರ್ಷದ ಹಿಂದೆ ಬೆಂಗಳೂರಿಗೆ ಬಂದಿದ್ದರು. ಮಂಜುನಾಥ್ ಲೇಔಟ್‌ನ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ವೊಂದರಲ್ಲಿ ವಾಸವಾಗಿದ್ದರು. ಈ ಮಧ್ಯೆ ಕೌಟುಂಬಿಕ ವಿಚಾರಕ್ಕೆ ಗಲಾಟೆ ಮಾಡಿಕೊಂಡು, ಪತ್ನಿ ಉತ್ತರ ಪ್ರದೇಶಕ್ಕೆ ವಾಪಸ್ ತೆರಳಿದ್ದರು ಎಂದು ಮೂಲಗಳು ಹೇಳಿವೆ.

'ಎನ್‌ಜಿಒ ಸೇರಿದಂತೆ ವಿವಿಧ ವಿಳಾಸಕ್ಕೆ ಮರಣ ಪತ್ರವನ್ನು ಇ–ಮೇಲ್ ಮಾಡಿ, ಸಾಧ್ಯವಾದರೆ ನನ್ನ ಕುಟುಂಬಕ್ಕೆ ಸಹಾಯ ಮಾಡುವಂತೆಯೂ ಉಲ್ಲೇಖಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

'ನ್ಯಾಯ ಸಿಗುವುದು ಬಾಕಿಯಿದೆ ಎಂಬ ಪೋಸ್ಟರ್ ಅನ್ನು ಎದೆಯ ಮೇಲೆ ಅಂಟಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮರಣಪತ್ರದಲ್ಲಿ ದಿನಚರಿಯನ್ನು ದಾಖಲಿಸಿದ್ದಾರೆ. ಕುಟುಂಬಸ್ಥರ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಪ್ರಕರಣದ ತನಿಖೆ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

ಯಲಹಂಕ ನ್ಯೂಟೌನ್‌ನ ಕಾರ್ಖಾನೆ ಆವರಣದಲ್ಲಿ ಘಟನೆ

ಇಬ್ಬರ ಕೊಲೆ: ಸ್ನೇಹಿತರಿಂದಲೇ ಕೃತ್ಯ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ನ್ಯೂಟೌನ್‌ನ ಕೈಗಾರಿಕಾ ಪ್ರದೇಶದಲ್ಲಿ ಮುಚ್ಚಿದ ಕಾರ್ಖಾನೆಯೊಂದರ ಆವರಣದಲ್ಲಿ ಸೆಕ್ಯೂರಿಟಿ ಗಾರ್ಡ್ ಹಾಗೂ ಗಾರ್ಮೆಂಟ್ಸ್ ಉದ್ಯೋಗಿಯನ್ನು ದುಷ್ಕರ್ಮಿಗಳು ಕೊಲೆ ಮಾಡಿ ಪರಾರಿ ಆಗಿದ್ದಾರೆ. ಆರೋಪಿಗಳ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ನೇಪಾಳದ ಬಿಕ್ರಂ ಬಿಸ್ವಜಿತ್(24) ಮತ್ತು ಬಿಹಾರದ ಚೋಟು ತೂರಿ(33) ಕೊಲೆಯಾದವರು.

ಯಲಹಂಕ ನ್ಯೂಟೌನ್‌ನ ಕೈಗಾರಿಕಾ ಪ್ರದೇಶದ 4ನೇ ಹಂತದಲ್ಲಿ ಬಾಗಿಲು ಮುಚ್ಚಿರುವ ಎಲೆಕ್ಟ್ರಿಕಲ್ ಕಾರ್ಖಾನೆಯೊಂದರ ಆವರಣದಲ್ಲಿ ಈ ಕೃತ್ಯ ನಡೆದಿದೆ. ಬಿಕ್ರಂ ಅವರು ಕೈಗಾರಿಕಾ ಪ್ರದೇಶದ ಎಲೆಕ್ಟ್ರಿಕಲ್ ಕಾರ್ಖಾನೆಯೊಂದರ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ಚೋಟು ತೂರಿ ಅವರು ಸಮೀಪದ ಗಾರ್ಮೆಂಟ್ಸ್‌ನಲ್ಲಿ ವಾಹನ ಚಾಲಕರಾಗಿ ಕೆಲಸ ಮಾಡುತ್ತಿದ್ದರು.



ಬಿಕ್ರಂ ಬಿಸ್ವಜಿತ್



ಚೋಟು ತೂರಿ

'ಬಿಕ್ರಂ ಬಿಸ್ವಜಿತ್ ಹಾಗೂ ಚೋಟು ತೂರಿ ಅವರ ಸ್ನೇಹಿತರಿಂದಲೇ ಕೃತ್ಯ ನಡೆದಿರುವ ಶಂಕೆಯಿದೆ. ಆರೋಪಿಗಳ ಸುಳಿವು ಲಭಿಸಿದ್ದು ಸದ್ಯದಲ್ಲೇ ಬಂಧಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

'ಕೊಲೆಯಾದ ಇಬ್ಬರೂ ಸ್ನೇಹಿತರಾಗಿದ್ದರು. ಇಬ್ಬರೂ ಇದೇ ಕಾರ್ಖಾನೆ ಆವರಣದಲ್ಲಿ ಮಲಗುತ್ತಿದ್ದರು. ಭಾನುವಾರ ರಾತ್ರಿ ಬಿಕ್ರಂ, ತೂರಿ ಹಾಗೂ ಪರಿಚಯಸ್ಥ ನಾಲ್ವರು ಎಲೆಕ್ಟ್ರಿಕಲ್ ಕಾರ್ಖಾನೆಯ ಆವರಣದಲ್ಲಿ ಮದ್ಯದ ಪಾರ್ಟಿ ಮಾಡಿದ್ದರು' ಎನ್ನಲಾಗಿದೆ.

'ಪಾರ್ಟಿ ನಡೆಯುತ್ತಿದ್ದ ವೇಳೆ ಎರಡು ಗುಂಪುಗಳ ಮಧ್ಯೆ ಗಲಾಟೆ ನಡೆದಿದೆ. ಅದು ವಿಕೋಪಕ್ಕೆ ಹೋಗಿ ಕಲ್ಲು, ಕಬ್ಬಿಣದ ರಾಡ್‌ಗಳು ಹಾಗೂ ಟೈಲ್ಸ್ ಪೀಸ್‌ಗಳಿಂದ ಬಿಕ್ರಂ ಮತ್ತು ಚೋಟು ತೂರಿಯ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿ ಆರೋಪಿಗಳು ಪರಾರಿ ಆಗಿದ್ದಾರೆ' ಎಂದು ಮೂಲಗಳು ಹೇಳಿವೆ.

'ಚೋಟು ಸೋಮವಾರ ಕೆಲಸಕ್ಕೆ ಬಂದಿರಲಿಲ್ಲ. ಕರೆ ಮಾಡಿದರೂ ಸ್ವೀಕರಿಸಿರಲಿಲ್ಲ. ಬಳಿಕ ಆತ ಮಲಗುವ ಜಾಗಕ್ಕೆ ಬಂದು ನೋಡಿದಾಗ ಕೊಲೆ ನಡೆದಿರುವುದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಇಬ್ಬರ ಕುಟುಂಬಸ್ಥರಿಗೆ ಘಟನೆಯ ಮಾಹಿತಿ ನೀಡಲಾಗಿದೆ. ಮತ್ತೊಂದೆಡೆ ಕಾರ್ಖಾನೆ ಸಮೀಪದ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ ನಾಲ್ಕೈದು ಮಂದಿ ಪಾರ್ಟಿ ಮಾಡಿರುವುದು ಗೊತ್ತಾಗಿದೆ. ಹೀಗಾಗಿ ತಲೆಮರೆಸಿಕೊಂಡಿರುವ ನಾಲ್ಕು ಮಂದಿಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಘಟನೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಆರೋಪಿಗಳ ಪತ್ತೆ ಬಳಿಕ ಕಾರಣ ಗೊತ್ತಾಗಲಿದೆ' ಎಂದು ಪೊಲೀಸರು ಹೇಳಿದರು.

ಯಲಹಂಕ ನ್ಯೂಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಡಾ: ಸಿಬಿಐ ತನಿಖೆ ಅರ್ಜಿ ಇಂದು ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಹಗರಣದ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು' ಎಂದು ಕೋರಲಾದ ಅರ್ಜಿಯನ್ನು ಹೈಕೋರ್ಟ್ ಮಂಗಳವಾರ (ಡಿ.10) ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ.

ಈ ಸಂಬಂಧ ಮೈಸೂರಿನ ಸಾಮಾಜಿಕ ಕಾರ್ಯಕರ್ತ ಹಾಗೂ ಪ್ರಕರಣದ ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ರಿಟ್ ಅರ್ಜಿಯು, ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ನ್ಯಾಯಪೀಠದಲ್ಲಿ ಮಂಗಳವಾರ ವಿಚಾರಣೆಗೆ ನಿಗದಿಯಾಗಿದೆ.



ನಟೇಶ್ ಅರ್ಜಿ: 'ಮುಡಾ ನಿವೇಶನ ಹಂಚಿಕೆ ಅಕ್ರಮ ಆರೋಪ ಪ್ರಕರಣದಲ್ಲಿ, ಜಾರಿ ನಿರ್ದೇಶನಾಲಯ (ಇ.ಡಿ) ನನ್ನ ಮನೆಯಲ್ಲಿ ನಡೆಸಿರುವ ಶೋಧ ಹಾಗೂ ಇದಕ್ಕೆ ಸಂಬಂಧಿಸಿದಂತೆ ದಾಖಲು ಮಾಡಿಕೊಂಡಿರುವ ನನ್ನ ಹೇಳಿಕೆ ಕಾನೂನುಬಾಹಿರ' ಎಂದು ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ಸಲ್ಲಿಸಿರುವ ಅರ್ಜಿ ವಿಚಾರಣೆಯೂ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರ ಏಕಸದಸ್ಯ ನ್ಯಾಯಪೀಠದಲ್ಲಿ ಮಂಗಳವಾರ (ಡಿ.10) ನಿಗದಿಯಾಗಿದೆ.

'ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ–2002ರ (ಪಿಎಂಎಲ್‌ಎ) ಕಲಂ 17ರ ಅನುಸಾರ ದಾಖಲಿಸಿ-ಕೊಂಡಿರುವ ನನ್ನ ಹೇಳಿಕೆಯನ್ನು ಕಾನೂನುಬಾಹಿರ ಎಂದು ಘೋಷಿಸಬೇಕು. ಈ ನಿಟ್ಟಿನಲ್ಲಿ ಇ.ಡಿ 2024ರ ನವೆಂಬರ್ 6ರಂದು ನನಗೆ ನೀಡಿರುವ ನೋಟಿಸ್‌ಗೆ ತಡೆ ನೀಡಬೇಕು' ಎಂದು ನಟೇಶ್ ಮಧ್ಯಂತರ ಮನವಿ ಮಾಡಿದ್ದಾರೆ.

ರಾಜ್ಯದಲ್ಲಿರುವ 120 ರಿಟ್ರೊ ಫಿಟ್‌ಮೆಂಟ್ ಸೆಂಟರ್‌ಗಳಲ್ಲಿ ಅನುಷ್ಠಾನ

ಮಾಲಿನ್ಯ ತಡೆಗೆ 'ವಾಹನ್ ಗ್ರೀನ್'

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಮಾಲಿನ್ಯ ತಡೆಗಟ್ಟುವುದಕ್ಕಾಗಿ ವಾಹನ್ ಗ್ರೀನ್ ಸೇವಾ ಸಾಫ್ಟ್‌ವೇರ್ ಅನ್ನು ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ) ಅಭಿವೃದ್ಧಿಪಡಿಸಿದೆ. ಡೀಸೆಲ್, ಪೆಟ್ರೋಲ್ ಎಂಜಿನ್ ಹೊಂದಿರುವ ಹಳೆ ವಾಹನಗಳನ್ನು ಎಲೆಕ್ಟ್ರಿಕ್, ಎಲ್‌ಪಿಜಿ, ಸಿಎನ್‌ಜಿ ಎಂಜಿನ್‌ಗೆ ಪರಿವರ್ತಿಸುವ ಮೂಲಕ ಮಾಲಿನ್ಯವನ್ನು ಶೂನ್ಯಕ್ಕೆ ತರುವುದು ಇದರ ಉದ್ದೇಶ.

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಸೂಚನೆಯಂತೆ ಈ ಸಾಫ್ಟ್‌ವೇರ್ ಅಭಿವೃದ್ಧಿ ಮಾಡಲಾಗಿದೆ. ಕರ್ನಾಟಕದಲ್ಲಿರುವ 120 ರಿಟ್ರೊ ಫಿಟ್‌ಮೆಂಟ್ ಸೆಂಟರ್‌ಗಳ ಸಿಬ್ಬಂದಿಗೆ ಮೂರು ತಿಂಗಳ ಹಿಂದೆಯೇ ತರಬೇತಿಯನ್ನು ನೀಡಲಾಗಿದೆ.



ಮುಂದಿನ ವಾರ ಅಳವಡಿಕೆ

ಸೆಕೆಂಡ್ ಹ್ಯಾಂಡ್ ಕಿಟ್ ಅಳವಡಿಸುವ, ಅನಧಿಕೃತವಾಗಿ ಕಿಟ್ ಅಳವಡಿಸುವ ಪ್ರಕ್ರಿಯೆಗಳು ಹೊಸ ಸಾಫ್ಟ್‌ವೇರ್ ಬಂದ ಮೇಲೆ ನಿಂತು ಹೋಗುತ್ತದೆ. ಈ ಕಾರಣಕ್ಕೆ ನಮ್ಮ ರಾಜ್ಯದ ಕೆಲವರು ನ್ಯಾಯಾಲಯಕ್ಕೆ ಹೋಗಿದ್ದಾರೆ. ದೇಶದ ಎಲ್ಲ ರಾಜ್ಯಗಳಲ್ಲಿಯೂ ಜಾರಿಯಾಗುತ್ತಿರುವ ಯೋಜನೆ ಇದಾಗಿದೆ. ಪ್ರಕರಣ ಇತ್ಯರ್ಥ ಆದ ಕೂಡಲೇ ರಾಜ್ಯದಲ್ಲಿಯೂ ಜಾರಿಯಾಗಲಿದೆ ಎಂದು ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ಜ್ಞಾನೇಂದ್ರ ಕುಮಾರ್ ತಿಳಿಸಿದ್ದಾರೆ.

ಎಲ್ಲ ವಾಹನಗಳಿಗೆ ಬಳಕೆ: ದ್ವಿಚಕ್ರ ವಾಹನಗಳು, ಆಟೊರಿಕ್ಷಾಗಳು, ಟ್ಯಾಕ್ಸಿ, ಬಸ್ ಸೇರಿ ಎಲ್ಲ ವಾಹನಗಳ ಎಂಜಿನ್‌ಗಳನ್ನು ಪರಿವರ್ತಿಸಲು ಅವಕಾಶವಿದೆ. ಎಲ್ಲ ವಾಹನಗಳು ಈ ರೀತಿ ನೈಸರ್ಗಿಕ ಅನಿಲ ಅಥವಾ ನೈಸರ್ಗಿಕ ಇಂಧನ ಬಳಸಿದರೆ ಹೊಗೆ ಉಗುಳುವುದು ಕಡಿಮೆಯಾಗುತ್ತದೆ. ಇದು ವಾಹನಗಳಿಗೆ ಮಾತ್ರವಲ್ಲ, ನಗರಗಳಲ್ಲಿ ವಾಸಿಸುವವರ ಆರೋಗ್ಯದ ದೃಷ್ಟಿಯಿಂದಲೂ ಪ್ರಯೋಜನಕಾರಿಯಾಗಿದೆ. ಇಂಧನ ವೆಚ್ಚವೂ ಕಡಿಮೆಯಾಗಲಿದೆ.

ಅನಧಿಕೃತ ಅಳವಡಿಕೆಗೆ ಕಡಿವಾಣ: ವಾಹನದ ಮೂಲ ಎಂಜಿನ್ ಮತ್ತು ಇತರ ಘಟಕಗಳನ್ನು ಪರ್ಯಾಯ ಶಕ್ತಿಯ ಮೂಲದೊಂದಿಗೆ ಬದಲಾಯಿಸುವ ಪ್ರಕ್ರಿಯೆ ಇದೆ. ಆದರೆ, ಅವುಗಳ ಬಗ್ಗೆ ಸರಿಯಾದ ಅಂಕಿ ಅಂಶ ಸರ್ಕಾರದಲ್ಲಿ ಇಲ್ಲ. ಹಲವು ಬಾರಿ ಅನಧಿಕೃತವಾಗಿ ಮಾಡಲಾಗುತ್ತಿದೆ. ಇದರಿಂದ ಯಾವುದೋ ವಾಹನಕ್ಕೆ ಬೆಂಕಿ ಹತ್ತಿಕೊಂಡರೆ ಅದರಲ್ಲಿ ಯಾವ ಎಂಜಿನ್, ಯಾವ ಸಿಲಿಂಡರ್, ಯಾವ ಕಿಟ್ ಇತ್ತು ಎಂದು ಗೊತ್ತಾಗುವುದಿಲ್ಲ. ಗ್ರೀನ್ ಸೇವಾ ಸಾಫ್ಟ್‌ವೇರ್ ಮೂಲಕ ಅಳವಡಿಸಿಕೊಂಡಾಗ ವಾಲ್ವ್, ಎಂಜಿನ್, ಕಿಟ್, ಸಿಲಿಂಡರ್, ಉತ್ಪಾದನಾ ಕಂಪನಿಯಿಂದ ಹಿಡಿದು ಪ್ರತಿಯೊಂದು ಮಾಹಿತಿ ಸಿಗಲಿದೆ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಅನಧಿಕೃತ ಫಿಟ್‌ಮೆಂಟ್‌ಗಳಿಗೆ ಗ್ರೀನ್ ಸೇವಾ ಸಾಫ್ಟ್‌ವೇರ್ ಕಡಿವಾಣ ಹಾಕಲಿದೆ. ಸಿಬ್ಬಂದಿ ಡೇಟಾ ನಮೂದು ಮಾಡುವಾಗ ಆಗುವ ತಪ್ಪು ಇಲ್ಲಿ ಆಗುವುದಿಲ್ಲ ಎಂಬುದು ಅಧಿಕಾರಿಗಳ ಅಭಿಪ್ರಾಯ.

ಕೋರ್ಟ್‌ನಲ್ಲಿ ಪ್ರಕರಣ: ಕೆಲ ಫಿಟ್‌ಮೆಂಟ್ ಕೇಂದ್ರಗಳು ವಾಹನ್ ಗ್ರೀನ್ ಸೇವಾ ಸಾಫ್ಟ್‌ವೇರ್ ಅಳವಡಿಸಿಕೊಳ್ಳಲು ಒಪ್ಪದೇ ನ್ಯಾಯಾಲಯದ ಮೆಟ್ಟಿಲೇರಿವೆ. ಇದು ಇತ್ಯರ್ಥವಾದ ಕೂಡಲೇ ರಾಜ್ಯದಲ್ಲಿ ಸಾಫ್ಟ್‌ವೇರ್ ಅಳವಡಿಕೆಯಾಗಲಿದೆ ಎಂದಿದ್ದಾರೆ.

ಭೂಸ್ವಾಧೀನಕ್ಕೆ ನೋಟಿಸ್ ರೈತರ ಪ್ರತಿರೋಧ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಕೈಗಾರಿಕಾ ಉದ್ದೇಶಕ್ಕೆ ಭೂಸ್ವಾಧೀನ ಬೇಡ ಎಂದು ಐದು ತಿಂಗಳಿಂದ ಹೋರಾಟ ಮಾಡಲಾಗಿತ್ತು. ಗ್ರಾಮಪಂಚಾಯಿತಿಯಲ್ಲಿ ನಿರ್ಣಯ ಅಂಗೀಕರಿಸಿ ಮನವಿ ಸಲ್ಲಿಸಲಾಗಿತ್ತು. ಆದರೂ, ಸರ್ಕಾರ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದೆ.

ತಾಲ್ಲೂಕಿನ ಕೊಡಿಗೆಹಳ್ಳಿ, ಕೆಂಚನಪುರ, ಬಳ್ಳಗೆರೆ ಗ್ರಾಮಗಳ ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಬೇಡ ಎಂದು ಗ್ರಾಮಸ್ಥರು ಆಗ್ರಹಿಸಿದ್ದರು. ಅಧಿಸೂಚನೆಯಂತೆ, ಕೆಐಎಡಿಬಿ ಸಿಬ್ಬಂದಿ ಸರ್ವೆ ಕಾರ್ಯ ನಡೆಸಲು, ರೈತರಿಗೆ ಸೋಮವಾರ ನೋಟಿಸ್ ನೀಡಲು ಮುಂದಾದರು. ರೈತರು ಪ್ರತಿರೋಧ ವ್ಯಕ್ತಪಡಿಸಿದ್ದರಿಂದ ಹಿಂದಿರುಗಿದ್ದಾರೆ.

'ಭೂಮಿ ಸ್ವಾಧೀನಪಡಿಸಿಕೊಳ್ಳಲು ವೈಜ್ಞಾನಿಕ ಹಾಗೂ ಸಾಮಾಜಿಕ ಅಧ್ಯಯನ ನಡೆಸಿಲ್ಲ. ಗ್ರಾಮ ಸಭೆ ನಡೆಸಿ ಯಾವ ಯೋಜನೆ ಬರುತ್ತಿದೆ, ರೈತರಿಗೆ ಆಗುವ ಅನುಕೂಲಗಳನ್ನು ತಿಳಿಸದೆ, ರೈತರ ಅಭಿಪ್ರಾಯ ಪಡೆಯದೆ ಸ್ವಾಧೀನಕ್ಕೆ ಮುಂದಾಗಿರುವುದು ಜನತಂತ್ರ ವ್ಯವಸ್ಥೆಗೆ ವಿರುದ್ಧವಾಗಿದೆ' ಎಂದು ವಿಜ್ಞಾನಿ ಕೃಷಿಕ ಜಿ.ಬೈರೇಗೌಡ ಬೇಸರ ವ್ಯಕ್ತಪಡಿಸಿದರು.

'ಕಾನೂನುಗಳು ರೈತರ ಹಿತ ಕಾಯಬೇಕೆ ಹೊರತು ಮಾರಕ ಆಗಬಾರದು. ಇಲ್ಲಿ ಕೈಗಾರಿಕೆ ಸ್ಥಾಪನೆ ಆದರೆ ರೈತರಿಗೆ ಅಷ್ಟೆ ಅಲ್ಲದೆ ಜಲ ಮೂಲಗಳಿಗೂ ಮಾರಕವಾಗಲಿದೆ' ಎಂದರು. 'ಸಣ್ಣಹಿಡುವಳಿದಾರರೆ ಬಹುಸಂಖ್ಯಾತರಿರುವ ಈ ಭಾಗದಲ್ಲಿ ಅವರೆಲ್ಲ ಕೃಷಿಯನ್ನೆ ಅವಲಂಬಿಸಿದ್ದಾರೆ. ರೈತಸಂಘಟನೆಗಳ ಬೆಂಬಲದೊಂದಿಗೆ ಸ್ವಾಧೀನದ ವಿರುದ್ಧ ಹೋರಾಟ ಮಾಡುತ್ತೇವೆ' ಎಂದು ರೈತ ಮುಖಂಡ ಬಿ.ಎಚ್.ರಾಜು, ರೈತ ಉತ್ಪಾದಕ ಕಂಪನಿ ಅಧ್ಯಕ್ಷ ಜಿ.ಮಂಜುನಾಥ್, ತಾ.ಪಂ.ಮಾಜಿ ಸದಸ್ಯ ಕೆ.ಎನ್.ಶಿವಣ್ಣ ಆಕ್ರೋಶ ವ್ಯಕ್ತಪಡಿಸಿದರು.

ರಸ್ತೆಗೆ ಕೊಳಚೆ: ತೆರವಿಗೆ ಮುಂದಾದ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಜಾಲಹಳ್ಳಿ ಕ್ರಾಸ್ ಸಮೀಪದಲ್ಲಿ ರಸ್ತೆಗೆ ಕೊಳಕು ಹರಿಸುತ್ತಿದ್ದ ಚರಂಡಿಯನ್ನು ದುರಸ್ತಿ ಮಾಡಲು ಬಿಬಿಎಂಪಿ ಸಿಬ್ಬಂದಿ ಸೋಮವಾರ ಕಾರ್ಯಾಚರಣೆ ಆರಂಭಿಸಿದರು.

ಗಂಗಮ್ಮ ವೃತ್ತದ ಕಡೆಗೆ ಹೋಗುವ ಮಾರ್ಗದ ಎಡಬದಿಯಲ್ಲಿರುವ ಅಂಗಡಿಗಳ ಮುಂಭಾಗದ ಚರಂಡಿ ಆಗಾಗ್ಗೆ ತುಂಬಿ ಕೊಳಚೆ ನೀರು ರಸ್ತೆಗೆ ಹರಿಯುತ್ತಿತ್ತು. ನಾಲ್ಕು ದಿನಗಳಿಂದ ಚರಂಡಿಯ ನೀರು ರಸ್ತೆಗೆ ಹರಿದು, ಸುತ್ತಲಿನ ಅಂಗಡಿಯವರು ಕೊಳಚೆ ನೀರಿನ ದುರ್ವಾಸನೆಯಿಂದ ಬೇಸತ್ತು ಹೋಗಿದ್ದರು. ಈ ಬಗ್ಗೆ ಹಲವು ಬಾರಿ ದೂರುಗಳನ್ನು ನೀಡಲಾಗಿತ್ತು.

'ಸಮೀಪದಲ್ಲಿರುವ ಹೋಟೆಲ್ ಮತ್ತು ಎರಡು ಕಟ್ಟಡಗಳ ಒಳಚರಂಡಿ ನೀರು ಚರಂಡಿಗೆ ಹರಿಯುತ್ತಿದೆ. ಇದರಿಂದ ಸಮಸ್ಯೆ ಉಂಟಾಗುತ್ತಿದೆ. ಹಿಂದೆ ಒಂದೆರಡು ಸಾರಿ ಸರಿಪಡಿಸಿದ್ದೆವು, ಮತ್ತೆ ತುಂಬಿಕೊಂಡಿದೆ. ಈಗ ಆ ಕಟ್ಟಡಗಳ ಒಳಚರಂಡಿ ಹರಿವನ್ನು ಸ್ಥಗಿತಗೊಳಿಸಲಾಗಿದೆ. ಮಂಗಳವಾರ ರಾತ್ರಿ ಜೆಸಿಬಿ ಮೂಲಕ ರಸ್ತೆ ಅಗೆದು ನೀರು ಕಟ್ಟಿಕೊಳ್ಳದಂತೆ ಸರಿಪಡಿಸಲಾಗುವುದು' ಎಂದು ಬಿಬಿಎಂಪಿ ಎಂಜಿನಿಯರ್ ಭೀಮಾ ನಾಯಕ್ ತಿಳಿಸಿದರು.



ಜಾಲಹಳ್ಳಿ ಕ್ರಾಸ್ ಸಮೀಪದಲ್ಲಿ ಕೊಳಚೆ ತುಂಬಿಕೊಂಡಿರುವ ಚರಂಡಿಯಲ್ಲಿ ಬಿಬಿಎಂಪಿ ಸಿಬ್ಬಂದಿ ಹೂಳು ತೆಗೆದರು

'ಜಾಲಹಳ್ಳಿ ಕ್ರಾಸ್‌ನಿಂದ ಅಯ್ಯಪ್ಪ ಟೆಂಪಲ್ ಕಡೆಗೆ ಒಳಚರಂಡಿ ಸಂಪರ್ಕ ಮಾರ್ಗವಿಲ್ಲ. ಹೊಸದಾಗಿ ಮಾರ್ಗ ಅಳವಡಿಸಲು ಸರ್ವೆ ಮಾಡಲಾಗಿದೆ. ಜಾಲಹಳ್ಳಿ ಕ್ರಾಸ್ ಅಂಡರ್ ಪಾಸ್ ಮಾಡಲು ರಸ್ತೆ ವಿಸ್ತರಿಸಲಾಗುತ್ತಿದೆ. ಹೀಗಾಗಿ, ಪೈಪ್ ಅಳವಡಿಸುತ್ತಿಲ್ಲ. ಅಲ್ಲದೆ, ಮೂರು ಕಟ್ಟಡದವರು ಚರಂಡಿಗೆ ಒಳಚರಂಡಿ ನೀರು ಬಿಟ್ಟಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಮುಖ್ಯ ಆಯುಕ್ತರಿಗೂ ತಿಳಿಸಲಾಗಿದೆ. ಬಿಬಿಎಂಪಿ ಅಧಿಕಾರಿಗಳೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸಲಾಗುತ್ತದೆ' ಎಂದು ಜಲಮಂಡಳಿಯ ಎಇಇ ನಾಗರಾಜು ತಿಳಿಸಿದರು. 'ಪದೇ ಪದೇ ಚರಂಡಿ ತುಂಬಿ ಹರಿಯುತ್ತಿರುತ್ತದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಸಿ ಕೊಡಬೇಕು' ಎಂದು ಅಂಗಡಿ ಮಾಲೀಕರು,ನಿವಾಸಿಗಳು ಆಗ್ರಹಿಸಿದರು.

'ನಾವು ಒಳಚರಂಡಿ ಸಂಪರ್ಕಕ್ಕೆ ಹಣ ಪಾವತಿಸಿದ್ದೇವೆ. ಮೊದಲಿನಿಂದಲೂ ಚರಂಡಿಗೇ ಬಿಡಲಾಗುತ್ತಿತ್ತು. ಈಗ ಬಿಬಿಎಂಪಿ ಬಂದ್ ಮಾಡಿಸಿದ್ದಾರೆ. ಚರಂಡಿಯಲ್ಲಿ ಗಲೀಜು ಕಟ್ಟಿಕೊಂಡು ಅವಾಂತರವಾಗಿದೆ. ನಮಗೂ ಬೇರೆ ದಾರಿ ಇಲ್ಲ' ಎಂದು ಎಂದು ಹೋಟೆಲ್ ಮತ್ತು ಕಟ್ಟಡಗಳ ಮಾಲೀಕರು ತಿಳಿಸಿದರು.

ರೇಣುಕಸ್ವಾಮಿ ಕೊಲೆ ಪ್ರಕರಣ ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳ ನಿಯಮಿತ (ರೆಗ್ಯುಲರ್) ಜಾಮೀನು ಅರ್ಜಿಗಳ ವಿಚಾರಣೆಯನ್ನು ಪೂರ್ಣಗೊಳಿಸಿರುವ ಹೈಕೋರ್ಟ್ ತೀರ್ಪನ್ನು ಕಾಯ್ದಿರಿಸಿದೆ. ಅಂತೆಯೇ, ಎರಡನೇ ಆರೋಪಿ ನಟ ದರ್ಶನ್ ತೂಗುದೀಪ ಶ್ರೀನಿವಾಸ್‌ಗೆ ನೀಡಲಾಗಿರುವ ವೈದ್ಯಕೀಯ ನೆರವಿನ ಮಧ್ಯಂತರ ಜಾಮೀನು ಅರ್ಜಿಯನ್ನು, ನಿಯಮಿತ ಜಾಮೀನು ಅರ್ಜಿ ವಿಲೇವಾರಿ ಆಗುವತನಕ ಮುಂದುವರಿಸಿದೆ.

ಆರೋಪಿಗಳಾದ ಪವಿತ್ರಾ ಗೌಡ, ನಟ ದರ್ಶನ್ ತೂಗುದೀಪ ಶ್ರೀನಿವಾಸ್, ಆರ್. ನಾಗರಾಜು, ಎಂ.ಲಕ್ಷ್ಮಣ್, ಅನುಕುಮಾರ್ ಅಲಿಯಾಸ್ ಅನು, ಜಗದೀಶ್ ಅಲಿಯಾಸ್ ಜಗ್ಗ ಅವರು ಸಲ್ಲಿಸಿರುವ ಜಾಮೀನು ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಮುಂದುವರಿಸಿತು.

ಬುಡಕಟ್ಟು ವಸ್ತು ಸಂಗ್ರಹಾಲಯ ಸ್ಥಾಪಿಸಲು ಪ್ರಧಾನಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾರಾಷ್ಟ್ರದ ಮಾದರಿಯಲ್ಲಿ ರಾಜ್ಯದಲ್ಲೂ ಬುಡಕಟ್ಟು ಸಮುದಾಯದ ವಸ್ತುಸಂಗ್ರಹಾಲಯ ಸ್ಥಾಪಿಸಬೇಕು' ಎಂದು ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್.ಗೋವಿಂದಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿಗೆ ಮನವಿ ಮಾಡಿದ್ದಾರೆ.

'ದೇಶದಲ್ಲಿ ಬಂಜಾರ ಭಾಷೆ ಮಾತನಾಡುವವರು ಬೃಹತ್ ಸಂಖ್ಯೆಯಲ್ಲಿ ಇದ್ದಾರೆ. ಇಂತಹ ಶ್ರೀಮಂತ ಸಂಸ್ಕೃತಿ ಹೊಂದಿರುವ ಸಮುದಾಯದ ಭಾಷೆ ನಶಿಸಿ ಹೋಗುತ್ತಿದೆ. ಬಂಜಾರರ ಭಾಷೆ ಮತ್ತು ಸಂಸ್ಕೃತಿ ಉಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಹಾಗಾಗಿ ಭಾಷೆ ಬೆಳವಣಿಗೆಯ ಹಿತದೃಷ್ಟಿಯಿಂದ ಆಕಾಶವಾಣಿ, ದೂರದರ್ಶನ ಹಾಗೂ ಇತರೆ ಕೇಂದ್ರಗಳಲ್ಲಿ ಬಂಜಾರ ಕಲೆ ಹಾಗೂ ಸಂಸ್ಕೃತಿ ಕಾರ್ಯಕ್ರಮ ಪ್ರಸಾರ ಮಾಡಬೇಕು' ಎಂದು ಪತ್ರದಲ್ಲಿ ಕೋರಿದ್ದಾರೆ. 'ರಾಜ್ಯದಲ್ಲಿ ಮಾದರಿ ತಾಂಡ ನಿರ್ಮಿಸಬೇಕು. ಕರ್ನಾಟಕದಲ್ಲಿ ಸಮುದಾಯದ ಭಾಷೆ, ಸಂಸ್ಕೃತಿ ಉಳಿಸಿ, ಬೆಳೆಸಲು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಸಹಾಯ ಮತ್ತು ಸಹಕಾರ ಕೊಡಬೇಕು ಎಂದು ಹೇಳಿದ್ದಾರೆ. 'ಬಂಜಾರ ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರ್ಪಡೆ ಮಾಡಬೇಕು' ಎಂದು ಮನವಿ ಮಾಡಿದ್ದಾರೆ.

ನಗರದಲ್ಲಿ ಇಂದು

'ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನ, ಸಾಧನೆ ಮತ್ತು ಸುಧಾರಣೆಗಳು' ಕುರಿತು ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಎಸ್.ಎಂ ಜಯಕರ, ಅತಿಥಿಗಳು: ಶೇಖ್ ಲತೀಫ್, ಶ್ರೀನಿವಾಸಾಚಾರ್ಯ, ಎಂಜೀರಪ್ಪ, ಡಿ.ಕೆ ಚಿತ್ತಯ್ಯ ಪೂಜಾರ್, ಆಯೋಜನೆ: ಹಿಂದುಳಿದ ವರ್ಗಗಳ ಕೋಶ, ಇತಿಹಾಸ ವಿಭಾಗ ಮತ್ತು ಅರ್ಥಶಾಸ್ತ್ರ ವಿಭಾಗ, ಸ್ಥಳ: ಪ್ರೊ. ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

'ಕನ್ನಡ ಗೀತೆಗಳ ತರಬೇತಿ ಶಿಬಿರ'ದ ಉದ್ಘಾಟನೆ: ರೇಣುಕಾ ಪ್ರಸನ್ನ, ಅಧ್ಯಕ್ಷತೆ: ವನಜಾಕ್ಷಿ ಆರ್. ಹಳ್ಳಿಯವರ, ಅತಿಥಿಗಳು: ಎಸ್. ಉಷಾರಾಣಿ, ಬಂಡ್ಲಹಳ್ಳಿ ವಿಜಯ ಕುಮಾರ್, ಎಂ. ಎಸ್. ಸರಳಾ, ಮಂಜುನಾಥ್, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಡಯೆಟ್ ಸಭಾಂಗಣ, ರಾಜಾಜಿನಗರ, ಬೆಳಿಗ್ಗೆ 11.30

'ಪ್ರಚಂಡ ರಾವಣ' ನಾಟಕ ಪ್ರದರ್ಶನ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ರಂಗಶ್ರೀ ರಂಗಸ್ವಾಮಿ, ಸನ್ಮಾನಿತರು: ಎಸ್.ಎಲ್.ಎನ್. ರಂಗಬ್ರಹ್ಮ, ಅತಿಥಿಗಳು: ಆರ್. ಚಂದ್ರಶೇಖರ್, ಆರ್. ಚನ್ನಯ್ಯ, ಡಬ್ಲ್ಯು. ಎಚ್. ಶಾಂತಕುಮಾರ್, ಎಚ್. ವಜ್ರಮೂರ್ತಿ, ಆಯೋಜನೆ: ಧನಸ್ಸು ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ಗಂಗಾಧರ್ ಬಂಡನವರ್ ಅವರ 'ಸೂತ್ರಧಾರ' ಎಂಬ ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನಕ್ಕೆ ಚಾಲನೆ: ಪ.ಸ. ಕುಮಾರ್, ಅತಿಥಿಗಳು: ಗುರುದಾಸ್ ಶೆಣೈ, ಹೀನಾ ಭಟ್, ಆಯೋಜನೆ: ಹೀನಾ ಭಟ್ ಆರ್ಟ್ ಫೌಂಡೇಷನ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಸಂಜೆ 5

ಕೆಂಗಲ್ ಹನುಮಂತಯ್ಯ ಸ್ಮರಣೆ: ಭಾಗವಹಿಸುವವರು: ಸಿ. ರಾಮಣ್ಣಗೌಡ, ಎಲ್. ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಭಾಂಗಣ, ಕೆಂಪೇಗೌಡನಗರ, ಸಂಜೆ 6

17ನೇ ವರ್ಷದ ರಂಗೋತ್ಸವದ ಉದ್ಘಾಟನೆ: ವೀಣಾಶರ್ಮಾ, ಅಧ್ಯಕ್ಷತೆ: ಕೆ.ವಿ ನಾಗರಾಜಮೂರ್ತಿ, ಉಪಸ್ಥಿತಿ: 'ಮುಖ್ಯಮಂತ್ರಿ' ಚಂದ್ರು, ಶ್ರೀನಿವಾಸ್ ಜಿ. ಕಪ್ಪಣ್ಣ, ಬಿ.ವಿ. ರಾಜಾರಾಂ, ಜೆ. ಲೋಕೇಶ್, ರಂಗ ಗೌರವ: ಕೆ.ವಿ ನಾಗರಾಜಮೂರ್ತಿ, ಜಿ.ಪಿ.ಓ. ಚಂದ್ರು, ಟಿ. ಎಚ್. ಲವಕುಮಾರ್, ರವೀಂದ್ರನಾಥ ಸಿರಿವರ, ಜಗದೀಶ ಜಾಲ, 'ತಾಜ್‌ಮಹಲಿನ ಟೆಂಡರ್' ನಾಟಕ ಪ್ರದರ್ಶನ: ರಚನೆ: ಅಜಯ್ ಶುಕ್ಲಾ, ವಿನ್ಯಾಸ ಮತ್ತು ನಿರ್ದೇಶನ: ಎ. ದಾಕ್ಷಾಯಿಣಿ ಭಟ್, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ಕಲಾಗ್ರಾಮ, ಮಲ್ಲತಹಳ್ಳಿ, ಸಂಜೆ 6.30ರಿಂದ

ಕ್ಷೇಮ ಕುಶಲ




ಮಿದುಳಿಗೆ ಕರುಳಿನ ಕರೆ

ಡಾ. ಕುಶ್ವಂತ್ ಕೋಳಿಬೈಲು

ನಾವು ತಿಂದ ಆಹಾರವನ್ನು ಜೀರ್ಣಿಸಿಕೊಳ್ಳಲು ಇರುವ ಅಂಗಾಂಗವೇ ನಮ್ಮ 'ಕರುಳು' ಎಂದು ಹೆಚ್ಚಿನವರು ಭಾವಿಸಿದ್ದಾರೆ. ಸುಮಾರು ಒಂಬತ್ತು ಮೀಟರಿನಷ್ಟು ಉದ್ದವಿರುವ ಮನುಷ್ಯನ ಕರುಳಿನೊಳಗೆ ವಿವಿಧ ಬಗೆಯ ಸೂಕ್ಷ್ಮಾಣುಜೀವಿಗಳು ವಾಸಿಸುತ್ತವೆ. ಕರುಳಿನೊಳಗೆ ಮನೆಮಾಡಿರುವ ಕೋಟಿ ಕೋಟಿ ಸಂಖ್ಯೆಯ ಬ್ಯಾಕ್ಟೀರಿಯಾ, ವೈರಸ್ ಮತ್ತು ಫಂಗಸ್‌ಗಳು ವಿವಿಧ ಪದಾರ್ಥಗಳನ್ನು ಉತ್ಪಾದಿಸುತ್ತವೆ; ಈ ಸೂಕ್ಷ್ಮಾಣುಜೀವಿಗಳು ನಮ್ಮ ಆರೋಗ್ಯವನ್ನು ವಿವಿಧ ರೀತಿಯಲ್ಲಿ ನಿಯಂತ್ರಿಸುತ್ತವೆ. ಕರುಳಿನೊಳಗೆ ಕೂಡ ನಮ್ಮ ಮಿದುಳಿನಲ್ಲಿ ಇರುವ ರೀತಿಯ ನರಮಂಡಲವೂ ಇದೆ. ಮನುಷ್ಯರ ಕರುಳು ಮತ್ತು ಮಿದುಳಿನ ನಡುವೆ ಇರುವ ಸಂಪರ್ಕವನ್ನು ನಾವು 'ಗಟ್ ಬ್ರೈನ್ ಆ್ಯಕ್ಸಿಸ್' ಎಂದು ಕರೆಯುತ್ತೇವೆ. ಕರುಳು ಉತ್ಪಾದಿಸುವ ವಿವಿಧ ಹಾರ್ಮೋನುಗಳು, ನರಪ್ರೇಕ್ಷಕಗಳು (Neurotransmitters) ಮತ್ತು ಕೊಬ್ಬಿನ ಆಮ್ಲಗಳು ಮಿದುಳಿನ ಮೇಲೆ ಪರಿಣಾಮ ಬೀರುತ್ತವೆ. ಇವು ನಮ್ಮ ಮಾನಸಿಕ ಸಂತೋಷ, ಹಸಿವು, ನೆನಪಿನ ಶಕ್ತಿ, ರೋಗನಿರೋಧಕ ಶಕ್ತಿಗಳನ್ನು ನಿಯಂತ್ರಿಸುತ್ತವೆ.

ಮನುಷ್ಯ ಕರುಳಿನ ಒಳಗಡೆ ವಾಸಿಸುವ ಜೀವಿಗಳು ಮನುಷ್ಯನ ಆರೋಗ್ಯದ ಮೇಲೆ ಬೀರುವ ಪ್ರಭಾವದ ಕುರಿತು ಬಹಳಷ್ಟು ಸಂಶೋಧನೆಗಳು ಇತ್ತೀಚಿನ ವರ್ಷಗಳಲ್ಲಿ ನಡೆದಿವೆ. ನಮ್ಮ ಆರೋಗ್ಯವನ್ನು ಉತ್ತಮವಾಗಿಟ್ಟುಕೊಳ್ಳಲು ನಮ್ಮ ಕರುಳಿಲ್ಲಿರುವ ಸೂಕ್ಷ್ಮಾಣುಜೀವಿಗಳ ಸ್ಥಿತಿ ಚೆನ್ನಾಗಿರಬೇಕಾಗುತ್ತದೆ. ನಾವು ಸೇವಿಸುವ ಆಹಾರ ನಮ್ಮ ಶರೀರದಲ್ಲಿರುವ ಸೂಕ್ಷ್ಮಾಣುಜೀವಿಗಳ ಆರೋಗ್ಯದ ಮೇಲೆ ಮತ್ತು ಅವರು ಉತ್ಪಾದಿಸುವ ಪದಾರ್ಥಗಳ ಮೇಲೆ ಪರಿಣಾಮವನ್ನು ಬೀರುತ್ತದೆ.

ಶಿಶುವೊಂದು ಭೂಮಿಯ ಮೇಲೆ ಬಂದಾಗಲೇ ಅದರ ಕರುಳಿನಲ್ಲಿ ಸೂಕ್ಷ್ಮಾಣುಜೀವಿಗಳು ಇರುವುದಿಲ್ಲ. ಅನಂತರದಲ್ಲಿ ನವಜಾತ ಶಿಶುವಿನ ಕರುಳಿನಲ್ಲಿ ವಿವಿಧ ಸೂಕ್ಷ್ಮಾಣುಜೀವಿಗಳು ನಿಧಾನವಾಗಿ ಮನೆಮಾಡುತ್ತಾ ಹೋಗುತ್ತವೆ. ನಮ್ಮ ದೇಹಕ್ಕೆ ಬೇಕಾಗುವ ವಿವಿಧ ಬಗೆಯ ವಿಟಮಿನ್‌ಗಳನ್ನು ನಾವು ಆಹಾರದ ಮೂಲಕ ಪಡೆಯುತ್ತೇವೆ. ಆದರೆ ನಮ್ಮ ರಕ್ತದ ಹೆಪ್ಪುಗಟ್ಟುವಿಕೆಯ ಮೇಲೆ ಪರಿಣಾಮ ಬೀರುವ 'ವಿಟಮಿನ್-ಕೆ' ನಮಗೆ ಆಹಾರದಿಂದ ಸಿಗುವುದಿಲ್ಲ. ಅದನ್ನು ನಮ್ಮ ಕರುಳಿನಲ್ಲಿರುವ ಸೂಕ್ಷ್ಮಾಣುಜೀವಿಗಳು ಉತ್ಪಾದಿಸುತ್ತವೆ.



ನವಜಾತಶಿಶುಗಳ ಕರುಳಿನೊಳಗೆ ಸೂಕ್ಷ್ಮಾಣುಜೀವಿಗಳು ಇಲ್ಲದಿರುವ ಕಾರಣ ಅವುಗಳಿಗೆ 'ವಿಟಮಿನ್-ಕೆ'ಯ ಕೊರತೆ ಉಂಟಾಗಿ ರಕ್ತಸ್ರಾವವಾಗುವ ಅಪಾಯವಿರುತ್ತದೆ. ಇದೇ ಕಾರಣಕ್ಕೆ ಹುಟ್ಟಿದ ತಕ್ಷಣ ಪ್ರತಿಯೊಂದು ನವಜಾತಶಿಶುವಿಗೂ 'ವಿಟಮಿನ್-ಕೆ'ಯನ್ನು ಚುಚ್ಚುಮದ್ದಿನ ಮೂಲಕ ನೀಡಲಾಗುತ್ತದೆ.

ನಾವು ತೀವ್ರ ರೀತಿಯ ಸೋಂಕಿಗೆ ತುತ್ತಾದಾಗ ನಮಗೆ ಪ್ರತಿಜೀವಕಗಳನ್ನು (Antibiotics) ತೆಗೆದುಕೊಳ್ಳಬೇಕಾದ ಅಗತ್ಯ ಬರುತ್ತದೆ. ಈ ಪ್ರತಿಜೀವಕಗಳು ನಮ್ಮ ದೇಹದೊಳಗೆ ಸೋಂಕನ್ನು ಉಂಟುಮಾಡಿದ ಸೂಕ್ಷ್ಮಜೀವಿಯನ್ನು ನಾಶಪಡಿಸುವ ಜೊತೆಗೆ, ನಮ್ಮ ಕರುಳಿನಲ್ಲಿರುವ, ನಮಗೆ ಅಗತ್ಯವಾಗಿ ಬೇಕಾಗಿರುವ ಇತರ ಸೂಕ್ಷ್ಮಾಣುಜೀವಿಗಳನ್ನೂ ನಾಶಪಡಿಸುತ್ತವೆ. ಹೀಗೆ ನಾಶವಾದ ಒಳ್ಳೆಯ ಸೂಕ್ಷ್ಮಾಣುಜೀವಿಗಳು ಮತ್ತೆ ಸರಿಯಾದ ಪ್ರಮಾಣದಲ್ಲಿ ತುಂಬಿಕೊಳ್ಳಲು ಸಮಯ ಹಿಡಿಯುತ್ತದೆ.

ಪ್ರತಿಜೀವಕಗಳನ್ನು ತೆಗದು ಕೊಳ್ಳುವ ಸಮಯದಲ್ಲಿ ನಮ್ಮಲ್ಲಿ ನಿತ್ರಾಣ ಮತ್ತು ನಿರುತ್ಸಾಹಗಳು ಕಂಡುಬರುತ್ತದೆಯಲ್ಲವೆ? ಕರುಳಿನಲ್ಲಿ ವಿವಿಧ ಪದಾರ್ಥಗಳನ್ನು ಉತ್ಪಾದಿಸುವ ಮೂಲಕ ನಮಗೆ ಚೈತನ್ಯವನ್ನು ನೀಡುವ ಸೂಕ್ಷ್ಮಾಣುಜೀವಿಗಳು ಪ್ರತಿಜೀವಕಗಳಿಂದ ಈಗ ನಾಶವಾಗಿರುವುದೇ ಈ ಲಕ್ಷಣಗಳಿಗೆ ಕಾರಣ. ನಾವು ಪ್ರತಿಜೀವಿಕಗಳನ್ನು ತೆಗೆದುಕೊಂಡಿರುವ ಸಮಯದಲ್ಲಿ ಮೊಸರನ್ನವನ್ನೂ ತರಕಾರಿಗಳನ್ನೂ ಹೆಚ್ಚು ಸೇವಿಸುವುದು ಒಳ್ಳೆಯದು.

ನಾವು ಹೆಚ್ಚು ಹಸಿರು ತರಕಾರಿಗಳನ್ನು ಮತ್ತು ಹಣ್ಣು-ಹಂಪಲುಗಳನ್ನು ಬಳಸುವುದು ನಮ್ಮ ಕರುಳಿನ ಸೂಕ್ಷ್ಮಾಣುಜೀವಿಗಳ ಆರೋಗ್ಯಕ್ಕೆ ಒಳ್ಳೆಯದು. ಹುಳಿ ಬರಿಸಿದ ಆಹಾರಗಳಾದ ಮೊಸರನ್ನ, ಇಡ್ಲಿ ಮುಂತಾದ ಆಹಾರಗಳು ನಮ್ಮ ಕರುಳಿನೊಳಗೆ ಆರೋಗ್ಯವಂತ ಸೂಕ್ಷ್ಮಾಣುಜೀವಿಗಳು ತುಂಬಿಕೊಳ್ಳುವಂತೆ ಮಾಡುತ್ತವೆ. ನಮ್ಮಲ್ಲಿ ಪಾರಂಪರಿಕವಾಗಿ ತಯಾರಿಸಿದ ಉಪ್ಪಿನಕಾಯಿ ಕೂಡ ಕರುಳಿನ ಆರೋಗ್ಯಕ್ಕೆ ಅತ್ಯುತ್ತಮವಾದ ಆಹಾರವಾಗಿದೆ. ಆಲ್ಕೋಹಾಲ್ ಮತ್ತು ಸಕ್ಕರೆಯ ಪದಾರ್ಥಗಳು ನಮ್ಮ ಕರುಳಿನ ಅರೋಗ್ಯದ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರುತ್ತವೆ. ನಿಮ್ಮ ಕರುಳಿನೊಳಗೆ ಸಕ್ಕರೆಯ ಅಂಶಕ್ಕಾಗಿ ಸದಾ ಕಾಯುವ ಸೂಕ್ಷ್ಮಾಣುಜೀವಿಗಳು ತುಂಬಿಕೊಳ್ಳುವಂತೆ ಮಾಡುವುದರಿಂದ ಅವು ಬೊಜ್ಜು ಮುಂತಾದ ಆರೋಗ್ಯದ ಸಮಸ್ಯೆಗಳನ್ನು ತರಬಹುದು. ಮಾಂಸಾಹಾರಿಗಳ ಮತ್ತು ಸಸ್ಯಾಹಾರಿಗಳ ಕರುಳಿನಲ್ಲಿ ಇರುವ ಸೂಕ್ಷ್ಮಾಣುಜೀವಿಗಳು ವಿಭಿನ್ನವಾಗಿರುವುದರಿಂದ ಸಸ್ಯಾಹಾರವು ಕರುಳಿನ ಅರೋಗ್ಯಕ್ಕೆ ಉತ್ತಮವೆಂಬ ಅಭಿಪ್ರಾಯವು ವಿಜ್ಞಾನಿಗಳಲ್ಲಿ ಇದೆ.

ನಮ್ಮ ಆರೋಗ್ಯದ ಗುಟ್ಟು ನಮ್ಮ ಆಹಾರದಲ್ಲಿದೆ – ಎಂದು ನಾವು ಇಲ್ಲಿಯ ತನಕ ನಂಬಿದ್ದೆವು. ಈಗ ನಮ್ಮ ಆರೋಗ್ಯದ ನಿಜವಾದ ಗುಟ್ಟು ನಾವು ನಮ್ಮ ಕರುಳಿನೊಳಗೆ ಜೀವಿಸುವ ಸೂಕ್ಷ್ಮಾಣುಜೀವಿಗಳಿಗೆ ನಾವು ಕೊಡುವ ಆಹಾರದಲ್ಲಿದೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ಕರುಳು ನಮ್ಮ ಮಿದುಳಿನ ಜೊತೆಗೆ ಮಾತನಾಡುತ್ತದೆ; ಮತ್ತು ಮಿದುಳು ತೆಗೆದುಕೊಳ್ಳುವ ತೀರ್ಮಾನಗಳ ಮೇಲೆ ಕರುಳು ತನ್ನ ಪ್ರಭಾವವನ್ನೂ ಬೀರುತ್ತದೆ. ನಮ್ಮ ಮನಃಸ್ಥಿತಿ, ಹಸಿವು, ನಿದ್ದೆ ಮತ್ತು ಜ್ಞಾಪಕಶಕ್ತಿಯನ್ನು ಉತ್ತಮವಾಗಿಡುವಲ್ಲಿ ಮಿದುಳಿನ ಜೊತೆಗೆ ಕೆಲಸ ಮಾಡುವ ನಮ್ಮ ಕರುಳಿನ ಸೂಕ್ಷ್ಮಾಣುಜೀವಿಗಳ ಅರೋಗ್ಯದ ಬಗ್ಗೆಯೂ ನಾವು ಕಾಳಜಿ ವಹಿಸುವುದು ಅತ್ಯಗತ್ಯ.

ಟೀನೇಜ್ ತಲ್ಲಣಗಳು



ಡಾ. ಶ್ರೀನಿವಾಸ ಹರಪನಹಳ್ಳಿ

ಜೀವನದ ಕಾಲಘಟ್ಟಗಳಲ್ಲಿ ಯೌವನವೂ ಒಂದು. ಬಾಲ್ಯದಿಂದ ಯೌವನಕ್ಕೆ ಕಾಲಿಡುತ್ತಿದ್ದಂತೆ ಆ ವ್ಯಕ್ತಿಯಲ್ಲಿ ಅನೇಕ ಬದಲಾವಣೆಗಳು ಕಾಣಬರುತ್ತವೆ. ಯೌವನದ ಆರಂಭಿಕ ಹಂತವೇ ಹದಿಹರೆಯ. ಸುಮಾರು ಹದಿಮೂರರಿಂದ ಹತ್ತೊಂಬತ್ತು ವರ್ಷದವರನ್ನು ಈ ಗುಂಪಿಗೆ ಸೇರಿಸಬಹುದು. ಇದೇ 'ಟೀನ್' ಏಜ್ (ಆಂಗ್ಲಭಾಷೆಯ ಥರ್ಟೀನ್, ಫೋರ್ಟೀನ್..... ಲೆಕ್ಕದಲ್ಲಿ) ಕೂಡ. ಎಲ್ಲ ಕಾಲಘಟ್ಟಗಳೂ ಒಂದು ರೀತಿಯಲ್ಲಿ ಚೆಂದವೇ. ಅವಕ್ಕೆ ಅದರದೇ ಒಂದು ಸೊಬಗಿದೆ. ಬಾಲ್ಯ-ಯೌವನದಲ್ಲಿ ಆಟ-ಹುಡುಗಾಟ ಪ್ರಾಮುಖ್ಯವನ್ನು ಪಡೆದರೆ, ಗೃಹಸ್ಥ-ವೃದ್ಧಾಪ್ಯಗಳು ಜವಾಬ್ದಾರಿ ಮತ್ತು ಅನುಭವಗಳ ಮೂಸೆಯಾಗಿರುತ್ತವೆ. ಒಂದು ಘಟ್ಟದಲ್ಲಿನ ಆಗುಹೋಗುಗಳನ್ನು ತೃಪ್ತಿಕರವಾಗಿ ಅನುಭವಿಸಿ ಮುಂದಿನ ಘಟ್ಟಕ್ಕೆ ತಯಾರಾಗುವುದೇ ಜೀವನದ ದೊಡ್ಡ ಪಾಠ.

ಕೆಲವೊಮ್ಮೆ ಘಟ್ಟಗಳ ದಾಟುವಿಕೆ ಅಷ್ಟೊಂದು ಸುಲಲಿತವಾಗಿ ಸಾಗುವುದಿಲ್ಲ. ಅದರಲ್ಲೂ ಹದಿಹರೆಯದವರ ತಲ್ಲಣಗಳು ಕೆಲವೊಮ್ಮೆ ಅವರನ್ನೂ ಅವರ ಕುಟುಂಬದವರನ್ನೂ ಆತಂಕಕ್ಕೀಡುಮಾಡುತ್ತವೆ. ಈ ವಯೋಮಾನದವರ ದುಃಖ-ದುಮ್ಮಾನಗಳನ್ನು ಅರಿತುಕೊಂಡು ಅವರಿಗೆ ಸರಿಯಾದ ಮಾರ್ಗದರ್ಶನ ನೀಡುವುದು ಹಿರಿಯರ ಜವಾಬ್ದಾರಿ. ಅಂತಹ ಕೆಲವು ತಲ್ಲಣಗಳ ಬಗ್ಗೆ ನಾವೆಲ್ಲರೂ ತಿಳಿದುಕೊಂಡಿರುವುದು ಉತ್ತಮ.

ಮೊದಲನೆಯದಾಗಿ, ಟೀನೇಜ್‌ನಲ್ಲಿರುವವರು ಚಿಕ್ಕಮಕ್ಕಳಾಗಿಯೂ ಉಳಿದಿರುವುಲ್ಲ; ಹೀಗೆಂದು ಹಿರಿಯರ ವ್ಯಕ್ತಿತ್ವವೂ ಮೂಡಿರುವುದಿಲ್ಲ. ಮನೆಮಂದಿ ಕೂಡ ಅವರನ್ನು ಕೆಲವೊಮ್ಮೆ ಚಿಕ್ಕಮಕ್ಕಳಂತೆ ನೋಡಿದರೆ, ಕೆಲವೊಮ್ಮೆ ಜವಾಬ್ದಾರಿಯಿಂದ ನಡೆದುಕೊಳ್ಳುವಂತೆ ಅಪೇಕ್ಷಿಸುತ್ತಾರೆ. ಹಾಗಾಗಿ ತಮ್ಮ ವ್ಯಕ್ತಿತ್ವದ ಬಗ್ಗೆಯೇ ಒಂದು ರೀತಿಯ ಕೀಳರಿಮೆಯನ್ನು ಇವರು ಬೆಳೆಸಿಕೊಂಡುಬಿಟ್ಟಿರುತ್ತಾರೆ. ತಾವು ಯಾವ ಗುಂಪಿಗೂ ಸೇರದವರು ಎಂಬ ಖಿನ್ನತೆ ಕೂಡ ಈ ಗುಂಪಿನವರಲ್ಲಿ ಮನೆಮಾಡಿರುತ್ತದೆ.

ಈ ಸಂದರ್ಭದಲ್ಲಿ ದೇಹದಲ್ಲಿ ಹಾರ್ಮೋನುಗಳ ಸ್ರವಿಸುವಿಕೆ ಕೂಡ ಕೊಂಚ ಬದಲಾಗಿರುತ್ತದೆ. ದೇಹದಲ್ಲಾಗುತ್ತಿರುವ ಬದಲಾವಣೆಗಳು 'ನಾನು ಹೆಣ್ಣು', 'ನಾನು ಗಂಡು' ಎಂಬ ತಿಳಿವಳಿಕೆಯನ್ನೂ ನೀಡುತ್ತವೆ. ಜೊತೆಗೆ ತಮ್ಮ ಸಹಪಾಠಿಗಳು ನಡೆಸುವ ಜೀವನಶೈಲಿಯನ್ನೂ ಗಮನಿಸತೊಡಗುತ್ತಾರೆ. ತಮಗೂ ಅದೇ ರೀತಿಯ ಡ್ರೆಸ್, ಮೇಕಪ್ ಬೇಕು. ಅದೇ ತರಹದ ಮೊಬೈಲ್, ಬೈಕು ಬೇಕೆನಿಸುತ್ತದೆ. ಕೆಲವೊಮ್ಮೆ ಸ್ನೇಹಿತರ ನಡುವೆ 'ಕೂಲ್' ಎನ್ನಿಸಿಕೊಳ್ಳಲು ಸಿಗರೆಟ್, ಕುಡಿತ ಅಥವಾ ಮಾದಕವಸ್ತುಗಳ ಚಟವನ್ನೂ ಹತ್ತಿಸಿಕೊಳ್ಳುತ್ತಾರೆ. ಇಂಥ ಅನುಕರಣೆ ('ಪೀರ್ ಪ್ರೆಷರ್') ಕೂಡ ಒಂದು ರೀತಿಯ ಒತ್ತಡವೇ. ಈ ಒತ್ತಡ ಒಮ್ಮೊಮ್ಮೆ ಅತಿರೇಕಕ್ಕೂ ಹೋಗುತ್ತದೆ.

ಈಗಿನ ಬಹುತೇಕ ಟೀನೇಜ್ ಮಕ್ಕಳ ಹತ್ತಿರ ಸ್ಮಾರ್ಟ್ ಫೋನ್ ಇದ್ದೇ ಇರುತ್ತದೆ. ಮಕ್ಕಳ ಯೋಗಕ್ಷೇಮ ಕುರಿತು ವಿಚಾರಿಸಲು ಪಾಲಕರಿಗೆ ಇದು ತುಂಬಾ ಉಪಯುಕ್ತವಾದರೂ ಇತ್ತೀಚಿನ ದಿನಗಳಲ್ಲಿ ಮೊಬೈಲ್ ವ್ಯಸನ ಕೂಡ ದೊಡ್ಡ ತಲೆನೋವಾಗಿದೆ. ಅದರಲ್ಲಿ ತೋರಿಸುವ ರೀಲ್ಸ್, ವಿಡಿಯೋ ಆಟಗಳಿಗೆ ಮಕ್ಕಳು ದಾಸರಾಗಿಬಿಟ್ಟಿದ್ದಾರೆ. ತಮ್ಮ ಫೋಟೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಿ ಅದನ್ನು ಉಳಿದವರು ಮೆಚ್ಚಿ ಹೆಚ್ಚೆಚ್ಚು 'ಲೈಕ್ಸ್' ಬರಲಿ ಎಂಬ ಗೀಳು ಸಾಕಷ್ಟಿದೆ. ಇದರ ಜೊತೆಗೆ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಪೋಸ್ಟ್‌ಗಳಿಗೆ ಬರುವ ಕೆಟ್ಟ ಕಾಮೆಂಟುಗಳು, ಅವಹೇಳನಗಳು ಸಂವೇದನಾಶೀಲ ಮಕ್ಕಳಿಗೆ ದೊಡ್ಡ ಆಘಾತವನ್ನೇ ಉಂಟುಮಾಡುತ್ತವೆ. ವೆಬ್ ಸಿರೀಸ್, ಆನ್ಲೈನ್ ಗೇಮಿಂಗ್ ಇತ್ಯಾದಿಗಳಿಂದ ಮಕ್ಕಳಲ್ಲಿ ಅಪರಾಧ, ಕ್ರೌರ್ಯದ ಮನೋಭಾವನೆ ಹೆಚ್ಚುತ್ತಿದೆ. ಅನೇಕ ಮಕ್ಕಳು ಸೈಬರ್ ಅಪರಾಧಕ್ಕೆ ಬಲಿಯಾಗುತ್ತಿದ್ದಾರೆ ಕೂಡ. ಆದ್ದರಿಂದ ಮಕ್ಕಳಿಗೆ ಮೊಬೈಲ್ ನೀಡುವಾಗ ಸೇಫ್ ಮೋಡ್, ಪಾಲಕರ ನಿಯಂತ್ರಣ ಇತ್ಯಾದಿ ಸುರಕ್ಷಾನೀತಿಗಳನ್ನು ಸಕ್ರೀಯಗೊಳಿಸಿಯೇ ಕೊಡಬೇಕು. ಆಸ್ಟ್ರೇಲಿಯಾದಂತಹ ದೇಶಗಳಲ್ಲಿ ಈಗ ಹದಿನಾರು ವರ್ಷದ ಒಳಗಿನ ಮಕ್ಕಳ ಕೈಲಿ ಮೊಬೈಲ್ ನೀಡಬಾರದೆಂಬ ನಿಯಮವನ್ನೇ ರೂಪಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಈ ಟೀನೇಜ್ ಮಕ್ಕಳನ್ನು ಕಾಡುತ್ತಿರುವ ಇನ್ನೊಂದು ಸಮಸ್ಯೆಯೆಂದರೆ ಸ್ಪರ್ಧಾಪರೀಕ್ಷೆಗಳ ಒತ್ತಡ. NEET, JEE ಅಥವಾ CETಯಂತಹ ಅನೇಕ ಪರೀಕ್ಷೆಗಳಲ್ಲಿ ಇಂದಿನ ಮಕ್ಕಳು ಸ್ಪರ್ಧಿಸಬೇಕಿದೆ. ಅನೇಕರಿಗೆ ಇದು ಅನಿವಾರ್ಯ ಕೂಡ. ಮಕ್ಕಳಿಗೆ ಒಳ್ಳೆಯ ರ‍್ಯಾಂಕ್ ಬರಲಿ ಎಂದು ಪಾಲಕರು ಮತ್ತು ಕಾಲೇಜು ಶಿಕ್ಷಕರು ಒಟ್ಟಿಗೆ ಒತ್ತಡ ಹಾಕುವುದರಿಂದ ಮಕ್ಕಳ ಶೈಕ್ಷಣಿಕ ಜೀವನವು ಕಾದ ಬಾಣಲೆಯಂತಾಗುತ್ತಿದೆ. ವಿಧವಿಧದ ಕೋಚಿಂಗುಗಳು, ಹಾಸ್ಟೆಲ್ ವಾಸಗಳು ಎಳೆಮನಸ್ಸುಗಳ ಮೇಲೆ ಇನ್ನಿಲ್ಲದಂತೆ ಒತ್ತಡಗಳನ್ನು ಸೃಷ್ಟಿಸಿ ಅವರ ನೈಜ ಸಾಮರ್ಥ್ಯವನ್ನೇ ಕೆಲವೊಮ್ಮೆ ಕಸಿದುಬಿಡುತ್ತವೆ. ಮಕ್ಕಳನ್ನು ಎಲ್ಲ ಸ್ಪರ್ಧಾಪರೀಕ್ಷೆಗಳಿಗೆ ನೂಕುವ ಮುನ್ನ ಅವರ ಆಸಕ್ತಿಯೇನು? ಅವರ ನೈಜ ಸಾಮರ್ಥ್ಯ ಯಾವುದರಲ್ಲಿದೆ? ಎಂದು ಪಾಲಕರು ಮನದಟ್ಟು ಮಾಡಿಕೊಳ್ಳುವುದು ಬಹುಮುಖ್ಯ. ಶಿಕ್ಷಣದ ಉದ್ದೇಶ ಎಲ್ಲರಲ್ಲೂ ಅಡಗಿರುವ ಸುಪ್ತಪ್ರತಿಭೆಯನ್ನು ಅನಾವರಣಗೊಳಿಸುವುದೇ ಅಲ್ಲವೇ? ಸಂಗೀತವೋ ಚಿತ್ರಕಲೆಯಲ್ಲೋ – ಅದ್ಭುತ ಪ್ರತಿಭೆಯನ್ನು ತೋರುವ ಮಗುವಿಗೆ ಬಲವಂತವಾಗಿ ಎಂಜಿನಿಯರೋ ಡಾಕ್ಟರೋ ಲಾಯರೋ ಮಾಡಲು ಹೋದರೆ ಆ ಮಗುವಿನ ಭವಿಷ್ಯವೇ ಹಾಳಾಗುವ ಸಾಧ್ಯತೆ ಇರುತ್ತದೆ.

ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವಿಲ್ಲವೆಂತಲ್ಲ; ಪರಿಹಾರ ಖಂಡಿತ ಇದೆ. ಮುಖ್ಯವಾಗಿ ಟೀನೇಜ್ ಮಕ್ಕಳ ಪಾಲಕರು ತಾವೂ 'ಆ ಘಟ್ಟವನ್ನು ದಾಟಿ ಬಂದಿದ್ದೇವೆ, ಈಗ ನಮ್ಮ ಮಕ್ಕಳ ಸರದಿ' ಎಂದು ಧೈರ್ಯ ತಂದುಕೊಳ್ಳಬೇಕು. ಸುಭಾಷಿತದಲ್ಲೇ ಉಲ್ಲೇಖಿಸಿರುವಂತೆ ಷೋಡಶ (ಹದಿನಾರು) ವರ್ಷದ ನಂತರ ಮಕ್ಕಳನ್ನು ಸ್ನೇಹಿತರಂತೆ ಕಾಣಬೇಕು. ತಪ್ಪು ಮಾಡಿದಾಗ ಗದರುವುದು, ಹೊಡಿಯುವುದು ಮಾಡದೇ ಸಾವಧಾನವಾಗಿ ಅವರಿಗೆ ತಿಳಿಹೇಳಬೇಕು. ಆದರೆ ನಾವೇ ಗಾಬರಿಯಾಗಿ ಅವರನ್ನು ಯದ್ವಾತದ್ವಾ ಬೈಯ್ಯುವುದರಿಂದ ಅವರಲ್ಲಿ ಸಿಡಿದೇಳುವ ('ರೆಬೆಲ್') ಮನೋಭಾವ ಮೂಡುತ್ತದೆ. ತಂದೆ-ತಾಯಿಗಳು ಎಂದರೆ ಇಷ್ಟೇ – ಎಂಬ ಅಸಡ್ಡೆ ಅವರ ಮನದಲ್ಲಿ ಚಿಗಿತು, ಅದು ಆಳವಾಗಿ ಬೇರೂರುತ್ತದೆ. ಈಗಾಗಲೇ ಕೊಂಚ ಖಿನ್ನರಾಗಿರುವುದರಿಂದ ಸಮಾಧಾನದಿಂದ ಬೆನ್ನು ತಟ್ಟಿ ತಿಳಿಹೇಳಿದರೆ ಅವರು ಮತ್ತೆ ಸಂತಸದ ಚಿಲುಮೆಯಾಗುತ್ತಾರೆ. ಅವರ ಮುಗುಳ್ನಗೆ ಮತ್ತೆ ಮರಳುತ್ತದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ


ಎಸ್ಸೆಸ್ಸೆಲ್ಸಿ - ಗಣಿತ

ಅಧ್ಯಾಯ–10 ವೃತ್ತಗಳು

ಅಭ್ಯಾಸ 10.2

11) ಒಂದು ಸಮಾಂತರ ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾದಾಗ ಸಮಾಂತರ ಚತುರ್ಭುಜವು ವಜ್ರಾಕೃತಿಯಾಗುತ್ತದೆ ಎಂದು ಸಾಧಿಸಿ.

ಪರಿಹಾರ:–



O ಕೇಂದ್ರವಿರುವ ವೃತ್ತಕ್ಕೆ ABCD ಚತುರ್ಭುಜವು ವೃತ್ತಪರಿಧಿಯಲ್ಲಿರುವ PQRS ಬಿಂದುಗಳಲ್ಲಿ ಸ್ಪರ್ಶಿಸುತ್ತದೆ. ಮತ್ತು ABCD ಚತುರ್ಭುಜವು ಸಮಾಂತರ ಚತುರ್ಭುಜವಾಗಿದೆ

ಹೀಗಾಗಿಯೇ AB = CD ಮತ್ತು BC = AD.

ಮೇಲಿನ ಚಿತ್ರದಿಂದ (i) DR = DS (ii) BP = BQ (iii) CR = CQ (iv) AP = AS

D, B, C ಮತ್ತು A ಬಿಂದುಗಳ ಮೇಲಿನಿಂದ ವೃತ್ತಕ್ಕೆ ಸ್ಪರ್ಶಕವನ್ನು ಎಳೆಯಲಾಗಿದೆ

ಇವುಗಳನ್ನು ಕೂಡಿಸಿ

DR+BP+CR+AP = DS+BQ+CQ+AS

ಪುನರ್ ರಚಿಸಿ

(BP+AP)+(DR+CR) = (CQ+BQ)+(DS+AS)

ಪುನಃ ಪುನರ್ ರಚಿಸಿ

AB+CD = BC+AD

ಹೀಗಾಗಿ AB = CD ಮತ್ತು BC = AD


2AB = 2BC

∴ AB = BC


ಹೀಗಾಗಿ AB = BC = CD = DA,

ಆದ್ದರಿಂದ ABCD ಸಮಾಂತರ ಚತುರ್ಭುಜವು ವಜ್ರಾಕೃತಿಯಾಗುತ್ತದೆ

12) ಸ್ಪರ್ಶ ಬಿಂದು **D**ಯು **BC** ಬಾಹುವನ್ನು **BD** ಮತ್ತು **DC**ಯ ಉದ್ದ ಕ್ರಮವಾಗಿ **8 cm** ಮತ್ತು **6 cm** ಇರುವಂತೆ **4 cm** ತ್ರಿಜ್ಯವಿರುವ ಒಂದು ವೃತ್ತವು **ΔABC**ದಲ್ಲಿ ಆವೃತ್ತಗೊಳಿಸಲು ಅಂತಸ್ಥವಾಗಿರುವಂತೆ ರಚಿಸಲಾಗಿದೆ. [ಚಿತ್ರ 10.14 ನೋಡಿ]. **AB** ಮತ್ತು **AC** ಬಾಹುಗಳ ಉದ್ದವನ್ನು ಕಂಡುಹಿಡಿಯಿರಿ.



ಪರಿಹಾರ:–



ತ್ರಿಭುಜ ABC ದಲ್ಲಿ

ಒಂದು ಬಿಂದುವಿನಿಂದ ವೃತ್ತಕ್ಕೆ ಎಳೆದ ಎರಡು ಸ್ಪರ್ಶಕಗಳ ಉದ್ದ ಸಮನಾಗಿರುತ್ತದೆ ಹೀಗಾಗಿ

(i) CF = CD = 6 cm

(ii) BE = BD = 8 cm

(iii) AE = AF = x

ಈಗ ಈ ಕೆಳಗಿನದ್ದನ್ನು ಗಮನಿಸಬಹುದು

(i) AB = EB+AE = 8+x

(ii) CA = CF+FA = 6+x

(iii) BC = DC+BD = 6+8 = 14

ಈಗ semi-perimeter "s" ನ ಮೌಲ್ಯವನ್ನು ಕಂಡುಹಿಡಿಯಬಹುದು

2s = AB+CA+BC

ಈ ಸಮೀಕರಣದಲ್ಲಿ ಬೆಲೆಯನ್ನು ಹಾಕಿದಾಗ

2s = 28+2x

s = 14+x

Area of $\triangle ABC = \sqrt{s(s-a)(s-b)(s-c)}$

ಈ ಸಮೀಕರಣದ ಮೂಲಕ ಮೌಲ್ಯ ಹಾಕಿದಾಗ ಈ ಕೆಳಗಿನದ್ದನ್ನು ಪಡೆಯಬಹುದು

$= \sqrt{(14+x)48x}$ .... (i)

ಪುನಃ △ABC ದ ವಿಸ್ತೀರ್ಣವನ್ನು ಲೆಕ್ಕ ಮಾಡಿದಾಗ

= 2 × area of (△AOF + △COD + △DOB)

= 2×[(½×OF×AF)+(½×CD×OD)+(½×DB×OD)]

= 2×½(4x+24+32) = 56+4x ....(ii)

ಸಮೀಕರಣದ (i) ಮತ್ತು (ii), ರಿಂದ ನಾವು ಪಡೆಯುತ್ತೇವೆ

$\sqrt{(14+x)48x} = 56+4x$

ಈಗ ಎರಡೂ ಕಡೆ ವರ್ಗ ಮಾಡಿದಾಗ (Now, square both sides,)

$48x(14+x) = (56+4x)^2$

$48x = [4(14+x)]^2/(14+x)$

$48x = 16(14+x)$

$48x = 224+16x$

$32x = 224$

$x = 7$ cm

ಹೀಗಾಗಿ AB = 8+x

i.e. AB = 15 cm

ಮತ್ತು CA = x+6 =13 cm.

13) ಒಂದು ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾದಾಗ, ವೃತ್ತದ ಕೇಂದ್ರದಲ್ಲಿ ಚತುರ್ಭುಜದ ಅಭಿಮುಖ ಬಾಹುಗಳಿಂದ ಉಂಟಾದ ಕೋನಗಳು ಪರಿಪೂರಕಗಳಾಗಿರುತ್ತದೆ ಎಂದು ಸಾಧಿಸಿ.


(ಮುಂದುವರಿಯುವುದು)

II PUC MATHEMATICS

VECTOR ALGEBRA

Problems:-

1. Represent graphically a displacement of 40 km, 30^0 West of south.



Soln:- The vector $\overrightarrow{OP}$ represents the required displacement. [Here, OP = 4AB]

2. Classify the following measures as scalars and vectors.

(i) 5 secs (ii) 1000 cm^3 (iii) 10 Newton (iv) 30 km/hr (v) 10gm/cm^3 (vi) 20 m/sec towards north.


Soln:- (i) Time-scalar (ii) Volume-scalar (iii) Force-Vector (iv) Speed-scalar (v) density-scalar (vi) velocity-vector.

3. Classify as scalar and vector quantities:

(i) Acceleration (ii) power (iii) Density

Soln:- (i) Acceleration is a vector.
(ii) Power is a scalar
(iii) density is scalar

4. In the given figure, identify the following vectors - (i) Co-initial (ii) Equal (iii) Collinear but not equal.



Soln:- (i) Co-initial vectors are $\vec{a}$ and $\vec{d}$

(ii) $\vec{b}$ and $\vec{d}$ are equal vectors

(iii) $\vec{b}$ and $\vec{c}$ are collinear but not equal

5. Say whether true or false:-

(i) Zero vector is unique

(ii) 5 $\vec{a}$ and -8 $\vec{a}$ are collinear

(iii) The magnitude of a vector can be a negative scalar


Soln:- (i) False
[∴ zero vector is not unique]
(ii) True
[∴ x $\vec{a}$ and y $\vec{a}$ are collinear vectors]
(iii) False
[∴ magnitude is always non-negative]

6. A girl walks 4 km towards west, then she walks 3 km in a direction 30^0 east of north and stops.

a) Determine the girl's displacement from her initial point of departure.

b) Also find the distance between the final position and initial position of the girl.

Soln:- Let $\vec{r}$ be the vector representing displacement $\overrightarrow{OB}$.



$\therefore \vec{r} = -x\hat{i} + y\hat{j}$

In ΔAMB, $\sin 60^0 = \frac{y}{3} \Rightarrow \frac{\sqrt{3}}{2} = \frac{y}{3}$

$\therefore y = \frac{3\sqrt{3}}{2}$ and $\cos 60^0 = \frac{4-x}{3} \Rightarrow \frac{1}{2} = \frac{4-x}{3}$

$\therefore 4-x = \frac{3}{2} \Rightarrow x = \frac{5}{2}$

$\therefore \vec{r} = -\frac{5}{2}\hat{i} + \frac{3\sqrt{3}}{2}\hat{j}$ is required displacement

Distance between final & initial position


$= \sqrt{\left(-\frac{5}{2}\right)^2 + \left(\frac{3\sqrt{3}}{2}\right)^2} = \sqrt{\frac{25}{4} + \frac{27}{4}} = \sqrt{13}$ km

Addition of vectors

Let $\vec{a}$ and $\vec{b}$ any two vectors.

Take any point O and draw segments $\overline{OA}$ & $\overline{AB}$ such that $\overline{OA} = \vec{a}$ & $\overline{AB} = \vec{b}$

Join O, B.



Then, $\overline{OB}$ is called the sum (or) addition of $\vec{a}$ and $\vec{b}$. Thus $\vec{a} + \vec{b} = \overline{OA} + \overline{AB} = \overline{OB}$.

i) Triangle Law of Addition of Vectors –

In a Δle OAB, if $\overline{OA}$ and $\overline{AB}$ represent $\vec{a}$ and $\vec{b}$ respectively, then $\overline{OB}$ represents the vectors $(\vec{a} + \vec{b})$. (Contd)

‘ಜೈನ ಅಭಿವೃದ್ಧಿ ನಿಗಮ ಸ್ಥಾಪಿಸಿ’

ಸಮುದಾಯದಿಂದ ಹಕ್ಕೊತ್ತಾಯ ಮಂಡನೆ • ಡಿಸಿಎಂಗೆ ಗುಣಧರನಂದಿ ಮಹಾರಾಜ ಮನವಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜೈನ ಅಭಿವೃದ್ಧಿ ನಿಗಮ ಸ್ಥಾಪಿಸಿ ಅದಕ್ಕೆ ವಾರ್ಷಿಕ ₹200 ಕೋಟಿ ಮೀಸಲಿಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರದ ಗಮನ ಸೆಳೆಯಲು, ತಾಲ್ಲೂಕಿನ ಬಸ್ತವಾಡದಲ್ಲಿ ಗುಣಧರನಂದಿ ಮಹಾರಾಜರ ನೇತೃತ್ವದಲ್ಲಿ ಸೋಮವಾರ ‘ಜೈನ ಸಮಾವೇಶ’ ನಡೆಯಿತು. ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಅಪಾರ ಸಂಖ್ಯೆಯ ಜೈನ ಸಮುದಾಯವರು ತಮ್ಮ ಹಕ್ಕೊತ್ತಾಯ ಮಂಡಿಸಿದರು.

ಅಲ್ಪಸಂಖ್ಯಾತರ ನಿಗಮದಲ್ಲಿ ಜೈನರಿಗೆ ಶೇ 5ರಷ್ಟು ಮೀಸಲಾತಿ ನೀಡಲಾಗಿದೆ. ಇದನ್ನು ಶೇ 20ಕ್ಕೆ

> **ಈಗ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಬೇಕು. ಮುಂದಿನ ವಿಧಾನಸಭೆ ಅವಧಿಗೆ ಸತೀಶ ಜಾರಕಿಹೊಳಿ ಅವರನ್ನು ಮುಖ್ಯಮಂತ್ರಿ ಮಾಡಬೇಕು**
> **ಗುಣಧರನಂದಿ ಮಹಾರಾಜ**
> ಬಸ್ತವಾಡ ಜೈನ ಆಶ್ರಮ, ಬೆಳಗಾವಿ

ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಗುಣಧರನಂದಿ ಮಹಾರಾಜರು ಮಾತನಾಡಿ, ‘ನಮ್ಮ ಸಮುದಾಯದ ಬೇಡಿಕೆಗಳನ್ನು ಸರ್ಕಾರ 20 ದಿನಗಳೊಳಗೆ ಈಡೇರಿಸಬೇಕು. ಜೈನ ಅಭಿವೃದ್ಧಿ ನಿಗಮ ಸ್ಥಾಪಿಸಿ, ಪ್ರಥಮ ಹಂತವಾಗಿ ಕನಿಷ್ಠ ₹10 ಕೋಟಿಯಾದರೂ ಮೀಸಲಿಡಲೇಬೇಕು. ಹುಬ್ಬಳ್ಳಿಯಲ್ಲಿ ನಡೆಯಲಿರುವ 405 ಅಡಿ ಎತ್ತರದ ಸುಮೇರು ಪರ್ವತ ಜಿನಬಿಂಬ ಪ್ರತಿಷ್ಠಾ ಪಂಚಕಲ್ಯಾಣಕ ಮಹಾಮಹೋತ್ಸವಕ್ಕೆ ಸರ್ಕಾರದಿಂದ ವ್ಯವಸ್ಥೆ ಮಾಡಬೇಕು’ ಎಂದು ಕೋರಿದರು.



ಬೆಳಗಾವಿ ಬಳಿಯ ಬಸ್ತವಾಡದಲ್ಲಿ ಸೋಮವಾರ ನಡೆದ ಜೈನ ಸಮಾವೇಶದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಗುಣಧರನಂದಿ ಮಹಾರಾಜ ಅವರು ಮನವಿ ನೀಡಿದರು. ಸಚಿವರಾದ ಲಕ್ಷ್ಮಿ ಹೆಬ್ಬಾಳಕರ, ಸತೀಶ ಜಾರಕಿಹೊಳಿ ಇದ್ದರು ಪ್ರಜಾವಾಣಿ ಚಿತ್ರ

‘ಜೈನ ಸಮುದಾಯದಲ್ಲಿ ಎಲ್ಲರೂ ಆರ್ಥಿಕವಾಗಿ ಸಶಕ್ತರೇ ಇದ್ದಾರೆ. ರಾಜ್ಯದಲ್ಲಿ ನಮ್ಮ ಸಮುದಾಯದ ಜನಸಂಖ್ಯೆ ಕೇವಲ 4.5 ಲಕ್ಷ ಅಲ್ಲ; 20 ಲಕ್ಷವಿದೆ. ಹಾಗಾಗಿ ಸರ್ಕಾರ ಮತ್ತೊಮ್ಮೆ ಜನಗಣತಿ ಮಾಡಬೇಕು. ನಮ್ಮ ಸಮುದಾಯದ ಶಿಕ್ಷಣ ಸಂಸ್ಥೆಗಳಲ್ಲಿ ಮೊಟ್ಟೆ ವಿತರಣೆ ಕಡ್ಡಾಯವಾಗಿ ನಿಷೇಧಿಸಬೇಕು. ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ಜಾಗ ಕೊಟ್ಟರೆ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಸತಿ ನಿಲಯಗಳನ್ನು ನಿರ್ಮಿಸಿಕೊಳ್ಳುತ್ತೇವೆ’ ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಸತೀಶ ಜಾರಕಿಹೊಳಿ, ಲಕ್ಷ್ಮಿ ಹೆಬ್ಬಾಳಕರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತಿತರರು ಸಮಾವೇಶದ ಸ್ಥಳಕ್ಕಾಗಮಿಸಿ ಬೇಡಿಕೆ ಆಲಿಸಿದರು.



ಪ್ರಜಾವಾಣಿ ರಸಪ್ರಶ್ನೆ

ಕಲಬುರಗಿಯಲ್ಲಿ ಸೋಮವಾರ ನಡೆದ ‘ಪ್ರಜಾವಾಣಿ ರಸಪ್ರಶ್ನೆ ಚಾಂಪಿಯನ್‌ಷಿಪ್’ನ ಕಲಬುರಗಿ ವಲಯಮಟ್ಟದ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಗೆದ್ದುಕೊಂಡ ಕಲಬುರಗಿಯ ಶರಣಬಸವೇಶ್ವರ ವಸತಿ (ಎಸ್‌ಬಿಆರ್) ಪಬ್ಲಿಕ್ ಶಾಲೆಯ ಸಾಯಿ ಸಮರ್ಥ್ ಹಾಗೂ ಬಸವಪ್ರಸಾದ ಜೆ.ಪಿ. ಅವರಿಗೆ ಡಿಡಿಪಿಐ ಸೂರ್ಯಕಾಂತ ಮದಾನೆ, ಕ್ಯೂರಿಯಾಸಿಟಿ ನಾಲೆಜ್ ಸಲ್ಯೂಷನ್ಸ್‌ನ ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಅವರು ಬಹುಮಾನ ವಿತರಿಸಿದರು

‘ಬಾಡೂಟ’ಕ್ಕಾಗಿ ಮೊಟ್ಟೆ ತಿಂದು ಪ್ರತಿಭಟನೆ

ಬೇಳೆ ಜೊತೆ ಮೂಳೆಯೂ ಇರಲಿ: ಪ್ರಗತಿಪರ ಸಂಘಟನೆಗಳ ಒಕ್ಕೂಟ ಆಗ್ರಹ

ಪ್ರಜಾವಾಣಿ ವಾರ್ತೆ

ಮಂಡ್ಯ: ಇಲ್ಲಿ ಆಯೋಜಿಸಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಸ್ಯಾಹಾರದ ಜೊತೆಗೆ ಮಾಂಸಾಹಾರವನ್ನೂ ನೀಡಬೇಕು ಎಂದು ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಮೊಟ್ಟೆ ತಿಂದು ಪ್ರತಿಭಟಿಸಿದರು.

‘ಬೇಳೆಯ ಜೊತೆ ಮೂಳೆಯೂ ಇರಲಿ’, ‘ಹಪ್ಪಳದ ಜೊತೆ ಕಬಾಬ್ ಇರಲಿ’, ‘ಕೋಸಂಬರಿ ಜೊತೆ ಎಗ್ ಬುರ್ಜಿ ಇರಲಿ’, ‘ಮುದ್ದೆ ಜೊತೆ ಬೋಟಿ ಇರಲಿ’ ಎಂಬ ಘೋಷಣೆ ಕೂಗಿ ಮಾಂಸಾಹಾರ ಕೊಡಬೇಕೆಂದು ಆಗ್ರಹಿಸಿದರು.

‘ಆಡಂಬರದ ಕೆಲವು ಸಸ್ಯಾಹಾರದ ತಿನಿಸುಗಳನ್ನು ಕೈಬಿಟ್ಟು, ಕೋಳಿ ಮಾಂಸದ ತುಂಡು ಮತ್ತು ಮೊಟ್ಟೆಯನ್ನು ಕಡ್ಡಾಯವಾಗಿ ಕೊಡಬೇಕು. ಇಲ್ಲದಿದ್ದರೆ, ನಾವು ಸಾರ್ವಜನಿಕರಿಂದ ಕೋಳಿ, ಮೊಟ್ಟೆ ಮತ್ತು ಪಡಿತರವನ್ನು ಸಂಗ್ರಹಿಸಿ ಜನರಿಗೆ ಮಾಂಸಾಹಾರ ವಿತರಿಸುವ ದೊಡ್ಡ ಪ್ರತಿಭಟನೆಯನ್ನು ಸಾಹಿತ್ಯ ಸಮ್ಮೇಳನದಲ್ಲಿ ಹಮ್ಮಿಕೊಳ್ಳುತ್ತೇವೆ. ಈ ವಿಚಾರದಲ್ಲಿ ರಾಜಿ ಸಾಧ್ಯವೇ ಇಲ್ಲ. ಇದು ನಾಗರಿಕರ ಆಹಾರ ಮತ್ತು ಆಯ್ಕೆ ಹಕ್ಕು’ ಎಂದು ಪ್ರತಿಪಾದಿಸಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ. ಕುಮಾರಿ ಮಾತನಾಡಿ, ‘ಸಾಹಿತ್ಯ ಸಮ್ಮೇಳನದ ವಾಣಿಜ್ಯ ಮಳಿಗೆಗಳಲ್ಲಿ ಮಾಂಸಾಹಾರಕ್ಕೆ ನಿಷೇಧ ವಿಧಿಸಿ ಸಮ್ಮೇಳನಕ್ಕೆ ಆಗಮಿಸುವ ಲಕ್ಷಾಂತರ ಜನತೆಗೆ ಸಸ್ಯಾಹಾರ ನೀಡಲು ಮುಂದಾಗುವ ಮೂಲಕ ಜನರ ಆಹಾರದ ಹಕ್ಕನ್ನು ಉಲ್ಲಂಘಿಸಲಾಗುತ್ತಿದೆ. ಜನರ ಭಾವನೆಗಳ ಜೊತೆ ಮಹೇಶ ಜೋಶಿ ಆಟ ಆಡುತ್ತಿದ್ದಾರೆ’ ಎಂದರು.

ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಟಿ.ಎಲ್.ಕೃಷ್ಣೇಗೌಡ, ‘ಮಂಡ್ಯ ಜಿಲ್ಲೆಯ ಹಬ್ಬ, ಸಂಭ್ರಮ, ಸಮ್ಮೇಳನಗಳು ಮಾಂಸಾಹಾರಿ ಊಟೋಪಚಾರಕ್ಕೆ ಹೆಸರುವಾಸಿಯಾಗಿವೆ. ಅಲ್ಲದೇ ಸಮ್ಮೇಳನದಲ್ಲಿ ಭಾಗವಹಿಸುವ ಬಹುಸಂಖ್ಯಾತರು ಮಾಂಸಾಹಾರಿಗಳೇ ಆಗಿರುವಾಗ ನಿಷೇಧಿಸಬೇಕೇಕೆ ಎಂಬುದನ್ನು ತಿಳಿಸಬೇಕು’ ಎಂದು ಒತ್ತಾಯಿಸಿದರು.

ವಿವಿಧ ಸಂಘಟನೆಗಳ ಮುಖಂಡರಾದ ಎಂ.ಬಿ. ನಾಗಣ್ಣಗೌಡ, ಎಚ್.ಡಿ. ಜಯರಾಮ್, ಎಂ.ವಿ. ಕೃಷ್ಣ, ಬಿ.ಟಿ. ವಿಶ್ವನಾಥ್, ಗಂಗರಾಜು ಹನಕೆರೆ, ನಿರಂಜನ್, ಟಿ.ಡಿ. ನಾಗರಾಜ್, ನರಸಿಂಹಮೂರ್ತಿ, ಲಂಕೇಶ್ ಮಂಗಲ, ಲಕ್ಷ್ಮಣ್ ಚೀರನಹಳ್ಳಿ, ಅರವಿಂದ ಪ್ರಭು ಭಾಗವಹಿಸಿದ್ದರು.



ಸಮ್ಮೇಳನದಲ್ಲಿ ಸಸ್ಯಾಹಾರದ ಜೊತೆಗೆ ಮಾಂಸಾಹಾರವನ್ನೂ ನೀಡಬೇಕು ಎಂದು ಆಗ್ರಹಿಸಿ, ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಮಂಡ್ಯ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಮೊಟ್ಟೆ ತಿನ್ನುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

‘ಮಾಂಸಾಹಾರ ನಿಷೇಧ’ ಪದ ಹಿಂತೆಗೆತ

ಮಳಿಗೆಗಳನ್ನು ಆನ್‌ಲೈನ್ ಮೂಲಕ ನೋಂದಾಯಿಸಿಕೊಂಡವರಿಗೆ ವಿಧಿಸಿದ್ದ ನಿಬಂಧನೆಗಳಲ್ಲಿ ‘ಮಾಂಸಾಹಾರ ನಿಷೇಧ’ ಪದವನ್ನು ಕನ್ನಡ ಸಾಹಿತ್ಯ ಪರಿಷತ್ತು ಕೈಬಿಟ್ಟಿದೆ. ‘ಇದು ನಮ್ಮ ಹೋರಾಟಕ್ಕೆ ಸಿಕ್ಕ ಮೊದಲ ಜಯ’ ಎಂದು ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಕ್ರಿಯಿಸಿದ್ದಾರೆ.

ಕಸಾಪಗೂ ಆಹಾರ ವ್ಯವಸ್ಥೆಗೂ ಸಂಬಂಧವಿಲ್ಲ: ಜೋಶಿ

ಬೆಂಗಳೂರು: ‘ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಆಹಾರ ವ್ಯವಸ್ಥೆ ಹಾಗೂ ವಿತರಣೆಗಾಗಿ ಜಿಲ್ಲಾ ಮಟ್ಟದಲ್ಲಿ ಸಮಿತಿಗಳಿರುತ್ತವೆ. ಈ ವಿಷಯಕ್ಕೂ ಮತ್ತು ಪರಿಷತ್ತಿಗೂ ಯಾವುದೇ ಸಂಬಂಧವಿಲ್ಲ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಸ್ಪಷ್ಟಪಡಿಸಿದ್ದಾರೆ.

ಮಂಡ್ಯದಲ್ಲಿ ಆಯೋಜನೆಗೊಂಡಿರುವ 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಬಾಡೂಟ ಒದಗಿಸುವ ಬಗ್ಗೆ ನಡೆಯುತ್ತಿರುವ ವಿಚಾರಕ್ಕೆ ಸಂಬಂಧಿಸಿದಂತೆ ಅವರು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

‘ಶಾಸಕ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡರ ಅಧ್ಯಕ್ಷತೆಯಲ್ಲಿ 35 ಜನರನ್ನೊಳಗೊಂಡ ‘ಆಹಾರ ಸಮಿತಿ’ಯನ್ನು ರಚಿಸಲಾಗಿದ್ದು, ಸಮ್ಮೇಳನದ ಊಟೋಪಚಾರದ ವ್ಯವಸ್ಥೆಯನ್ನು ಈ ಸಮಿತಿಯು ನಿರ್ವಹಿಸುತ್ತದೆ. ಡಿಸೆಂಬರ್ 6ರಂದು ಈ ಸಮಿತಿಯು ಸಭೆ ಸೇರಿ ಸಮ್ಮೇಳನದಲ್ಲಿ ಮುದ್ದೆ, ಸೊಪ್ಪು ಸಾಂಬಾರ್ ವಿಶೇಷ ತಿನಿಸಾಗಿದ್ದು, ಉತ್ತರ, ದಕ್ಷಿಣ ಕರ್ನಾಟಕ ಶೈಲಿಯ ಊಟವನ್ನು 300 ಕೌಂಟರ್‌ಗಳಲ್ಲಿ ವ್ಯವಸ್ಥೆ ಮಾಡುವುದು ಸೇರಿದಂತೆ ಅನೇಕ ಮಹತ್ವದ ನಿರ್ಣಯಗಳನ್ನು ತೆಗೆದುಕೊಂಡಿದೆ. ಈ ಸಭೆಯಲ್ಲಿ ನಾನು ಭಾಗವಹಿಸಿರಲಿಲ್ಲ’ ಎಂದು ತಿಳಿಸಿದ್ದಾರೆ.

‘ಮಧು ಜಿ.ಮಾದೇಗೌಡರ ಅಧ್ಯಕ್ಷತೆಯಲ್ಲಿ 30 ಜನರನ್ನೊಳಗೊಂಡ ‘ವಸ್ತು ಪ್ರದರ್ಶನ ಸಮಿತಿ’ಯನ್ನು ರಚಿಸಲಾಗಿದ್ದು, ಪುಸ್ತಕ ಮಳಿಗೆ, ವಾಣಿಜ್ಯ ಮಳಿಗೆ, ಆಹಾರ ಮಳಿಗೆಗಳ ಹೊಣೆಯನ್ನು ಈ ಸಮಿತಿ ನಿರ್ವಹಿಸುತ್ತಿದೆ. ಈ ಸಮಿತಿಯೇ ಈಗ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ‘ಮಾಂಸಾಹಾರ, ಮದ್ಯ ಮತ್ತು ತಂಬಾಕು ಮಾರಾಟವನ್ನು ನಿಷೇಧಿಸಲಾಗಿದೆ’ ಎಂಬ ಸೂಚನೆಯನ್ನು ನೀಡಿದೆ. ಈ ಸೂಚನೆಗಳಿಗೂ ಕನ್ನಡ ಸಾಹಿತ್ಯ ಪರಿಷತ್ತಿಗೂ ಯಾವ ಸಂಬಂಧವಿರುವುದಿಲ್ಲ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಅಧ್ಯಕ್ಷನಾಗಲು ಸಿದ್ಧ’

ಸೊರಬ: ‘ರಾಜ್ಯದಲ್ಲಿ ರೈತರ ಜಮೀನು ವಕ್ಫ್ ಮಂಡಳಿ ಹೆಸರಿಗೆ ನೋಂದಣಿ ಆಗಿರುವ ವಿಷಯದ ಜತೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನು ಬದಲಾಯಿಸುವಂತೆ ಕೇಂದ್ರದ ನಾಯಕರ ಗಮನಕ್ಕೆ ತರಲಾಗಿದೆ. ವರಿಷ್ಠರು ಬಯಸಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ನೀಡುವುದಾದರೆ ಒಪ್ಪಿಕೊಳ್ಳಲು ಸಿದ್ಧ’ ಎಂದು ಮಾಜಿ ಸಚಿವ ಕುಮಾರ್ ಬಂಗಾರಪ್ಪ ಹೇಳಿದರು.



ಕುಮಾರ್ ಬಂಗಾರಪ್ಪ

ಬಿಜೆಪಿ ಕಚೇರಿಯಲ್ಲಿ ಮುಖಂಡರ ಸಭೆಯಲ್ಲಿ ಮಾತನಾಡಿ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಮುಖಂಡರಿಗೆ ಸ್ಪಂದಿಸುತ್ತಿಲ್ಲ ಎಂಬ ಆರೋಪವಿದೆ. ಅಂಥ ಅನುಭವ ನನಗೂ ಆಗಿದೆ. ಅವರ ಕಾರ್ಯವೈಖರಿ ಬಗ್ಗೆ ಬಹುತೇಕ ನಾಯಕರಿಗೆ ಅಸಮಾಧಾನವಿದೆ. ಪಕ್ಷದ ಚೌಕಟ್ಟಿನಡಿಯಲ್ಲಿ ಕೇಂದ್ರ ನಾಯಕರು ತೆಗೆದುಕೊಳ್ಳುವತೀರ್ಮಾನಕ್ಕೆ ಬದ್ಧ’ ಎಂದರು.

ಹಿಂಡಲಗಾ ಜೈಲಿನಲ್ಲಿ ಜೂಜಾಟ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ಕೈದಿಗಳು ಜೂಜಾಟ ಆಡುವುದು, ಸ್ಮಾರ್ಟ್‌ಫೋನ್ ಬಳಕೆ ಮಾಡುವ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಜೈಲಿನೊಳಗಿದ್ದವರೇ ಈ ವಿಡಿಯೊಗಳನ್ನು ಹರಿಬಿಟ್ಟಿದ್ದಾರೆ.

ಜೈಲಿನ ಸರ್ಕಲ್ ನಂಬರ್-2ರ ಬ್ಯಾರಕ್‌ನಲ್ಲಿ ಗಾಂಜಾ ಡೀಲರ್ ಶಾಹಿದ್ ಖುರೇಶಿ ಹಾಗೂ ಶಿವಮೊಗ್ಗ ಮೂಲದ ಕೈದಿ ಆನಂದ ನಾಯಕ್ ಸೇರಿ ಹಲವರು ವಿಡಿಯೊದಲ್ಲಿ ಕಾಣಿಸಿದ್ದಾರೆ. ನಾಲ್ವರು ಕೈದಿಗಳು ಜೂಜಿಗೆ ಹಣ ಕಟ್ಟಿ ಆಡುವುದು ರೆಕಾರ್ಡ್ ಆಗಿದೆ. ಇನ್ನುಳಿದ ಹಲವು ಕೈದಿಗಳು ಈ ಜೂಜಾಟ ನೋಡುತ್ತಲೇ ಮೋಜು- ಮಸ್ತಿಯಲ್ಲಿ ತೊಡಗಿದ್ದಾರೆ.

ಇವರೊಂದಿಗೇ ಇದ್ದ ಕೈದಿ ಇದನ್ನು ತನ್ನ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು, ಹೊರಗಿರುವ ತನ್ನ ಗೆಳೆಯರಿಗೆ ಹಂಚಿದ್ದಾನೆ. ಜೈಲಿನಲ್ಲಿದ್ದರೂ ತಾನು ಐಷಾರಾಮಿ ಆಗಿದ್ದೇನೆ ಎಂಬ ಸಂದೇಶ ರವಾನಿಸಲು ಹೀಗೆ ಮಾಡಿದ್ದಾನೆ ಎನ್ನಲಾಗಿದೆ.



ಬೆಳಗಾವಿಯ ಕಾರಾಗೃಹದಲ್ಲಿ ಕೈದಿಗಳು ಜೂಜಾಟದಲ್ಲಿ ತೊಡಗಿರುವ ದೃಶ್ಯ

ಕಾರಾಗೃಹದಲ್ಲಿ ಮೊಬೈಲ್‌ಗೆ ಕಡಿವಾಣ ಹಾಕಲು ಜಾಮರ್ ಅಳವಡಿಸಲಾಗಿದೆ ಎಂದು ಈ ಹಿಂದೆಯೇ ಬಂದಿಖಾನೆ ಇಲಾಖೆ ಅಧಿಕಾರಿಗಳು ಹೇಳಿದ್ದರು. ಎರಡು ತಿಂಗಳ ಹಿಂದೆಯೇ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಅವರು 250ಕ್ಕೂ ಹೆಚ್ಚು ಪೊಲೀಸ್ ಪಡೆಯೊಂದಿಗೆ ಏಕಾಏಕಿ ದಾಳಿ ನಡೆಸಿದ್ದರು. ಆಗಲೂ ಏನೂ ಸಿಕ್ಕಿಲ್ಲ ಎಂದು ಹೇಳಿದ್ದರು. ಆದರೆ, ಈಗ ಗಾಂಜಾ, ಇಸ್ಪೀಟ್ ಎಲೆಗಳು, ಸಿಗರೇಟ್ ತುಣುಕು, ಮೊಬೈಲ್‌ಗಳೂ ಪತ್ತೆಯಾಗಿವೆ.

ಇದೇ ಕಾರಾಗೃಹದಲ್ಲಿರುವ ಕೈದಿ ಜಯೇಶ್ ಪೂಜಾರಿ ಎಂಬಾತ, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿಗೆ ಕೊಲೆ ಬೆದರಿಕೆ ಹಾಕಿದ್ದ. ₹100 ಕೋಟಿ ನೀಡದಿದ್ದರೆ ಗಡ್ಕರಿ ಅವರ ನಾಗ್ಪುರದ ಕಚೇರಿಯನ್ನು ಬಾಂಬ್ ಇಟ್ಟು ಸ್ಫೋಟಿಸುತ್ತೇನೆ, ನಾನು ದಾವೂದ್ ಇಬ್ರಾಹಿಂ ಸಹಚರ ಎಂದೆಲ್ಲ ಹೇಳಿದ್ದ. ಈ ಪ್ರಕರಣದ ಬಳಿಕ ಜೈಲಿನೊಳಗೆ ಮೊಬೈಲ್ ಬಳಕೆ ಆಗುತ್ತಿರುವ ಸಂಗತಿ ಹೊರಬಿದ್ದಿತ್ತು.

ಬಳಿಕ ಗೃಹಸಚಿವ ಡಾ.ಜಿ. ಪರಮೇಶ್ವರ ಖುದ್ದು ಭೇಟಿ ನೀಡಿ ಪರಿಶೀಲಿಸಿದ್ದರು. ಜೈಲಿನೊಳಗೆ ಮೊಬೈಲ್ ಬಳಕೆಗೆ ಕಡಿವಾಣ ಹಾಕಿದ್ದಾಗಿ ಹೇಳಿದ್ದರು.

ಬಿಜೆಪಿ ಬಿರುಕು: ಸರ್ಕಾರದ ಮೇಲುಗೈ

ಒಂದನೇ ಪುಟದಿಂದ...

ಅಶೋಕ ಆಗ್ರಹಕ್ಕೆ ಭಿನ್ನವಾದ ಧ್ವನಿಯೆತ್ತಿದ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, ‘ಪಂಚಮಸಾಲಿ ಲಿಂಗಾಯತರು ಮೀಸಲಾತಿಗೆ ಆಗ್ರಹಿಸಿ ಹಮ್ಮಿಕೊಂಡಿರುವ ಪ್ರತಿಭಟನೆಯನ್ನು ಸರ್ಕಾರ ಹತ್ತಿಕ್ಕುತ್ತಿದೆ. ಪ್ರತಿಭಟನೆಗೆ ಜನರು ಬಾರದಂತೆ, ವಾಹನಗಳು ಬೆಳಗಾವಿ ಪ್ರವೇಶಿಸದಂತೆ ಜಿಲ್ಲಾಧಿಕಾರಿ ನಿಷೇಧ ಹೇರಿದ್ದಾರೆ. ಅನುಭವ ಮಂಟಪದ ಬಗ್ಗೆ ಮಾತನಾಡುವ ನೀವು ಲಿಂಗಾಯತರಿಗೆ ಅನ್ಯಾಯ ಮಾಡುತ್ತಿದ್ದೀರಿ’ ಎಂದು ಪ್ರತ್ಯೇಕ ವಿಷಯವನ್ನು ಚರ್ಚೆಗೆ ತಂದರು.

ಇದರಿಂದ ಇಕ್ಕಟ್ಟಿಗೆ ಸಿಲುಕಿದ ಅಶೋಕ, ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ಸೇರಿದಂತೆ ಬಿಜೆಪಿಯ ಹಲವರು, ವಕ್ಫ್ ಮಂಡಳಿ ನೋಟಿಸ್ ಮತ್ತು ಪಂಚಮಸಾಲಿ ಪ್ರತಿಭಟನೆಗೆ ನಿಷೇಧ ಹೇರಿರುವ ವಿಚಾರಗಳನ್ನು ಮಿಶ್ರಣ ಮಾಡಿಕೊಂಡು ಮಾತನಾಡಲು ಆರಂಭಿಸಿದರು.

‘ಮೊದಲು ಪ್ರಶ್ನೋತ್ತರ ಮುಗಿಯಲಿ, ನಂತರ ನಿಲುವಳಿ ಸೂಚನೆ ಮಂಡನೆಗೆ ನಿಯಮಾನುಸಾರ ಅವಕಾಶ ನೀಡುತ್ತೇನೆ’ ಎಂದು ಸಭಾಧ್ಯಕ್ಷರು ಭರವಸೆ ನೀಡಿದರು. ಇದನ್ನು ವಿರೋಧಿಸಿ ಯತ್ನಾಳ ನೇತೃತ್ವದಲ್ಲಿ ಬಿಜೆಪಿಯ ಕೆಲವು ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧರಣಿ ಆರಂಭಿಸಿದರು. ಗದ್ದಲ ಹೆಚ್ಚಾಗುತ್ತಿದ್ದಂತೆ ಸಭಾಧ್ಯಕ್ಷರು ಸದನದ ಕಲಾಪವನ್ನು ಮಧ್ಯಾಹ್ನ 2.30ರವರೆಗೆ ಮುಂದೂಡಿದರು.

ಬಿಜೆಪಿ ಸಿಎಲ್‌ಪಿ ಸಭೆ: ಯತ್ನಾಳ್ ಬಣ ಗೈರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಂಡದ ಜತೆ ಗುರುತಿಸಿಕೊಂಡಿರುವ ಭಿನ್ನಬಣದ ಶಾಸಕರ ಗೈರು ಹಾಜರಿಯಲ್ಲಿ ಸೋಮವಾರ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದಲ್ಲಿ ಒಗ್ಗಟ್ಟಿನ ಹೋರಾಟ ನಡೆಸುವ ತೀರ್ಮಾನ ತೆಗೆದುಕೊಂಡಿತು.

ಪಕ್ಷದ ರಾಜ್ಯದ ಸಹ ಉಸ್ತುವಾರಿ ಸುಧಾಕರ ರೆಡ್ಡಿ ನೇತೃತ್ವದಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಗೆ ಯತ್ನಾಳ, ರಮೇಶ್ ಜಾರಕಿಹೊಳಿ, ಎಸ್.ಟಿ. ಸೋಮಶೇಖರ್, ಶಿವರಾಮ್ ಹೆಬ್ಬಾರ್, ಮಂಜುಳಾ ಲಿಂಬಾವಳಿ ಗೈರು ಹಾಜರಾಗಿದ್ದರು.

ಈ ಕುರಿತು ಸುದ್ದಿಗಾರ ಜತೆ ಮಾತನಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಗೈರು ಹಾಜರಾದವರ ಜತೆ ಮಾತನಾಡಿರುವೆ. ಮುಂದಿನ ಸಭೆಗೆ ಬರುವ ಭರವಸೆ ನೀಡಿದ್ದಾರೆ. ಎಲ್ಲರೂ ಒಟ್ಟಾಗಿ ಸದನದಲ್ಲಿ ಸರ್ಕಾರದ ವಿರುದ್ಧ ಹೋರಾಟ ಮಾಡುತ್ತೇವೆ ಎಂದರು. ವಕ್ಫ್, ಉತ್ತರ ಕರ್ನಾಟದ ಸಮಸ್ಯೆ ವಿರುದ್ಧ ಧ್ವನಿ ಎತ್ತುವೆವು. ಪಂಚಮಸಾಲಿ ಲಿಂಗಾಯತರ ಹೋರಾಟಕ್ಕೆ ಬೆಂಬಲ ಕೊಡುವೆವು ಎಂದು ಹೇಳಿದರು.

ನೇರ ತೆರಿಗೆ: ರಾಜ್ಯದಲ್ಲಿ ₹1.89 ಲಕ್ಷ ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ನವೆಂಬರ್ ಅಂತ್ಯದವರೆಗೆ ₹1.05 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿದ್ದರೆ, ₹1.89 ಲಕ್ಷ ಕೋಟಿ ನೇರ ತೆರಿಗೆ ಸಂಗ್ರಹವಾಗಿದೆ ಎಂದು ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಲೋಕಸಭೆಗೆ ತಿಳಿಸಿದರು.

ಸಂಸದ ಅರುಣ್ ಕುಮಾರ್ ಸಾಗರ್ ಸೋಮವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, ‘ಜಿಎಸ್‌ಟಿ ಹಾಗೂ ನೇರ ತೆರಿಗೆ ಸಂಗ್ರಹದಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ’ ಎಂದರು.

ಎತ್ತಿನಹೊಳೆ ಭೂಸ್ವಾಧೀನ ಪರಿಹಾರ ವಿಳಂಬ: ರೈತ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಹಳೇಬೀಡು (ಹಾಸನ ಜಿಲ್ಲೆ): ಎತ್ತಿನಹೊಳೆ ಯೋಜನೆಯ ಭೂಸ್ವಾಧೀನಕ್ಕೆ ಪರಿಹಾರ ಸಿಗದೇ ಸೋಮವಾರ ಶಿವಪುರ ಕಾವಲಿನ ವಡ್ಡರಹಳ್ಳಿ ಬಳಿ ನಾಲೆಗೆ ಹಾರಿ ರೈತ ರಂಗಸ್ವಾಮಿ (55) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸುತ್ತಲಿನ ರೈತರು ಸರ್ಕಾರದ ಕ್ರಮ ಖಂಡಿಸಿ, ನಾಲೆಯಿಂದ ಶವ ಹೊರತೆಗೆಯದೇ ಪ್ರತಿಭಟಿಸಿದರು.



ರಂಗಸ್ವಾಮಿ

‘ಭೂಸ್ವಾಧೀನಕ್ಕೆ ಪರಿಹಾರ ಕೊಡಲು ಭೂಸ್ವಾಧೀನ ಇಲಾಖೆಯಲ್ಲಿ ಶೇ 20ರಿಂದ ಶೇ 30ರಷ್ಟು ಲಂಚ ಕೇಳಲಾಗುತ್ತಿದೆ’ ಎಂದು ಗ್ರಾಮ ಪಂಚಾಯಿತಿ ಸದಸ್ಯ ಶೇಖರೇಗೌಡ ಆರೋಪಿಸಿದರು. ಸ್ಥಳಕ್ಕೆ ಬಂದ ಮಾಜಿ ಸಚಿವ ಬಿ. ಶಿವರಾಂ, ರೈತರೊಂದಿಗೆ ಮಾತುಕತೆ ನಡೆಸಿದರು. ಪರಿಹಾರ ವಿಳಂಬ ಆಗಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಎಂ.ಮಮತಾ ಪ್ರತಿಭಟನನಿರತರೊಂದಿಗೆ ಮಾತುಕತೆ ನಡೆಸಿ, ಮನವೊಲಿಸಲು ಯತ್ನಿಸಿದರು. ‘ಪರಿಹಾರ ಅರ್ಜಿ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲಾಗುವುದು. ತಾತ್ಕಾಲಿಕವಾಗಿ ಕುಟುಂಬಕ್ಕೆ ₹2 ಲಕ್ಷ ಪರಿಹಾರ ಕೊಡಲಾಗಿದೆ’ ಎಂದರು.

ನಂತರ ಪ್ರತಿಭಟನೆ ಹಿಂಪಡೆದ ರೈತರು, ಮೃತದೇಹವನ್ನು ನಾಲೆಯಿಂದ ಎತ್ತಲು ಅನುವು ಮಾಡಿಕೊಟ್ಟರು.

‘ಮೃತಪಟ್ಟಿರುವ ರೈತ ಪರಿಹಾರ ಕೋರಿ ಅರ್ಜಿಯನ್ನೂ ಸಲ್ಲಿಸಿಲ್ಲ. ಶಿವಪುರ ಕಾವಲ್ ಅರಣ್ಯ ಭೂಮಿ ಆಗಿರುವುದರಿಂದ ಶಿವಪುರ ಹಾಗೂ ಐದಳ್ಳ ಕಾವಲ್‌ನ ಯಾವುದೇ ರೈತರಿಗೂ ಪರಿಹಾರ ವಿತರಿಸಿಲ್ಲ’ ಎಂದು ಎತ್ತಿನಹೊಳೆ ಯೋಜನೆ ವಿಶೇಷ ಭೂಸ್ವಾಧೀನಾಧಿಕಾರಿಯೂ ಆಗಿರುವ ಹಾಸನದ ಉಪ ವಿಭಾಗಾಧಿಕಾರಿ ಮಾರುತಿ ಪ್ರತಿಕ್ರಿಯಿಸಿದರು.

ಆರ್ಥಿಕ ತಜ್ಞ ಪ್ರೊ.ವಿ.ಕೆ.ನಟರಾಜ್ ನಿಧನ

ಪ್ರಜಾವಾಣಿ ವಾರ್ತೆ

ಮೈಸೂರು: ಆರ್ಥಿಕ ತಜ್ಞ, ಮೈಸೂರು ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ನಿವೃತ್ತ ಮುಖ್ಯಸ್ಥ ಪ್ರೊ.ವಿ.ಕೆ.ನಟರಾಜ್ (85) ಅನಾರೋಗ್ಯದಿಂದ ಸೋಮವಾರ ಬೆಳಿಗ್ಗೆ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.



ಪ್ರೊ.ವಿ.ಕೆ. ನಟರಾಜ್

ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ.

ಇಲ್ಲಿನ ಜಯಲಕ್ಷ್ಮೀಪುರಂ 4ನೇ ಮುಖ್ಯರಸ್ತೆಯ ಶ್ರೀಲಕ್ಷ್ಮಿ ಅಪಾರ್ಟ್‌ಮೆಂಟ್ ನಿವಾಸಿಯಾಗಿದ್ದರು. ಅವರ ದೇಹವನ್ನು ಮಂಗಳವಾರ (ಡಿ.10) ಬೆಳಿಗ್ಗೆ 11ಕ್ಕೆ ನಗರದ ಜೆಎಸ್‌ಎಸ್ ಆಸ್ಪತ್ರೆಗೆ ದಾನ ನೀಡಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅರ್ಥಶಾಸ್ತ್ರದ ವಿಷಯಗಳು, ಬೆಳವಣಿಗೆಗಳ ಕುರಿತು ಇಂಗ್ಲಿಷ್ ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದ ಅವರು, ವಿಶ್ವ ಬ್ಯಾಂಕ್ ಸಲಹೆಗಾರರೂ ಆಗಿದ್ದರು. ಖ್ಯಾತ ಸರೋದ್ ವಾದಕರಾಗಿದ್ದ ಪಂ.ರಾಜೀವ ತಾರಾನಾಥರ ಆಪ್ತರಾಗಿದ್ದರು. ‘ಪ್ರಜಾವಾಣಿ’ಯಲ್ಲೂ ಬರೆಯುತ್ತಿದ್ದರು.

ಹಲವೆಡೆ ಸೇವೆ ಸಲ್ಲಿಸಿ ಪ್ರಖ್ಯಾತಿ ಗಳಿಸಿದ್ದ ವಿದ್ವಾಂಸ

ಪ್ರೊ. ವಿ.ಕೆ. ನಟರಾಜ್ ಅವರು ಮೈಸೂರು ವಿಶ್ವವಿದ್ಯಾಲಯ ಮತ್ತು ಆಕ್ಸ್‌ಫರ್ಡ್‌ನ ಪೆಂಬ್ರೋಕ್ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಪಡೆದು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ್ದರು. ಯುಕೆಯ ಯೂನಿವರ್ಸಿಟಿ ಆಫ್ ಯಾರ್ಕ್ ಮತ್ತು ಮುಂಬೈನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಟ್ರೈನಿಂಗ್ ಇನ್ ಇಂಡಸ್ಟ್ರಿಯಲ್ ಎಂಜಿನಿಯರಿಂಗ್‌ನಲ್ಲಿ ಕಾರ್ಯನಿರ್ವಹಿಸಿದ್ದರು.

1970ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸೇರಿ, ಆರಂಭದಲ್ಲಿ ದೂರಶಿಕ್ಷಣ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದರು. 1972ರಲ್ಲಿ ಅಭಿವೃದ್ಧಿ ಅಧ್ಯಯನ ಸಂಸ್ಥೆಗೆ ಬಂದರು. ಅಲ್ಲಿ ಪ್ರಾಧ್ಯಾಪಕರಾದರು; ನಿರ್ದೇಶಕರೂ ಆದರು. ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರು, ಕುಲಸಚಿವರೂ ಆಗಿದ್ದರು. ಎರಡು ಅವಧಿಗೆ ಮೈಸೂರು ವಿವಿ ಬೋಧಕರ ಸಂಘದ ಅಧ್ಯಕ್ಷರಾಗಿದ್ದರು. ಇಲ್ಲಿ ನಿವೃತ್ತರಾದ ನಂತರ, 2000ದಲ್ಲಿ ಚೆನ್ನೈನ ಎಂಐಡಿಎಸ್ (ಮದ್ರಾಸ್ ಇನ್‌ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್) ನಿರ್ದೇಶಕರಾಗಿ ಐದು ವರ್ಷಗಳ ಅವಧಿಯನ್ನು ಪೂರ್ಣಗೊಳಿಸಿದ್ದರು.

ಎಂಐಡಿಎಸ್ ನಿರ್ದೇಶಕರಾಗಿ, ತಮಿಳುನಾಡು– ಕರ್ನಾಟಕದ ರೈತ ಮುಖಂಡರ ‘ಕಾವೇರಿ ಕುಟುಂಬ’ದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ್ದರು. ‘ಕಾವೇರಿ ನದಿ ನೀರು ಹಂಚಿಕೆ ವಿವಾದವನ್ನು ಕಾನೂನಿನ ಚೌಕಟ್ಟಿನಿಂದಷ್ಟೆ ನೋಡಲಾಗದು. ಕಾವೇರಿ ಕುಟುಂಬದ ಎರಡೂ ರಾಜ್ಯಗಳ ರೈತರು ಒಗ್ಗೂಡಿ ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಪಡಿಸಿಕೊಳ್ಳಬೇಕು’ ಎಂದು ಪ್ರತಿಪಾದಿಸುತ್ತಿದ್ದರು. 2002ರಿಂದ 2004ರವರೆಗೆ ಚೆನ್ನೈ, ಬೆಂಗಳೂರು, ತಂಜಾವೂರು ಮತ್ತು ಮಂಡ್ಯದಲ್ಲಿ ಕಾವೇರಿ ಕುಟುಂಬದ ಸಭೆಗಳನ್ನು ಆಯೋಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಇಂಡೊ- ಕೆನಡಿಯನ್ ಸ್ಟಡಿ ಸೆಂಟರ್‌ನ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಪಂಚಾಯತ್‌ರಾಜ್ ತಜ್ಞರ ಸಮಿತಿಯ ಸದಸ್ಯ, ತಮಿಳುನಾಡು ರಾಜ್ಯ ಯೋಜನಾ ಆಯೋಗ, ವಿಕೇಂದ್ರೀಕರಣದ ಕಾರ್ಯನಿರತ ಗುಂಪಿನ ಅಧ್ಯಕ್ಷ, ಸೇಲಂನ ಪೆರಿಯಾರ್ ವಿಶ್ವವಿದ್ಯಾಲಯದ ಯೋಜನಾ ಮಂಡಳಿಯ ಸದಸ್ಯರಾಗಿದ್ದರು. ಮೈಸೂರಿನ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ ಪ್ರಮುಖ ಸಂಶೋಧನೆಗಳ ಅಧ್ಯಯನಕ್ಕೆ ಮಾರ್ಗದರ್ಶನ ನೀಡಿದ್ದರು. ವಿದೇಶಗಳಲ್ಲೂ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಸಿದ್ದೀಕಿ ಹತ್ಯೆ: ಆರೋಪಿಗಳ ಕಸ್ಟಡಿ ವಿಸ್ತರಣೆ

ಮುಂಬೈ (ಪಿಟಿಐ): ಎನ್‌ಸಿಪಿ ನಾಯಕ ಬಾಬಾ ಸಿದ್ದೀಕಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ವಿಶೇಷ ನ್ಯಾಯಾಲಯವು 13 ಮಂದಿ ಆರೋಪಿಗಳನ್ನು ಡಿ.16ರ ವರೆಗೆ ಪೊಲೀಸರ ವಶಕ್ಕೆ ಒಪ್ಪಿಸಿ ಆದೇಶಿಸಿದೆ.


ಬಾಬಾ ಸಿದ್ದೀಕಿ

ಪ್ರಕರಣದ ತನಿಖೆ ಆರಂಭಿಸಿದ್ದ ಮುಂಬೈ ಕ್ರೈಂ ಬ್ರಾಂಚ್ ತಂಡವು, ಹತ್ಯೆಗೈದ ಶೂಟರ್ ಶಿವಕುಮಾರ್ ಗೌತಮ್ ಸೇರಿದಂತೆ 26 ಆರೋಪಿಗಳನ್ನು ಬಂಧಿಸಿತ್ತು.

ಇವರಲ್ಲಿ 13 ಮಂದಿಯನ್ನು ನ್ಯಾಯಾಲಯದ ಮುಂದೆ ಸೋಮವಾರ ಹಾಜರುಪಡಿಸಲಾಗಿತ್ತು. ಅಪರಾಧ ಕೃತ್ಯಕ್ಕೆ ಸಂಬಂಧಿಸಿದ ಹಣಕಾಸು ಆಯಾಮದ ಕುರಿತು ಹೆಚ್ಚಿನ ವಿಚಾರಣೆ ನಡೆಸಲು ಕಸ್ಟಡಿ ಅವಧಿಯನ್ನು ವಿಸ್ತರಿಸುವಂತೆ ಪೊಲೀಸರು ಮಾಡಿದ ಮನವಿಯನ್ನು ನ್ಯಾಯಾಲಯವು ಪುರಸ್ಕರಿಸಿದೆ.

ನೂಲಿನ ಬಟ್ಟೆಗಳ ರಫ್ತಿನ ಮೂಲಕ ಅಂದಾಜು ₹40 ಸಾವಿರ ಕೋಟಿ ಗಳಿಸುವ ಅವಕಾಶ

ಬಾಂಗ್ಲಾ ಅಶಾಂತಿ ತಿರುಪುರಕ್ಕೆ ವರ?

● ಇ.ಟಿ.ಬಿ. ಶಿವಪ್ರಿಯನ್

ತಿರುಪುರ: ಬಾಂಗ್ಲಾದೇಶದಲ್ಲಿನ ರಾಜಕೀಯ ಅಶಾಂತಿಯು ದೇಶದ ನೂಲಿನ ಬಟ್ಟೆಗಳ ಕೇಂದ್ರ ಎಂಬ ಖ್ಯಾತಿಯನ್ನು ಹೊತ್ತಿರುವ ತಮಿಳುನಾಡು ರಾಜ್ಯದ ತಿರುಪುರಕ್ಕೆ ವರವಾಗಿ ಪರಿಣಮಿಸುವ ಸಾಧ್ಯತೆ ಇದೆ. ದೇಶದಲ್ಲಿ ಈ ವಲಯದಲ್ಲಿ ಆಗುವ ರಫ್ತಿನಲ್ಲಿ ಶೇಕಡ 55ರಷ್ಟು ಪಾಲನ್ನು ತಿರುಪುರ ಹೊಂದಿದೆ.

ವಿಶ್ವದಲ್ಲಿ ಉಡುಪುಗಳನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವ ಅಮೆರಿಕ ಮತ್ತು ಯುರೋಪಿನ ಪ್ರಮುಖ ಬಟ್ಟೆ ಬ್ರ್ಯಾಂಡ್‌ಗಳು, ತಿರುಪುರದ ರಫ್ತುದಾರರ ಜೊತೆ ಮಾತುಕತೆ ನಡೆಸಿವೆ. ಬಟ್ಟೆಗಳ ಪೂರೈಕೆಯಲ್ಲಿ ವ್ಯತ್ಯಯ ಆಗದಂತೆ ನೋಡಿಕೊಳ್ಳುವ ಉದ್ದೇಶದಿಂದ ಈ ಬ್ರ್ಯಾಂಡ್‌ಗಳು ಬಾಂಗ್ಲಾದೇಶದ ಆಚೆಗೂ ಕಣ್ಣು ಹಾಯಿಸುತ್ತಿವೆ. ಆದರೆ, ಬೇಡಿಕೆಯಲ್ಲಿ ಆಗಬಹುದಾದ ಹೆಚ್ಚಳವನ್ನು ನಿಭಾಯಿಸುವ ಶಕ್ತಿಯು ತಿರುಪುರದ ಮೂಲಸೌಕರ್ಯಕ್ಕೆ ಇದೆಯೇ ಎಂಬ ಪ್ರಶ್ನೆ ಇದೆ.

2024–25ರ ಹಣಕಾಸು ವರ್ಷದಲ್ಲಿ ತಿರುಪುರವು ನೂಲಿನ ಬಟ್ಟೆಗಳ ರಫ್ತಿನ ಮೂಲಕ ಅಂದಾಜು ₹40 ಸಾವಿರ ಕೋಟಿ ಗಳಿಸುವ ಅವಕಾಶ ಇದೆ. 2023–24ರಲ್ಲಿ ರಫ್ತು ಮೌಲ್ಯವು ₹30,690 ಕೋಟಿ ಆಗಿದೆ.


ಪ್ರಮುಖ ಬ್ರ್ಯಾಂಡ್‌ಗಳಾದ ವಾಲ್‌ಮಾರ್ಟ್, ಜಿಎಪಿ, ಕೊಸ್ಟ್‌ಕೊ, ಮಾರ್ಕ್ಸ್ ಆ್ಯಂಡ್ ಸ್ಪೆನ್ಸರ್, ಪ್ರೈಮಾರ್ಕ್, ಆ್ಯಂಡ್ ಎ, ಲೆಕ್ಕಪರಿಶೋಧನಾ ಸಂಸ್ಥೆಗಳನ್ನು ನೇಮಕ ಮಾಡಿ ತಿರುಪುರದ ಘಟಕಗಳ ರಫ್ತು ಸಾಮರ್ಥ್ಯವನ್ನು ಪರಿಶೀಲನೆಗೆ ಒಳಪಡಿಸಿವೆ.

ಮಕ್ಕಳ ಬಟ್ಟೆಗಳ ವಿಭಾಗದಲ್ಲಿ ಜನಪ್ರಿಯ ಬ್ರ್ಯಾಂಡ್‌ಗಳಾಗಿರುವ ಬಿಬಿ ಬೇಬಿ, ಆನೆಸ್ಟ್ ಬೇಬಿ ಕ್ಲೋತಿಂಗ್, ಮೋನಿಕಾ + ಆ್ಯಂಡಿ ತಿರುಪುರದಲ್ಲಿ ಯಾರಿಂದ ಬಟ್ಟೆಯನ್ನು ಖರೀದಿಸಬೇಕು ಎಂಬ ಪರಿಶೀಲನೆಯಲ್ಲಿವೆ.

ಒಟ್ಟಾರೆ ಸಿದ್ಧ ಉಡುಪುಗಳ ರಫ್ತು ಮೌಲ್ಯವು ಕಳೆದ ವರ್ಷದ ಅಕ್ಟೋಬರ್‌ನ ಮೌಲ್ಯಕ್ಕೆ ಹೋಲಿಸಿದರೆ ಈ ವರ್ಷದ ಅಕ್ಟೋಬರ್‌ನಲ್ಲಿ ಶೇ 35ರಷ್ಟು ಹೆಚ್ಚಾಗಿದೆ. ಕೋವಿಡ್–19 ಸಾಂಕ್ರಾಮಿಕವು ತೀವ್ರವಾಗಿದ್ದ ಸಂದರ್ಭದಲ್ಲಿ ಹಿನ್ನಡೆ ಅನುಭವಿಸಿದ ಉದ್ಯಮಕ್ಕೆ ಇದು ಬಹಳ ಅಗತ್ಯವಾಗಿದ್ದ ವಿಶ್ವಾಸ ತುಂಬುವ ಕೆಲಸ ಮಾಡಿದೆ.

‘ಕೆಲವು ಘಟಕಗಳು ಹೆಚ್ಚುವರಿ ಬೇಡಿಕೆಗೆ ಅನುಗುಣವಾಗಿ ಬಟ್ಟೆ ಪೂರೈಸುತ್ತಿವೆ. ಈ ವಲಯದಲ್ಲಿ ನಾವು ಇನ್ನಷ್ಟು ಹೆಚ್ಚಿನ ಬೇಡಿಕೆಯನ್ನು ಕಾಣುವುದು ಖಚಿತ’ ಎಂದು ತಿರುಪುರ ರಫ್ತುದಾರರ ಸಂಘದ (ಟಿಇಎ) ಅಧ್ಯಕ್ಷ ಕೆ.ಎಂ. ಸುಬ್ರಮಣಿಯನ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಶೇ 10ರಷ್ಟು ಹೆಚ್ಚುವರಿ ಅವಕಾಶ ಸಿಕ್ಕರೂ ಪೂರೈಕೆ ಕಷ್ಟ’


ತಿರುಪುರದ ಜವಳಿ ಘಟಕವೊಂದರಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕ —ಎಎಫ್‌ಪಿ ಸಂಗ್ರಹ ಚಿತ್ರ

ಬಾಂಗ್ಲಾದೇಶದಿಂದ ರಫ್ತಾಗುತ್ತಿದ್ದ ಬಟ್ಟೆಗಳಲ್ಲಿ ಶೇ 5ರಿಂದ ಶೇ 10ರಷ್ಟು ಬಟ್ಟೆಗಳ ರಫ್ತಿನ ಕಾರ್ಯಾದೇಶವು ತಿರುಪುರಕ್ಕೆ ದೊರೆತರೂ, ಅದನ್ನು ಪೂರೈಸಲು ಇಲ್ಲಿನ ಮೂಲಸೌಕರ್ಯಕ್ಕೆ ಸಾಧ್ಯವಾಗದಿರಬಹುದು ಎಂದು ರಫ್ತಿನಲ್ಲಿ ತೊಡಗಿರುವ ಕೆಲವರು ಹೇಳುತ್ತಾರೆ. ‘ಬೃಹತ್ ಕಾರ್ಖಾನೆಗಳು ತಮ್ಮ ಪೂರ್ಣ ಸಾಮರ್ಥ್ಯದ ಶೇ 95ರವರೆಗೆ ಕಾರ್ಯಾಚರಣೆ ನಡೆಸುತ್ತಿವೆ. ಆದರೆ ಎಂಎಸ್‌ಎಂಇ ವಲಯದ ಉದ್ದಿಮೆಗಳು ತಮ್ಮ ಪೂರ್ಣ ಸಾಮರ್ಥ್ಯದ ಶೇ 50ರಷ್ಟನ್ನು ಮಾತ್ರ ಬಳಕೆ ಮಾಡಿಕೊಳ್ಳುತ್ತಿವೆ’ ಎಂದು ಜವಳಿ ರಫ್ತು ಕಂಪನಿ ಸ್ವೆಲ್‌ನಿಟ್‌ನ ಪಾಲುದಾರ ಕೆ.ಜಿ. ಗಣೇಶನ್ ಹೇಳಿದರು. ಕಾರ್ಮಿಕರ ಕೊರತೆಯು ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ದೊಡ್ಡ ಸಮಸ್ಯೆಯಾಗಿದೆ ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

ಇಸಿಐ ಮೊರೆಹೋಗಲು ಸೂಚನೆ

ನವದೆಹಲಿ (ಪಿಟಿಐ): ಕೆಲಸದ ಸ್ಥಳಗಳಲ್ಲಿ ಮಹಿಳೆಯರ ರಕ್ಷಣೆಗಾಗಿ ಪಿಒಎಸ್‌ಎಚ್ ಕಾಯ್ದೆಯಡಿ ಕಾರ್ಯ ವಿಧಾನವನ್ನು ಅನುಸರಿಸಲು ರಾಜಕೀಯ ಪಕ್ಷಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಲಾದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ಇತ್ಯರ್ಥಪಡಿಸಿತು.

ನ್ಯಾಯಮೂರ್ತಿಗಳಾದ ಸೂರ್ಯಕಾಂತ ಮತ್ತು ಮನಮೋಹನ್ ಅವರನ್ನೊಳಗೊಂಡ ಪೀಠವು, ಉದ್ಯೋಗ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆ, ನಿರ್ಬಂಧ ಮತ್ತು ಪರಿಹಾರ) ಕಾಯ್ದೆಗೆ (2013ರ ಪಿಒಎಸ್‌ಎಚ್ ಕಾಯ್ದೆ) ಸಂಬಂಧಿಸಿದಂತೆ ಚುನಾವಣಾ ಆಯೋಗದ ಮೊರೆಹೋಗುವಂತೆ



ಅರ್ಜಿದಾರರನ್ನು ಕೇಳಿಕೊಂಡಿತು.

ಈ ಬಗ್ಗೆ ಪಿಐಎಲ್ ಸಲ್ಲಿಸಿದ್ದ ಎಂ.ಜಿ.ಯೋಗಮಾಯಾ ಪರ ಹಾಜರಿದ್ದ ಹಿರಿಯ ವಕೀಲರಾದ ಶೋಭಾ ಗುಪ್ತಾ ಅವರು, ದೇಶದಲ್ಲಿರುವ ಆರು ರಾಷ್ಟ್ರೀಯ ಪಕ್ಷಗಳು ಕೆಲಸದ ಸ್ಥಳದಲ್ಲಿ ಮಹಿಳೆಯರ ರಕ್ಷಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ನಿರ್ದೇಶನಗಳು ಮತ್ತು 2013ರ ಕಾನೂನಿಗೆ ಅನುಗುಣವಾಗಿ ಕಾರ್ಯವಿಧಾನ ಹೊಂದಿಲ್ಲ ಎಂದು ಹೇಳಿದರು.

ರಾಜಕೀಯ ಪಕ್ಷಗಳು ಪಿಒಎಸ್‌ಎಚ್ ಕಾಯ್ದೆಗೆ ಒಳಪಡುವುದಿಲ್ಲ ಎಂದು ಕೇರಳ ಹೈಕೋರ್ಟ್ ಈ ಹಿಂದೆ ಹೇಳಿದ್ದು, ಅದರ ತೀರ್ಪನ್ನು ಪ್ರಶ್ನಿಸಲಾಗಿಲ್ಲ ಎಂಬುದನ್ನು ಪೀಠ ಗಮನಿಸಿತು. ಚುನಾವಣಾ ಆಯೋಗದ ಮೊರೆಹೋಗುವಂತೆ ಸೂಚಿಸಿ, ಅರ್ಜಿಯನ್ನು ಇತ್ಯರ್ಥಪಡಿಸಿತು. ಸಮಸ್ಯೆಗೆ ಆಯೋಗದ ಬಳಿ ಪರಿಹಾರ ಸಿಗದಿದ್ದರೆ, ನ್ಯಾಯಾಲಯದ ಮೊರೆ ಹೋಗುವ ಸ್ವಾತಂತ್ರ್ಯವನ್ನು ಅರ್ಜಿದಾರರಿಗೆ ನೀಡಿತು.

ಅಟಾಲಾ ಮಸೀದಿ ಜಾಗ ವಿವಾದ: ಪ್ರತಿಕ್ರಿಯೆಗೆ ಹೈಕೋರ್ಟ್ ಸೂಚನೆ

ಲಖನೌ: ಹಿಂದೂ ದೇವಾಲಯಗಳನ್ನು ಕೆಡವಿ ಮಸೀದಿ ನಿರ್ಮಿಸಲಾಗಿದೆ ಎಂದು ಆರೋಪಿಸಿ ಹಿಂದೂ ಸಂಘಟನೆಗಳು ಮಸೀದಿ ಜಾಗದ ಮಾಲೀಕತ್ವದ ಕುರಿತು ಉತ್ತರ ಪ್ರದೇಶದಲ್ಲಿ ನ್ಯಾಯಾಲಯದ ಮೆಟ್ಟಿಲೇರಿರುವ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿವೆ.

ಸಂಭಲ್, ಬದೌನ್ ಮಸೀದಿ ಜಾಗದ ಮಾಲೀಕತ್ವ ವಿಚಾರ ಮುಂದುವರಿದಿರುವಂತೆಯೇ, ಜೌನ್‌ಪುರ ಪಟ್ಟಣದ ಅಟಾಲಾ ಮಸೀದಿ ಜಾಗದ ವಿಚಾರವೂ ಈಗ ಹೈಕೋರ್ಟ್ ಮೆಟ್ಟಿಲೇರಿದೆ.

‘ಅಟಾಲಾ ಮಸೀದಿ ಮೂಲತಃ ಅಟಾಲಾ ದೇವಿ ಮಂದಿರವಾಗಿತ್ತು. 13ನೇ ಶತಮಾನದಲ್ಲಿ ಹಿಂದೂ ರಾಜ ವಿಜಯಚಂದ್ರ ನಿರ್ಮಿಸಿದ್ದರು. ನಂತರ ಫಿರೋಜ್ ಶಾ ತುಘಲಕ್ (1351-1388) ಅವಧಿಯಲ್ಲಿ ದೇವಾಲಯವನ್ನು ಕೆಡವಿ ಮಸೀದಿ ನಿರ್ಮಿಸಲಾಗಿತ್ತು. ವಿವಾದಿತ ಆಸ್ತಿಯು ದೇವಿಯ ಭಕ್ತರಿಗೆ ಸೇರಿದ್ದು, ಅಲ್ಲಿಗೆ ಪೂಜೆ ಸಲ್ಲಿಸಲು ಅವಕಾಶ ನೀಡಬೇಕು’ ಎಂದು ಹಿಂದೂ ಸಂಘಟನೆ ‘ಸ್ವರಾಜ್ ವಾಹಿನಿ’ಯು ಜೌನ್‌ಪುರ ಜಿಲ್ಲಾ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿತ್ತು.

ಈ ಅರ್ಜಿ ಪರಿಗಣಿಸಿದ್ದ ನ್ಯಾಯಾಲಯವು ಮೇ 29ರಂದು ವಿಚಾರಣೆ ನಡೆಸಲು ಒಪ್ಪಿತ್ತು. ಈ ಕುರಿತು ಮುಸಲ್ಮಾನರ ಪರವಾಗಿ ಸಲ್ಲಿಸಿದ್ದ ಪರಿಶೀಲನಾ ಅರ್ಜಿಯನ್ನು ಕಳೆದ ಆಗಸ್ಟ್ ತಿಂಗಳಲ್ಲಿ ನ್ಯಾಯಾಲಯವು ತಿರಸ್ಕರಿಸಿತ್ತು.

ಎರಡನೇ ಪಟ್ಟಿ ಬಿಡುಗಡೆ ● 21 ಹೊಸಮುಖಗಳಿಗೆ ಮಣೆ

ಎಎಪಿ: 16 ಶಾಸಕರಿಗೆ ಟಿಕೆಟ್ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ವಿಧಾನಸಭಾ ಚುನಾವಣೆಗೆ ಎಎಪಿ ತನ್ನ 20 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಸೋಮವಾರ ಪ್ರಕಟಿಸಿದ್ದು, 16 ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಿಸಿದೆ.

ನವೆಂಬರ್ 21ರಂದು 11 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಪಕ್ಷ ಪ್ರಕಟಿಸಿತ್ತು. ಮೂವರು ಹಾಲಿ ಶಾಸಕರಿಗೆ ಕೊಕ್ ನೀಡಲಾಗಿತ್ತು. ಆರು ಮಂದಿ ಪಕ್ಷಾಂತರಿಗಳಿಗೆ ಮಣೆ ಹಾಕಿತ್ತು. ಇಬ್ಬರು ಎಎಪಿಯ ಶಾಸಕರು ಇತ್ತೀಚೆಗೆ ಬಿಜೆಪಿಗೆ ಪಕ್ಷಾಂತರಗೊಂಡಿದ್ದರು. ಹೀಗಾಗಿ, ಹಾಲಿ ಕ್ಷೇತ್ರಗಳಲ್ಲಿ ಪಕ್ಷವು 21 ಹೊಸ ಮುಖಗಳಿಗೆ ಮಣೆ ಹಾಕಿದಂತಾಗಿದೆ.

ಇದರೊಂದಿಗೆ, 2020ರಲ್ಲಿ ಬಿಜೆಪಿ ಗೆದ್ದಿದ್ದ ಎಲ್ಲ ಎಂಟು ಸ್ಥಾನಗಳಲ್ಲಿ ಎಎಪಿ ಅಭ್ಯರ್ಥಿಗಳನ್ನು ಘೋಷಿಸಿದೆ. ಎರಡನೇ ಪಟ್ಟಿಯ 20 ಅಭ್ಯರ್ಥಿಗಳ ಪೈಕಿ ಏಳು ಅಭ್ಯರ್ಥಿಗಳು ಪಾಲಿಕೆ ಸದಸ್ಯರಾಗಿದ್ದಾರೆ.

ದೆಹಲಿ ವಿಧಾನಸಭೆಗೆ ಫೆಬ್ರುವರಿಯಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ. 2020ರ ಚುನಾವಣೆಯಲ್ಲಿ ಎಎಪಿ 62 ಸ್ಥಾನಗಳಲ್ಲಿ ಜಯಭೇರಿ ಬಾರಿಸಿತ್ತು. ಎಂಟು ಕ್ಷೇತ್ರಗಳಲ್ಲಿ ಕಮಲ ಪಾಳಯ ಗೆದ್ದಿತ್ತು. ಕಾಂಗ್ರೆಸ್ ಪಕ್ಷವು ಒಂದೇ ಒಂದು ಕ್ಷೇತ್ರದಲ್ಲಿ ಗೆಲುವು ಸಾಧಿಸಿರಲಿಲ್ಲ.

ಮಂಗೋಲ್‌ಪುರಿಯಿಂದ ಮೂರು ಬಾರಿ ಗೆದ್ದಿರುವ ಮಾಜಿ ಉಪ ಸ್ಪೀಕರ್ ರಾಖಿ ಬಿಡ್ಲಾ ಈಗ ಮಾದಿಪುರದಿಂದ ಕಣಕ್ಕಿಳಿಯಲಿದ್ದಾರೆ. 2013ರಲ್ಲಿ 10,600 ಮತಗಳಿಂದ ಜಯಿಸಿದ್ದ ಅವರು 2020ರಲ್ಲಿ ಗೆಲುವಿನ ಅಂತರವನ್ನು 30,126 ಮತಗಳಿಗೆ ಹೆಚ್ಚಿಸಿಕೊಂಡಿದ್ದರು. ರಾಕೇಶ್ ಜಾತವ್ ಧರ್ಮರಕ್ಷಕ ಅವರು ಮಂಗೋಲ್‌ಪುರಿ ಕ್ಷೇತ್ರಕ್ಕೆ ಪಕ್ಷದ ಅಭ್ಯರ್ಥಿಯಾಗಿದ್ದಾರೆ.

ಚುನಾವಣಾ ರಾಜಕಾರಣದಿಂದ ದೂರ ಸರಿದಿರುವ ಹಾಲಿ ಶಾಸಕರಾದ ದಿಲೀಪ್ ಪಾಂಡೆ ಮತ್ತು ಸ್ಪೀಕರ್ ರಾಮ್ ನಿವಾಸ್ ಗೋಯಲ್ ಅವರ ತಿಮಾರ್‌ಪುರ ಮತ್ತು ಶಹದಾರಾ ಕ್ಷೇತ್ರಗಳಿಗೂ ಪಕ್ಷವು ಅಭ್ಯರ್ಥಿಗಳನ್ನು ಘೋಷಿಸಿದೆ. ಬಿಜೆಪಿಯಿಂದ ಬಂದಿರುವ ಸುರೇಂದರ್ ಪಾಲ್ ಸಿಂಗ್ ಬಿಟ್ಟು ಮತ್ತು ಜಿತೇಂದರ್ ಸಿಂಗ್ ಅವರಿಗೆ ಟಿಕೆಟ್ ನೀಡಿದೆ.

ಸಿಸೋಡಿಯಾ ಕ್ಷೇತ್ರ ಬದಲು

ಮಾಜಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು ಹ್ಯಾಟ್ರಿಕ್ ಗೆಲುವು ಸಾಧಿಸಿದ್ದ ಪತ್ಪರ್‌ಗಂಜ್ ಕ್ಷೇತ್ರದಿಂದ ಜಂಗ್‌ಪುರಕ್ಕೆ ಸ್ಥಳಾಂತರಗೊಂಡಿದ್ದಾರೆ. ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಟಿಕೆಟ್ ಪಡೆಯಲು ಪ್ರಯತ್ನಿಸಿದ್ದ ಹಾಗೂ ಈಚೆಗೆ ಎಎಪಿ ಸೇರಿದ ಶಿಕ್ಷಣತಜ್ಞ ಅವಧ್ ಓಝಾ ಅವರು ಈ ಕ್ಷೇತ್ರದಲ್ಲಿ ತಮ್ಮ ಅದೃಷ್ಟ ಪರೀಕ್ಷಿಸಲಿದ್ದಾರೆ. ಸಿಸೋಡಿಯಾ ಅವರ ಗೆಲುವಿನ ಅಂತರವು 28,761ದಿಂದ (2015) 3,207ಕ್ಕೆ (2020) ಕುಸಿದಿತ್ತು.

‘ಧರ್ಮದ ಆಧಾರದಲ್ಲಿ ಮೀಸಲಾತಿ ಅಸಾಧ್ಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಸ್ಪಷ್ಟಪಡಿಸಿದೆ.

77 ಸಮುದಾಯಗಳನ್ನು ಒಬಿಸಿ (ಇತರೆ ಹಿಂದುಳಿದ ವರ್ಗ) ಎಂದು ವರ್ಗೀಕರಿಸಿದ್ದನ್ನು ಕಲ್ಕತ್ತ ಹೈಕೋರ್ಟ್ ರದ್ದುಪಡಿಸಿದ್ದನ್ನು ಪ್ರಶ್ನಿಸಿ ಪಶ್ಚಿಮ ಬಂಗಾಳ ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ವಿಭಾಗೀಯ ಪೀಠವು ಈ ಮಾತನ್ನು ಮೌಖಿಕವಾಗಿ ಹೇಳಿದೆ. ಈ 77 ಸಮುದಾಯಗಳಲ್ಲಿ ಹೆಚ್ಚಿನವು ಇಸ್ಲಾಂ ಧರ್ಮಕ್ಕೆ ಸೇರಿದವು.

ಪಶ್ಚಿಮ ಬಂಗಾಳ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್, ‘ಮೀಸಲಾತಿಯನ್ನು ಧರ್ಮದ ಆಧಾರದಲ್ಲಿ ನೀಡಿರಲಿಲ್ಲ. ಸಮುದಾಯಗಳ ಹಿಂದುಳಿದಿರುವಿಕೆಯನ್ನು ಕಂಡು ಮೀಸಲಾತಿ ನೀಡಲಾಗಿದೆ. ಹಿಂದುಳಿದಿರುವಿಕೆಯು ಸಮಾಜದ ಎಲ್ಲ ವರ್ಗಗಳಲ್ಲಿಯೂ ಇದೆ’ ಎಂದರು.

ರಂಗನಾಥ ಆಯೋಗವು ಇಂತಹ ಮೀಸಲಾತಿಯನ್ನು ಶಿಫಾರಸು ಮಾಡಿತ್ತು, ಈ ಸಮುದಾಯಗಳಲ್ಲಿ ಹಲವನ್ನು ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ಕೋರ್ಟ್‌ಗೆ ಮಾಹಿತಿ ನೀಡಲಾಯಿತು. ಪ್ರತಿವಾದಿಗಳ ಪರ ವಕೀಲ ಪಿ.ಎಸ್. ಪಟ್ವಾಲಿಯಾ ಅವರು, ಸಿಬಲ್ ವಾದವನ್ನು ವಿರೋಧಿಸಿದರು. ಯಾವುದೇ ದತ್ತಾಂಶ ಇಲ್ಲದೆ, ಹಿಂದುಳಿದ ವರ್ಗಗಳ ಆಯೋಗವನ್ನು ಕಡೆಗಣಿಸಿ ಮೀಸಲಾತಿ ಕಲ್ಪಿಸಲಾಗಿದೆ ಎಂದು ಪಟ್ವಾಲಿಯಾ ಹೇಳಿದರು.

ವಿಶ್ವಾಸಮತ ಗೆದ್ದ ಸಿ.ಎಂ ಫಡಣವೀಸ್

ಮುಂಬೈ (ಪಿಟಿಐ): ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ನೇತೃತ್ವದ ಸಚಿವ ಸಂಪುಟವು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಸೋಮವಾರ ವಿಶ್ವಾಸಮತ ಸಾಬೀತು ಮಾಡಿತು.

ಶಿವಸೇನಾ ಶಾಸಕ ಉದಯ್ ಸಾಮಂತ್ ಮತ್ತು ಇತರರು ಮಂಡಿಸಿದ ವಿಶ್ವಾಸಮತ ನಿರ್ಣಯವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಸ್ಪೀಕರ್ ರಾಹುಲ್ ನಾರ್ವೇಕರ್ ಅವರು ಸದನವು ವಿಶ್ವಾಸಮತವನ್ನು ಅಂಗೀಕರಿಸಿದೆ ಎಂದು ಘೋಷಿಸಿದರು.

288 ಸದಸ್ಯ ಬಲದ ವಿಧಾನಸಭೆಯಲ್ಲಿ ಬಿಜೆಪಿ, ಶಿವಸೇನಾ (ಶಿಂದೆ) ಮತ್ತು ಎನ್‌ಸಿಪಿ (ಅಜಿತ್ ಪವಾರ್) ಪಕ್ಷಗಳನ್ನೊಳಗೊಂಡ ‘ಮಹಾಯುತಿ’ ಮೈತ್ರಿಕೂಟವು 230 ಸ್ಥಾನಗಳೊಂದಿಗೆ ಭಾರಿ ಬಹುಮತ ಹೊಂದಿದೆ. ಮಹಾರಾಷ್ಟ್ರ ವಿಧಾನಸಭೆಯಲ್ಲಿ ಬಹುಮತಕ್ಕೆ 144 ಶಾಸಕರ ಬೆಂಬಲ ಅಗತ್ಯವಿದೆ.


ವಿಧಾನಭವನದಲ್ಲಿ ಸೋಮವಾರ ನಡೆದ ವಿಶೇಷ ಅಧಿವೇಶನಕ್ಕೆ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಮತ್ತು ಇತರರು ಹಾಜರಾದರು —ಪಿಟಿಐ ಚಿತ್ರ

ದೇವೇಂದ್ರ ಫಡಣವೀಸ್ ಅವರು ಮೂರನೇ ಬಾರಿಗೆ ಮುಖ್ಯಮಂತ್ರಿಯಾಗಿ ಡಿಸೆಂಬರ್ 5ರಂದು ಪ್ರಮಾಣವಚನ ಸ್ವೀಕರಿಸಿದ್ದಾರೆ. ಏಕನಾಥ ಶಿಂದೆ ಮತ್ತು ಅಜಿತ್ ಪವಾರ್ ಅವರು ಉಪಮುಖ್ಯಮಂತ್ರಿಗಳಾಗಿ ಪ್ರಮಾಣ ಸ್ವೀಕರಿಸಿದ್ದಾರೆ.

ರಾಹುಲ್ ನಾರ್ವೇಕರ್ ‘ಮಹಾ’ ಸ್ಪೀಕರ್



ಮುಂಬೈ (ಪಿಟಿಐ): ಬಿಜೆಪಿ ಶಾಸಕ ರಾಹುಲ್ ನಾರ್ವೇಕರ್ ಅವರನ್ನು ಮಹಾರಾಷ್ಟ್ರದ 15ನೇ ವಿಧಾನಸಭೆಯ ಸ್ಪೀಕರ್ ಆಗಿ ಸೋಮವಾರ ಅವಿರೋಧವಾಗಿ ಚುನಾಯಿಸಲಾಯಿತು.ನಾರ್ವೇಕರ್ ಭಾನುವಾರ ನಾಮಪತ್ರ ಸಲ್ಲಿಸಿದ್ದರು. ವಿರೋಧ ಪಕ್ಷಗಳ ಮೈತ್ರಿಕೂಟ ಮಹಾ ವಿಕಾಸ್ ಆಘಾಡಿ(ಎಂವಿಎ) ತನ್ನ ಸದಸ್ಯರನ್ನು ಕಣಕ್ಕಿಳಿಸದಿರಲು ನಿರ್ಧರಿಸಿದ್ದರಿಂದ ಅವರು ಅವಿರೋಧವಾಗಿ ಆಯ್ಕೆಯಾದರು.

ಜಾರ್ಖಂಡ್: ಸಚಿವರ ಪ್ರಮಾಣ ವಚನ

ರಾಂಚಿ (ಪಿಟಿಐ): ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತು ಸಂಪುಟದ ಇತರ ಸಚಿವರು ಜಾರ್ಖಂಡ್ ವಿಧಾನಸಭಾ ಸದಸ್ಯರಾಗಿ ಅಧಿವೇಶನದ ಮೊದಲ ದಿನ ಪ್ರಮಾಣ ವಚನ ಸ್ವೀಕರಿಸಿದರು.

ಸಂಸದೀಯ ವ್ಯವಹಾರಗಳ ಸಚಿವ ರಾಧಾಕೃಷ್ಣ ಕಿಶೋರ್, ಕಂದಾಯ ಮತ್ತು ಭೂ ಸುಧಾರಣಾ ಸಚಿವ ದೀಪಕ್ ಬಿರುವಾ ಮತ್ತು ಕಾರ್ಮಿಕ ಸಚಿವ ಸಂಜಯ್ ಪ್ರಸಾದ್ ಯಾದವ್ ಅವರು ವಿಧಾನಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಹಂಗಾಮಿ ಸ್ಪೀಕರ್ ಸ್ಟೀಫನ್ ಮರಾಂಡಿ ಅವರು ಪ್ರಮಾಣ ವಚನ ಬೋಧಿಸಿದರು. ನಾಲ್ಕು ದಿನಗಳ ಈ ಅಧಿವೇಶನದಲ್ಲಿ ಸ್ಪೀಕರ್ ಸ್ಥಾನಕ್ಕೆ ಚುನಾವಣೆ, ರಾಜ್ಯಪಾಲರ ಭಾಷಣ, ಎರಡನೇ ಪೂರಕ ಬಜೆಟ್ ಮಂಡನೆ ಮತ್ತು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ನಡೆಯಲಿದೆ.


ಜಾರ್ಖಂಡ್ ವಿಧಾನಸೌಧದಲ್ಲಿ ಪತ್ನಿ ಕಲ್ಪನಾ ಸೊರೇನ್, ಪುತ್ರನೊಂದಿಗೆ ಮುಖ್ಯಮಂತ್ರಿ ಹೇಮಂತ್ ಸೊರೇನ್ ಸೋಮವಾರ ಕಾಣಿಸಿಕೊಂಡಿದ್ದು ಹೀಗೆ

ಮಹತೋ ಹೆಸರು ಶಿಫಾರಸು: ಜಾರ್ಖಂಡ್ ವಿಧಾನಸಭೆಯ ಸ್ಪೀಕರ್ ಸ್ಥಾನಕ್ಕೆ ನಾಲಾ ವಿಧಾನಸಭಾ ಕ್ಷೇತ್ರದ ಶಾಸಕ ರವೀಂದ್ರ ನಾಥ ಮಹತೋ ಅವರ ಹೆಸರನ್ನು ಆಡಳಿತ ಮೈತ್ರಿಕೂಟ ಶಿಫಾರಸು ಮಾಡಿದೆ ಎಂದು ಮುಖ್ಯಮಂತ್ರಿ ಹೇಮಂತ್ ಸೊರೇನ್ ಹೇಳಿದ್ದಾರೆ. ಹಿಂದಿನ ವಿಧಾನಸಭೆಯಲ್ಲೂ ಮಹತೋ ಸ್ಪೀಕರ್ ಆಗಿದ್ದರು. ಅಧಿವೇಶನದ ಎರಡನೇ ದಿನವಾದ ಮಂಗಳವಾರ ಸ್ಪೀಕರ್ ಸ್ಥಾನಕ್ಕೆ ಚುನಾವಣೆ ನಡೆಯಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮಹತೋ ಅವರು ವಿಧಾನಸಭಾ ಸದಸ್ಯರಾಗಿ ಇತರೆ ಶಾಸಕರೊಂದಿಗೆ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

ಏಕಕಾಲಕ್ಕೆ ಚುನಾವಣೆ: ವಿಸ್ತೃತ ಚರ್ಚೆ ಸಾಧ್ಯತೆ

ನವದೆಹಲಿ (ಪಿಟಿಐ): ಸರ್ಕಾರವು ತನ್ನ 'ಒಂದು ದೇಶ, ಒಂದು ಚುನಾವಣೆ' ಯೋಜನೆಯ ಜಾರಿಗೆ ತರಲು ಪ್ರಸ್ತಾಪಿಸಿರುವ ಮಸೂದೆಗಳ ಕುರಿತು ವಿಸ್ತೃತ ಚರ್ಚೆ ನಡೆಸಲು ಉತ್ಸುಕವಾಗಿದೆ ಎಂದು ಮೂಲಗಳು ಸೋಮವಾರ ತಿಳಿಸಿವೆ.

ಪ್ರಸ್ತಾವಿತ ಮಸೂದೆಗಳನ್ನು ಕೇಂದ್ರ ಸಚಿವ ಸಂಪುಟ ಇನ್ನೂ ಅನುಮೋದಿಸಿಲ್ಲವಾದರೂ, ಈಗ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಅದನ್ನು ಮಂಡಿಸುವ ಸಾಧ್ಯತೆಯಿದೆ.

ಸಂಸತ್ತಿನಲ್ಲಿ ಮಸೂದೆಗಳನ್ನು ಮಂಡಿಸಿದ ನಂತರ, ಸರ್ಕಾರವು ವಿಸ್ತೃತ ಚರ್ಚೆಗಾಗಿ ಎರಡು ಸದನಗಳ ಜಂಟಿ ಸಮಿತಿಯ ಮುಂದಿಡಲು ಬಯಸುತ್ತದೆ ಎಂದು ಮೂಲಗಳು ಹೇಳಿವೆ. ಸಮಿತಿಯ ಮೂಲಕ ವಿವಿಧ ರಾಜ್ಯಗಳ ವಿಧಾನಸಭೆಗಳ ಸ್ಪೀಕರ್‌ಗಳ ಜತೆ ಸಮಾಲೋಚನೆ ನಡೆಸುವ ಯೋಜನೆಯನ್ನೂ ರೂಪಿಸಿದೆ.

ಮಣಿಪುರ: ವಿವರ ಸಲ್ಲಿಸಲು ಸೂಚನೆ



ನವದೆಹಲಿ (ಪಿಟಿಐ): ಮಣಿಪುರದಲ್ಲಿ ನಡೆದ ಜನಾಂಗೀಯ ಹಿಂಸಾಚಾರದ ಸಂದರ್ಭದಲ್ಲಿ ಬೆಂಕಿಗೆ ಪೂರ್ಣ ಅಥವಾ ಭಾಗಶಃ ಆಹುತಿಯಾದ, ಅತಿಕ್ರಮಣಕ್ಕೆ ಗುರಿಯಾದ ವಾಸದ ಕಟ್ಟಡಗಳು, ಆಸ್ತಿಗಳ ವಿವರವನ್ನು ಮುಚ್ಚಿದ ಲಕೋಟೆಯಲ್ಲಿ ನೀಡುವಂತೆ ಮಣಿಪುರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ಸೂಚನೆ ನೀಡಿದೆ.

ತಪ್ಪು ಮಾಡಿದವರು ಹಾಗೂ ಅತಿಕ್ರಮಣ ನಡೆಸಿದವರ ವಿರುದ್ಧ ಕೈಗೊಂಡ ಕ್ರಮಗಳನ್ನು ವಿವರಿಸುವಂತೆ ಸರ್ಕಾರಕ್ಕೆ ಸೂಚನೆ ನೀಡಿರುವ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇರುವ ವಿಭಾಗೀಯ ಪೀಠವು, ಮುಂದಿನ ವಿಚಾರಣೆಯನ್ನು ಜನವರಿ 20ರ ನಂತರದ ವಾರಕ್ಕೆ ನಿಗದಿ ಮಾಡಿದೆ.

ಸಂತ್ರಸ್ತರಿಗೆ ಪರಿಹಾರ ನೀಡುವ ಹಾಗೂ ಅವರಿಗೆ ಪುನರ್ವಸತಿ ಕಲ್ಪಿಸುವ ಕಾರ್ಯದ ಉಸ್ತುವಾರಿಗೆ ಹೈಕೋರ್ಟ್‌ನ ಮೂವರು ನಿವೃತ್ತ ಮಹಿಳಾ ನ್ಯಾಯಮೂರ್ತಿಗಳ ಸಮಿತಿಯೊಂದನ್ನು ರಚಿಸುವಂತೆ ಸುಪ್ರೀಂ ಕೋರ್ಟ್ ಕಳೆದ ವರ್ಷದ ಆಗಸ್ಟ್‌ನಲ್ಲಿ ಆದೇಶಿಸಿತ್ತು. ಅಲ್ಲದೆ, ಕ್ರಿಮಿನಲ್ ಪ್ರಕರಣಗಳ ತನಿಖೆಯ ಮೇಲೆ ನಿಗಾ ಇರಿಸುವಂತೆ ಮಹಾರಾಷ್ಟ್ರದ ಮಾಜಿ ಪೊಲೀಸ್ ಮುಖ್ಯಸ್ಥ ದತ್ತಾತ್ರೇಯ ಪಡಸಲಗೀಕರ್ ಅವರಿಗೆ ಸೂಚನೆ ನೀಡಿತ್ತು. ಮಣಿಪುರದಲ್ಲಿ 2023ರ ಮೇ ತಿಂಗಳಲ್ಲಿ ಜನಾಂಗೀಯ ಹಿಂಸಾಚಾರ ಆರಂಭವಾದ ನಂತರ 160ಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ಕಾಲಾವಕಾಶ ಕೋರಿಕೆ

ಸಂಭಲ್ (ಉತ್ತರ ಪ್ರದೇಶ): ಸಂಭಲ್‌ನಲ್ಲಿರುವ ಶಾಹಿ ಜಮಾ ಮಸೀದಿ ಸಮೀಕ್ಷೆ ಕುರಿತ ವರದಿಯನ್ನು ಕೋರ್ಟ್ ಕಮಿಷನರ್ ಸೋಮವಾರ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಅನಾರೋಗ್ಯ ಇರುವ ಕಾರಣ ಇನ್ನೂ 15 ದಿನ ಕಾಲಾವಕಾಶ ನೀಡಬೇಕು ಎಂದು ಅವರು ಕೋರಿದ್ದಾರೆ. ‘ಅರ್ಜಿ ವಿಚಾರಣೆಯನ್ನು ಸಿವಿಲ್ ಕೋರ್ಟ್ ಮುಂದೂಡುವ ಸಾಧ್ಯತೆ ಇದೆ’ ಎಂದು ಕೋರ್ಟ್ ಕಮಿಷನರ್ ರಮೇಶ್ ಸಿಂಗ್ ರಾಘವ್ ತಿಳಿಸಿದರು.

ಸೋನಿಯಾ ವಿವರಣೆ ನೀಡಬೇಕು: ಬಿಜೆಪಿ

ನವದೆಹಲಿ (ಪಿಟಿಐ): ಭಾರತವನ್ನು ಅಸ್ಥಿರಗೊಳಿಸಲು ಬಯಸುವ ವಿದೇಶಿ ಶಕ್ತಿಗಳ ಜತೆಗೆ ವಿರೋಧ ಪಕ್ಷವಾದ ಕಾಂಗ್ರೆಸ್ ಸೇರಿಕೊಂಡಿದೆ ಎಂದು ಆರೋಪಿಸಿರುವ ಬಿಜೆಪಿ, ಅಮೆರಿಕದ ಉದ್ಯಮಿ ಜಾರ್ಜ್ ಸೊರೋಸ್ ಪ್ರತಿಷ್ಠಾನದಲ್ಲಿ ಸಹ- ಅಧ್ಯಕ್ಷರಾಗಿ ತಮ್ಮ ಪಾತ್ರವನ್ನು ಸೋನಿಯಾ ಗಾಂಧಿ ಅವರು ಬಹಿರಂಗ ಪಡಿಸಬೇಕು ಎಂದು ಆಗ್ರಹಿಸಿದೆ.

ಬಿಜೆಪಿ ಕೇಂದ್ರ ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಷ್ಟ್ರೀಯ ವಕ್ತಾರ ಸುಧಾಂಶು ತ್ರಿವೇದಿ, ‘ಭಾರತ ವಿರೋಧಿ ಪ್ರಯೋಗಗಳು ವ್ಯವಸ್ಥಿತವಾಗಿ ನಡೆಯುತ್ತಿದ್ದು, ಕುರುಹುಗಳು ಈಗ ಸ್ಪಷ್ಟವಾಗಿ ಗೋಚರಿಸುತ್ತಿವೆ’ ಎಂದು ಆರೋಪಿಸಿದರು.

ತನ್ನವರ ಕಳೆದುಕೊಂಡ ಶ್ರುತಿಗೆ ಸರ್ಕಾರಿ ನೌಕರಿ

ವಯನಾಡ್ (ಪಿಟಿಐ): ಇಲ್ಲಿ ಸಂಭವಿಸಿದ ಭೀಕರ ಭೂಕುಸಿತದಲ್ಲಿ ತನ್ನವರನ್ನೆಲ್ಲಾ ಕಳೆದುಕೊಂಡು, ಕೊನೆಗೆ ರಸ್ತೆ ಅಪಘಾತದಿಂದಾಗಿ ಮದುವೆ ನಿಶ್ಚಯವಾಗಿದ್ದ ಹುಡುಗನನ್ನೂ ಕಳೆದುಕೊಂಡಿದ್ದ ಶ್ರುತಿ ಅವರು ಸೋಮವಾರ ಕಂದಾಯ ಇಲಾಖೆಯಲ್ಲಿ ಸಹಾಯಕಿ ಆಗಿ ಕೆಲಸಕ್ಕೆ ಸೇರುವುದರ ಮೂಲಕ ತಮ್ಮ ಜೀವನದ ಹೊಸ ಅಧ್ಯಾಯವನ್ನು ಆರಂಭಿಸಿದರು.

ಶ್ರುತಿ ಅವರಿಗೆ ಸರ್ಕಾರಿ ಉದ್ಯೋಗ ನೀಡುವ ಬಗ್ಗೆ ರಾಜ್ಯ ಸಂಪುಟ ಸಭೆ ನಿರ್ಧಾರ ತೆಗೆದುಕೊಂಡಿತ್ತು. ಸೋಮವಾರ ಕಚೇರಿಯಲ್ಲಿ ಅವರಿಗೆ ಉದ್ಯೋಗದ ಮೊದಲ ದಿನವಾಗಿತ್ತು. ಮೊದಲ ದಿನ ಕಚೇರಿಗೆ ತೆರಳುವ ವೇಳೆ ಅವರೊಂದಿಗೆ ಇಲ್ಲಿನ ರಾಜಕೀಯ ಮುಖಂಡರೂ ಇದ್ದರು.

ತಂದೆ–ತಾಯಿ, ಸಹೋದರಿಯರು ಸೇರಿದಂತೆ ಭೂಕುಸಿತದಲ್ಲಿ ಶ್ರುತಿ ಅವರು ತಮ್ಮ ಕುಟುಂಬದ 9 ಮಂದಿಯನ್ನು ಕಳೆದುಕೊಂಡಿದ್ದರು. ನೂತನವಾಗಿ ಕಟ್ಟಿಸಿದ್ದ ಮನೆ, ₹4 ಲಕ್ಷ ಹಣ, 15 ಪವನ್ ಚಿನ್ನ ಪ್ರವಾಹದಲ್ಲಿ ಕೊಚ್ಚಿಹೋಗಿದ್ದವು.

ಬದುಕಿನ ಈ ಕಷ್ಟಕಾಲದಲ್ಲಿ ಶ್ರುತಿ ಅವರೊಂದಿಗೆ ಜಾನ್ಸನ್ (ಮದುವೆ ನಿಶ್ಚಯವಾಗಿದ್ದ ಹುಡುಗ) ಇದ್ದರು. ಆದರೆ, ಸೆಪ್ಟೆಂಬರ್‌ನಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಶ್ರುತಿ, ಜಾನ್ಸನ್ ಇಬ್ಬರಿಗೂ ತೀವ್ರ ಗಾಯಗಳಾಗಿದ್ದವು.

ಶ್ರುತಿ ಅವರು ಗುಣಮುಖರಾದರು. ಆದರೆ, ಜಾನ್ಸನ್ ಮೃತಪಟ್ಟರು.

‘ಸಿಯುಇಟಿ–2025: ಶೀಘ್ರ ಪರಿಷ್ಕೃತ ನಿಯಮ’

ನವದೆಹಲಿ (ಪಿಟಿಐ): ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ದೇಶದಾದ್ಯಂತ ನಡೆಯುವ ‘ಕಾಮನ್ ಯುನಿವರ್ಸಿಟಿ ಎಂಟ್ರೆನ್ಸ್ ಟೆಸ್ಟ್’ (ಸಿಯುಇಟಿ)– 2025ರಲ್ಲಿ ಕೆಲವು ಬದಲಾವಣೆಗಳನ್ನು ತರಲು ಉದ್ದೇಶಿಸಿದ್ದು, ಸದ್ಯದಲ್ಲಿಯೇ ಕರಡು ಪ್ರಸ್ತಾವನೆಯನ್ನು ಪ್ರಕಟಿಸಲಾಗುವುದು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಜಗದೀಶ್ ಕುಮಾರ್ ತಿಳಿಸಿದ್ದಾರೆ.

ಯು.ಜಿ ಮತ್ತು ಪಿ.ಜಿ ಪ್ರವೇಶ ಪರೀಕ್ಷೆಯಲ್ಲಿ ಸುಧಾರಣೆಗಳನ್ನು ತರಲು ಯುಜಿಸಿ ತಜ್ಞರ ಸಮಿತಿ ರಚಿಸಿತ್ತು. ಸಮಿತಿಯು ಪರೀಕ್ಷಾ ವಿಧಾನ, ಪರೀಕ್ಷಾ ಅವಧಿ, ಪಠ್ಯಕ್ರಮ, ಪರೀಕ್ಷಾ ಪರಿಕರಗಳ ಸಾಗಣೆ ಸೇರಿದಂತೆ ವಿವಿಧ ಆಯಾಮಗಳಲ್ಲಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದೆ. ಇತ್ತೀಚೆಗೆ ನಡೆದ ಆಯೋಗದ ಸಭೆಯಲ್ಲಿ ಈ ವರದಿಯ ಶಿಫಾರಸುಗಳಿಗೆ ಒಪ್ಪಿಗೆ ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.


40 ಶಾಲೆಗಳಿಗೆ ಬಾಂಬ್ ಬೆದರಿಕೆ

ನವದೆಹಲಿ (ಪಿಟಿಐ): 30 ಸಾವಿರ ಡಾಲರ್ (₹25.41ಲಕ್ಷ) ಹಣ ನೀಡುವಂತೆ ಒತ್ತಾಯಿಸಿ, ದೆಹಲಿಯ 40 ಶಾಲೆಗಳಿಗೆ ಅಪರಿಚಿತ ವ್ಯಕ್ತಿಗಳು ಇ–ಮೇಲ್ ಮೂಲಕ ಸೋಮವಾರ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದು, ಶೋಧ ಕಾರ್ಯ ನಡೆಸಿದ ಪೊಲೀಸರು, ‘ಯಾವುದೇ ಅನುಮಾನಾಸ್ಪದ ವಸ್ತುಗಳು’ ಪತ್ತೆಯಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಆರ್.ಕೆ.ಪುರಂನಲ್ಲಿರುವ ಡಿಪಿಎಸ್, ಪಶ್ಚಿಮ್ ವಿಹಾರ್‌ನ ಜಿ.ಡಿ. ಗೋಯೆಂಕಾ ಸೇರಿದಂತೆ ಪ್ರಮುಖ ಶಾಲೆಗಳಿಗೆ ಭಾನುವಾರ ರಾತ್ರಿ 11.30ಕ್ಕೆ ಒಂದೇ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಕಳುಹಿಸಲಾಗಿತ್ತು.

ಸಂದೇಶ ಸ್ವೀಕರಿಸಿದ ಶಾಲೆಗಳಲ್ಲಿ ತಕ್ಷಣವೇ ತರಗತಿಗಳನ್ನು ಮೊಟಕುಗೊಳಿಸಿದ ಶಿಕ್ಷಕರು, ಮಕ್ಕಳನ್ನು ಮರಳಿ ಮನೆಗೆ ಕಳುಹಿಸಿಕೊಟ್ಟರು.

‘ಶಾಲಾ ಆವರಣಗಳನ್ನು ಶೋಧಿಸಲಾಯಿತು. ಯಾವುದೇ ಅನುಮಾನಾಸ್ಪದ ವಸ್ತುಗಳು ಸಿಕ್ಕಿಲ್ಲ. ಪೋಷಕರು ಆತಂಕಕ್ಕೆ ಒಳಗಾಗಬಾರದು’ ಎಂದು ದೆಹಲಿ ಪೊಲೀಸ್ ಇಲಾಖೆಯ ಡಿಸಿಪಿ (ನೈರುತ್ಯ) ಸುರೇಂದ್ರ ಚೌಧರಿ ತಿಳಿಸಿದರು.



ಆಗ್ರಾ ವಿಮಾನ ನಿಲ್ದಾಣಕ್ಕೂ ಸಂದೇಶ

ಆಗ್ರಾ (ಪಿಟಿಐ): ಇಲ್ಲಿನ ವಿಮಾನ ನಿಲ್ದಾಣಕ್ಕೆ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶವನ್ನು ಸೋಮವಾರ ಕಳುಹಿಸಲಾಗಿದ್ದು, ಭದ್ರತಾ ಪಡೆ ಸಿಬ್ಬಂದಿ ತಕ್ಷಣವೇ ಶೋಧ ಕಾರ್ಯ ನಡೆಸಿದರು. ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ ಎಂದು ಪೊಲೀಸರು ಸ್ಪಷ್ಟಪಡಿಸಿದರು.

ಖೇರಿಯಾದಲ್ಲಿರುವ ವಿಮಾನ ನಿಲ್ದಾಣವು ನಾಗರಿಕ ವಿಮಾನಯಾನ ಸೇವೆ ಒದಗಿಸುವ ಜೊತೆಗೆ ಭಾರತೀಯ ವಾಯುಪಡೆಯ ವಾಯುನೆಲೆಯೂ ಆಗಿದೆ.

‘ವಿಮಾನ ನಿಲ್ದಾಣದ ಸ್ನಾನದ ಕೊಠಡಿಯಲ್ಲಿ ಬಾಂಬ್ ಇಡಲಾಗಿದೆ ಎಂದು ಸೋಮವಾರ ಬೆಳಿಗ್ಗೆ 11.56ರ ಸುಮಾರಿಗೆ ವಿಮಾನ ನಿಲ್ದಾಣದ ಭದ್ರತಾ ಉಸ್ತುವಾರಿ ಹೊಂದಿರುವ ಕೇಂದ್ರಿಯ ಕೈಗಾರಿಕಾ ಭದ್ರತಾ ಪಡೆಗೆ (ಸಿಐಎಸ್‌ಎಫ್) ಇ–ಮೇಲ್ ಮಾಡಲಾಗಿತ್ತು. ತಕ್ಷಣವೇ ಬಾಂಬ್ ನಿಷ್ಕ್ರಿಯ ತಂಡವನ್ನು ವಿಮಾನ ನಿಲ್ದಾಣಕ್ಕೆ ಕಳುಹಿಸಲಾಯಿತು’ ಎಂದು ಸಹಾಯಕ ಆಯುಕ್ತ (ಲೋಹಮಂಡಿ) ಮಯಾಂಕ್ ತಿವಾರಿ ತಿಳಿಸಿದರು.

‘ಸುಮಾರು 2 ಗಂಟೆ ವಿಮಾನ ನಿಲ್ದಾಣ ಶೋಧಿಸಿದ ಬಳಿಕ ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ’ ಎಂದು ಆಗ್ರಾ ವಿಮಾನ ನಿಲ್ದಾಣದ ನಿರ್ದೇಶಕ ಯೋಗೇಂದ್ರ ಸಿಂಗ್ ತಿಳಿಸಿದರು.

ಪದೇಪದೇ ಕಲಾಪ ಮುಂದೂಡಿದ ಸ್ಪೀಕರ್

ಪ್ರತಿಪಕ್ಷಗಳಿಂದ ಪ್ರತಿಭಟನೆ

ನವದೆಹಲಿ (ಪಿಟಿಐ): ಅಮೆರಿಕದ ಉದ್ಯಮಿ ಜಾರ್ಜ್ ಸೊರೋಸ್ ಜತೆ ಕಾಂಗ್ರೆಸ್ ನಂಟು ಹೊಂದಿದೆ ಎಂಬ ಆರೋಪ ಮತ್ತು ಅದಾನಿ ಭ್ರಷ್ಟಾಚಾರ ಪ್ರಕರಣದ ಬಗ್ಗೆ ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಸೋಮವಾರ ತೀವ್ರ ಪ್ರತಿಭಟನೆ ನಡೆಸಿದವು. ಇದರಿಂದಾಗಿ ಸದನದಲ್ಲಿ ಯಾವುದೇ ವಿಷಯದ ಬಗ್ಗೆ ಫಲಪ್ರದವಾದ ಚರ್ಚೆಯಾಗದೆ ಕಲಾಪವನ್ನು ಮುಂದೂಡಲಾಯಿತು.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿ ಆರೋಪ ಮಾಡಿದ ಬಿಜೆಪಿ ಸದಸ್ಯನ ವಿರುದ್ಧ ಹಕ್ಕುಚ್ಯುತಿ ನಿರ್ಣಯ ಮಂಡನೆ ಮಾಡಬೇಕು ಎಂದು ಆಗ್ರಹಿಸಿ ವಿಪಕ್ಷಗಳ ನಾಯಕರು ನೋಟಿಸ್ ಸಲ್ಲಿಸಿದರು. ಇದರಿಂದಾಗಿ ಆಡಳಿತ–ವಿಪಕ್ಷಗಳ ಮಧ್ಯೆ ವಾಗ್ವಾದ ನಡೆಯಿತು. ವಿಪಕ್ಷಗಳ ಸದಸ್ಯರು ಸಭಾಧ್ಯಕ್ಷರ ಪೀಠದತ್ತ ತೆರಳಿ ಪ್ರತಿಭಟಿಸಿದರು. ಹೀಗಾಗಿ ಸ್ಪೀಕರ್ ಓಂ ಬಿರ್ಲಾ ಅವರು ಹಲವು ಬಾರಿ ಕಲಾಪವನ್ನು ಮುಂದೂಡಿದರು.

ಮುಖ್ಯಾಂಶಗಳು

- ಪ್ರತಿಪಕ್ಷಗಳ ಪ್ರತಿಭಟನೆಯಿಂದ ದೂರ ಉಳಿದ ಟಿಎಂಸಿ
- ಕಾಂಗ್ರೆಸ್ ಜತೆ ಕೈಜೋಡಿಸಿದ ಎಸ್‌ಪಿ

‘ಪ್ರಶ್ನೋತ್ತರ ಅವಧಿಯು ಮುಖ್ಯವಾದುದು. ಕಲಾಪ ಸರಿಯಾಗಿ ನಡೆಯಲು ಬಿಡಿ. ದೇಶವು ಸದನದಲ್ಲಿ ಚರ್ಚೆಯನ್ನು ಬಯಸುತ್ತದೆ. ನೀವು ಕಲಾಪಕ್ಕೆ ಅಡ್ಡಿ ಮಾಡುತ್ತಿದ್ದೀರಿ’ ಎಂದು ಸ್ಪೀಕರ್ ಹೇಳಿದರು.

ಆದರೆ, ಮಧ್ಯಾಹ್ನ ಕಲಾಪ ಆರಂಭವಾಗುತ್ತಿದ್ದಂತೆಯೇ ಕಾಂಗ್ರೆಸ್ ಪಕ್ಷದ ಸದಸ್ಯರು ಮತ್ತೆ ಸಭಾಧ್ಯಕ್ಷರ ಪೀಠದ ಸಮೀಪ ತೆರಳಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ನಂತರ ಸಮಾಜವಾದಿ ಪಕ್ಷದ ಸದಸ್ಯರು ಅವರೊಂದಿಗೆ ಜತೆಗೂಡಿದರು.

‘ಮೋದಿ ಸರ್ಕಾರ ಡೌನ್ ಡೌನ್’, ‘ಮೋದಿ ಸರ್ಕಾರಕ್ಕೆ ಶೇಮ್ ಶೇಮ್’, ‘ನ್ಯಾಯ ಬೇಕು’ ಎಂದು ಘೋಷಣೆ ಕೂಗಿದರು. ಪ್ರತಿಭಟನೆ ಮುಂದುವರಿದ ಕಾರಣ ದಿನದ ಕಲಾಪವನ್ನು ಅಂತ್ಯಗೊಳಿಸಲಾಯಿತು.


ಲೋಕಸಭೆಯ ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ಅದಾನಿ ಭ್ರಷ್ಟಾಚಾರ ವಿಚಾರವಾಗಿ, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಸೇರಿದಂತೆ ‘ಇಂಡಿಯಾ’ ಒಕ್ಕೂಟದ ಸಂಸದರು ಸೋಮವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಆರ್‌ಜೆಡಿ ಸದಸ್ಯರು ಆಸನದಲ್ಲಿ ಎದ್ದು ನಿಂತು ಪ್ರತಿಭಟನೆಗೆ ಬೆಂಬಲ ನೀಡಿದರು. ಸೌಗತಾ ರಾಯ್, ಕಲ್ಯಾಣ್ ಬ್ಯಾನರ್ಜಿ, ಮಹುವಾ ಮೊಯಿತ್ರಾ ಸೇರಿದಂತೆ ಟಿಎಂಸಿ ಸದಸ್ಯರು ತಮ್ಮ ಆಸನದಲ್ಲಿಯೇ ಕುಳಿತಿದ್ದರು.

ಪ್ರತಿಭಟನೆ ವೇಳೆ ರಾಹುಲ್ ಗಾಂಧಿ ಅವರು ಸದನದಲ್ಲಿ ಉಪಸ್ಥಿತರಿದ್ದರು.

'ಸೀಟ್ ಬ್ಲಾಕಿಂಗ್' ದಂಧೆ: ಮೂವರು ಆರೋಪಿಗಳು ಪೊಲೀಸ್ ಕಸ್ಟಡಿಗೆ

ಮೂರು ಕಾಲೇಜಿಗೆ ನೋಟಿಸ್


ಪ್ರಜಾವಾಣಿ ವಾರ್ತೆ



ನೌಶದ್



ಶ್ರೀಹರ್ಷ



ತಿಲಕ್

ಬೆಂಗಳೂರು: ಸರ್ಕಾರದ ಕೋಟಾದಡಿ ಬರುವ ಎಂಜಿನಿಯರಿಂಗ್ ಸೀಟುಗಳನ್ನು ಬ್ಲಾಕ್ ಮಾಡಿ ಖಾಸಗಿ ಕಾಲೇಜುಗಳಿಗೆ ಲಾಭ ಮಾಡಿಕೊಟ್ಟು, ಅರ್ಹ ಅಭ್ಯರ್ಥಿಗಳಿಗೆ ವಂಚಿಸುತ್ತಿದ್ದ ಪ್ರಕರಣದ ತನಿಖೆಯನ್ನು ಮಲ್ಲೇಶ್ವರ ಠಾಣೆ ಪೊಲೀಸರು ಚುರುಕುಗೊಳಿಸಿದ್ದಾರೆ.

ಪ್ರಕರಣದ ಸಂಬಂಧ ಮೂರು ಎಂಜಿನಿಯರಿಂಗ್ ಕಾಲೇಜುಗಳಿಗೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ನೀಡಿದ ದೂರು ಆಧರಿಸಿ, ನವೆಂಬರ್ 13ರಂದು ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿತ್ತು. ನಂತರ, ತಾಂತ್ರಿಕ ಸಾಕ್ಷ್ಯಗಳ ಆಧಾರದ ಮೇಲೆ ಡಿ.3ರಂದು 10 ಮಂದಿಯನ್ನು ಬಂಧಿಸಲಾಗಿತ್ತು.

'ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಆಕಾಶ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್, ನ್ಯೂ ಹೊರೈಜಾನ್ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರದ ಕೋಟಾದಡಿ ಲಭ್ಯವಿದ್ದ ಎಂಜಿನಿಯರಿಂಗ್ ಸೀಟುಗಳನ್ನು ಬ್ಲಾಕ್ ಮಾಡಿ ಖಾಸಗಿ ಕಾಲೇಜುಗಳಿಗೆ ಲಾಭ ಮಾಡಿಕೊಡಲಾಗಿದೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿತ್ತು.

ಈಗ ಆ ಮೂರು ಕಾಲೇಜುಗಳ ಆಡಳಿತ ಮಂಡಳಿಯವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಶನಿವಾರ ಮೂರೂ ಕಾಲೇಜಿನವರು ವಿಚಾರಣೆಗೆ ಹಾಜರಾಗಿದ್ದರು. ಮೂರು ವರ್ಷದ ಪ್ರವೇಶಕ್ಕೆ ಸಂಬಂಧಿಸಿದ ದಾಖಲೆಗಳನ್ನು ತರುವಂತೆ ಸೂಚಿಸಿ ಕಳುಹಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ನಾಲ್ಕು ದಿನ ಪೊಲೀಸ್ ಕಸ್ಟಡಿಗೆ: ಕೆಇಎ ಹೊರಗುತ್ತಿಗೆ ನೌಕರ, ಯಶವಂತಪುರದ ನಿವಾಸಿ ಬಿ.ಎಸ್.ಅವಿನಾಶ್ (36), ತುಮಕೂರಿನ ಚಿಕ್ಕನಾಯಕನಹಳ್ಳಿ ನಿವಾಸಿ ಟಿ.ಎಂ.ಶ್ರೀಹರ್ಷ(42), ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಎಸ್.ಆರ್.ಪ್ರಕಾಶ್ (42), ಶಶಿಕುಮಾರ್, ಪುರುಷೋತ್ತಮ್, ಎಸ್.ಎಲ್.ಪುನೀತ್, ಕನಕಪುರದ ಸಾತನೂರಿನ ಎಸ್.ಸಿ.ರವಿಶಂಕರ್, ಜಾರ್ಖಂಡ್ ನಿವಾಸಿಗಳಾದ ದಿಲ್‌ಶಾದ್ ಆಲಂ (33), ನೌಶದ್ ಆಲಂ (42), ಹಾಗೂ ಆರ್. ಜಿ. ತಿಲಕ್ (60) ಎಂಬುವವರನ್ನು ಬಂಧಿಸಲಾಗಿತ್ತು.

ಇದರಲ್ಲಿ ಏಳು ಮಂದಿಯನ್ನು ವಿಚಾರಣೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ಹರ್ಷ, ತಿಲಕ್ ಹಾಗೂ ನೌಷದ್ ಅವರನ್ನು ನಾಲ್ಕು ದಿನ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಂಟು ವರ್ಷದಿಂದ ದಂಧೆ: 'ಕೆಇಎ ಹೊರಗುತ್ತಿಗೆ ನೌಕರ ಬಿ.ಎಸ್.ಅವಿನಾಶ್ ಎಂಬಾತನೇ ಪ್ರಕರಣದ ಪ್ರಮುಖ ಆರೋಪಿ ಎಂಬುದು ತನಿಖೆಯಿಂದ ಗೊತ್ತಾಗಿದೆ. ಕಚೇರಿಯಲ್ಲಿ ಡೇಟಾ ಆಪರೇಟರ್ ಆಗಿದ್ದು, ಈ ಮೂಲಕ ವಿದ್ಯಾರ್ಥಿಗಳ ಮಾಹಿತಿ ಕದ್ದು ಮಾರಾಟ ಮಾಡುತ್ತಿದ್ದ. ಬಂಧಿತರು 8 ವರ್ಷಗಳಿಂದ ಸೀಟು ಬ್ಲಾಕಿಂಗ್ ದಂಧೆಯಲ್ಲಿ ತೊಡಗಿದ್ದರು' ಎಂದು ಪೊಲೀಸರು ತಿಳಿಸಿದರು.

'ಬಂಧಿತ 10 ಮಂದಿ ಪೈಕಿ 6 ಆರೋಪಿಗಳು 2016-2017ರಿಂದಲೂ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಸೀಟುಗಳೂ ಸೇರಿದಂತೆ ಪ್ರಮುಖ ಕೋರ್ಸ್‌ಗಳ ಸೀಟುಗಳ ಬ್ಲಾಕಿಂಗ್ ದಂಧೆಯಲ್ಲಿ ತೊಡಗಿದ್ದರು' ಎಂದು ತನಿಖೆಯಿಂದ ಗೊತ್ತಾಗಿದೆ.

ಡೇಟಾ ಮಾರಾಟ: 'ವಿದ್ಯಾರ್ಥಿ ಯಾವೆಲ್ಲ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಿದ್ದಾನೆ ಎಂಬುದನ್ನು ಅವಿನಾಶ ಪತ್ತೆಹಚ್ಚುತ್ತಿದ್ದ. ಅಲ್ಲದೇ ವಿದ್ಯಾರ್ಥಿಗಳ ಲಾಗಿನ್ ಐ.ಡಿ, ಪಾಸ್‌ವರ್ಡ್, ಸೀಕ್ರೆಟ್ ಕೀ ಮಾಹಿತಿಯನ್ನು ಇವನು ಪಡೆದುಕೊಳ್ಳುತ್ತಿದ್ದ. ಶ್ರೀಹರ್ಷನಿಂದ ಆರೋಪಿ ಅವಿನಾಶ್ ಹಣ ಪಡೆದು ಲಾಗಿನ್ ಐ.ಡಿ. ಪಾಸ್‌ವರ್ಡ್, ಸೀಕ್ರೆಟ್ ಕೀ ನೀಡುತ್ತಿದ್ದ' ಎಂದು ಮೂಲಗಳು ಹೇಳಿವೆ.

ಇನ್ನೂ ಕೆಲವರ ಬಂಧನ ಸಾಧ್ಯತೆ

'ಪ್ರಕರಣ ಸಂಬಂಧ ಕೆಲವರಿಗೆ ದಾಖಲೆ ಸಹಿತ ಮಾಹಿತಿ ನೀಡುವಂತೆ ಸೂಚಿಸಲಾಗಿದೆ. ಪ್ರಕರಣದಲ್ಲಿ ಇನ್ನೂ ಕೆಲವರು ಭಾಗಿಯಾಗಿರುವ ಸಂಶಯ ಇದೆ. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು. ಸಾಕ್ಷ್ಯಾಧಾರ ಲಭಿಸಿದರೆ ಬಂಧಿಸಲಾಗುವುದು' ಎಂದು ಪೊಲೀಸರು ಹೇಳಿದರು.

ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ಎಚ್ಚರಿಕೆ

ಬೆಂಗಳೂರು: ಭಾರತೀಯ ವೈದ್ಯಕೀಯ ಪದ್ಧತಿಯ ರಾಷ್ಟ್ರೀಯ ಆಯೋಗ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ, 'ರಾಜ್ಯ ಖಾಸಗಿ ಆಯುರ್ವೇದ ವೈದ್ಯಕೀಯ ಕಾಲೇಜುಗಳ ಮತ್ತು ಆಸ್ಪತ್ರೆಗಳ ಸಂಘಗಳ ಒಕ್ಕೂಟ' ಸಲ್ಲಿಸಿರುವ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ವಿಳಂಬ ಮಾಡುತ್ತಿರುವ ಕೇಂದ್ರ ಸರ್ಕಾರದ ಧೋರಣೆಗೆ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ದಂಡ ವಿಧಿಸುವ ಎಚ್ಚರಿಕೆ ನೀಡಿದೆ.

ಈ ಸಂಬಂಧ, ಒಕ್ಕೂಟದ ಅಧ್ಯಕ್ಷ ಅಶೋಕ್ ಕುಮಾರ್ ಬಾಗ್ಮಾರ್ ಸೇರಿ ಒಟ್ಟು ಐದು ಆಯುರ್ವೇದ ಕಾಲೇಜುಗಳ ವತಿಯಿಂದ ಸಲ್ಲಿಸಲಾಗಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ವಕೀಲರು, 'ಆಕ್ಷೇಪಣೆ ಸಲ್ಲಿಸಲು ಇನ್ನಷ್ಟು ಕಾಲಾವಕಾಶ ನೀಡಬೇಕು' ಎಂದು ಕೋರಿದರು. ಇದಕ್ಕೆ ನ್ಯಾಯಪೀಠ, 'ಕಳೆದ ಬಾರಿಯೂ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಕೇಳಿದ್ದಿರಿ. ಈಗ ಪುನಃ ಕಾಲಾವಕಾಶ ಕೇಳುತ್ತಿದ್ದೀರಲ್ಲಾ' ಎಂದು ಅಸಮಾಧಾನ ವ್ಯಕ್ತಪಡಿಸಿತು. 'ಮುಂದಿನ ವಿಚಾರಣೆ ವೇಳೆಗೆ ಆಕ್ಷೇಪಣೆ ಸಲ್ಲಿಸದೇ ಹೋದರೆ ದಂಡ ವಿಧಿಸಲಾಗುವುದು' ಎಂದು ಎಚ್ಚರಿಸಿ ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿತು.

ಅಂಗವಿಕಲ ವಿದ್ಯಾರ್ಥಿಗಳಿಗಿಲ್ಲ ವಿಶೇಷ ಶಿಕ್ಷಕರ ಬೋಧನೆ

ಒಂದನೇ ಪುಟದಿಂದ...

ಬಿಆರ್‌ಸಿ (ಸಮನ್ವಯ ಶಿಕ್ಷಣ ವಿಭಾಗ) ಹಂತದಲ್ಲಿ ಪ್ರತಿ ತಾಲ್ಲೂಕಿನ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳಿಗೆ ತಲಾ ಇಬ್ಬರು ಶಿಕ್ಷಕರನ್ನು ಮಾತ್ರ ನಿಯೋಜನೆ ಮಾಡಲಾಗಿತ್ತು. ಕಡಿಮೆ ವೇತನದ ಕಾರಣಕ್ಕೆ ಹೆಚ್ಚಿನ ಶಿಕ್ಷಕರು ಈಗ ಕೆಲಸ ಬಿಟ್ಟಿದ್ದಾರೆ.

ಕೆಲ ತಾಲ್ಲೂಕುಗಳಲ್ಲಿ ಒಬ್ಬ ವಿಶೇಷ ಶಿಕ್ಷಕರೂ ಇಲ್ಲವಾಗಿದ್ದಾರೆ. ಇರುವ ಕೆಲವೇ ಶಿಕ್ಷಕರು ಅಂಗವಿಕಲ ವಿದ್ಯಾರ್ಥಿಗಳು ಕಲಿಯುತ್ತಿರುವ ಶಾಲೆಗಳ ಭೇಟಿಗಷ್ಟೇ ಸೀಮಿತವಾಗಿದ್ದಾರೆ. ಕೇವಲ ನಾಲ್ವರು ಶಿಕ್ಷಕರು ತಾಲ್ಲೂಕಿನ ವಿವಿಧ ಶಾಲೆಗಳಲ್ಲಿರುವ 100ಕ್ಕೂ ಹೆಚ್ಚು ಅಂಗವಿಕಲ ವಿದ್ಯಾರ್ಥಿಗಳಿಗೆ ಪಾಠ ಬೋಧನೆ ಮಾಡುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರ ಇಲ್ಲದಾಗಿದೆ ಎಂದು ಶಿಕ್ಷಕರು ಹೇಳುತ್ತಾರೆ.

'ರಾಜ್ಯ ಸರ್ಕಾರಕ್ಕೆ ಅಂಗವಿಕಲ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇಲ್ಲ. ಅಂತೆಯೇ ಅವರ ಶಿಕ್ಷಣವನ್ನು ನಿರ್ಲಕ್ಷಿಸಿದೆ. ಮಹಾರಾಷ್ಟ್ರದಲ್ಲಿ 6,000 ವಿಶೇಷ ಶಿಕ್ಷಕರನ್ನು ಈಗಾಗಲೇ ನೇಮಕ ಮಾಡಿಕೊಳ್ಳಲಾಗಿದೆ. ಅದೇ ಮಾದರಿಯಲ್ಲಿ ಕರ್ನಾಟಕದಲ್ಲೂ ನೇಮಕ ಮಾಡಿಕೊಳ್ಳಬೇಕು. 2018ರಿಂದ ಕನಿಷ್ಠ ವೇತನಕ್ಕೆ ಗುತ್ತಿಗೆ ಆಧಾರದ ಮೇಲೆ ದುಡಿಯುತ್ತಿರುವ ಶಿಕ್ಷಕರನ್ನು ಕಾಯಂ ಮಾಡಿಕೊಳ್ಳಲು ಆದ್ಯತೆ ನೀಡಬೇಕು' ಎಂದು ವಿಶೇಷ ಬಿ.ಇಡಿ ಪದವಿ ಪಡೆದಿರುವ ಅಭ್ಯರ್ಥಿ ರಶ್ಮಿ ಒತ್ತಾಯಿಸಿದರು.

ಆರ್‌ಸಿಐನಿಂದ ತರಬೇತಿ: ಅಂಗವಿಕಲರ ಹಕ್ಕುಗಳ ಕಾಯ್ದೆಯಲ್ಲಿ ಗುರುತಿಸಲಾಗಿರುವ 21 ವೈಕಲ್ಯಗಳ ವಿದ್ಯಾರ್ಥಿಗಳಿಗೆ ಪಾಠಬೋಧನೆ ಮಾಡಲು ಭಾರತೀಯ ಪುನರ್ವಸತಿ ಮಂಡಳಿ (ಆರ್‌ಸಿಐ) ವಿಶೇಷ ತರಬೇತಿ ನೀಡುತ್ತದೆ. 1ರಿಂದ 5ನೇ ತರಗತಿಗೆ ಬೋಧಿಸುವವರಿಗೆ ವಿಶೇಷ ಡಿ.ಇಡಿ, 6ರಿಂದ 10ನೇ ತರಗತಿಗಳಿಗೆ ಬೋಧಿಸುವವರಿಗೆ ವಿಶೇಷ ಬಿ.ಇಡಿ ಪದವಿ ನೀಡುತ್ತದೆ. ರಾಜ್ಯದಲ್ಲಿ ಸಾವಿರಾರು ಅಭ್ಯರ್ಥಿಗಳು ವಿಶೇಷ ಶಿಕ್ಷಣ ಪದವಿ ಪಡೆದಿದ್ದು ನೇಮಕಾತಿ ಅಧಿಸೂಚನೆಗಾಗಿ ಕಾಯುತ್ತಿದ್ದಾರೆ.

ಗಂಡನ ಮನೆಯಲ್ಲಿ ಬಡತನ: ಹಸುಗೂಸು ಮಾರಿದ ಮಹಿಳೆ

ಪ್ರಜಾವಾಣಿ ವಾರ್ತೆ

ರಾಮನಗರ: ಕುಟುಂಬ ನಿರ್ವಹಿಸಲು ಗಂಡ ಎದುರಿಸುತ್ತಿದ್ದ ಕಷ್ಟಕ್ಕೆ ಮರುಗಿದ ಇಲ್ಲಿಯ ಯಾರಬ್ ನಗರದ ಮಹಿಳೆಯೊಬ್ಬರು ತನ್ನ ಒಂದು ತಿಂಗಳ ಗಂಡು ಮಗುವನ್ನು ಈಚೆಗೆ ಬೆಂಗಳೂರಿನ ಮಹಿಳೆಯೊಬ್ಬರಿಗೆ ₹1.50 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ.

ರಾಮನಗರ ಪುರ ಠಾಣೆಗೆ ಮಹಿಳೆಯ ಪತಿ ಸದ್ದಾಂ ಪಾಷಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆತನ ಪತ್ನಿ ಹಾಗೂ ಮಧ್ಯಸ್ಥಿಕೆ ವಹಿಸಿದ ಮೂವರನ್ನು ಬಂಧಿಸಿದ್ದಾರೆ.

ಮಾರಾಟ ಮಾಡಲಾಗಿದ್ದ ಒಂದು ತಿಂಗಳ ಹಸುಗೂಸು ಮೊಹಮ್ಮದ್ ಅಲಿ ಬೇಗ್‌ನನ್ನು ಪೊಲೀಸರು ವಶಕ್ಕೆ ಪಡೆದು, ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಒಪ್ಪಿಸಿದ್ದಾರೆ.

ಮಗುವಿನ ತಾಯಿ ನಸ್ರೀನ್ ತಾಜ್, ಮಾರಾಟಕ್ಕೆ ಮಧ್ಯಸ್ಥಿಕೆ ವಹಿಸಿದ್ದ ಅಸ್ಲಂ, ಬೆಂಗಳೂರಿನ ತಾರನಂ ಸುಲ್ತಾನ ಹಾಗೂ ಮಗು ಖರೀದಿಸಿದ ಶಾಜಿಯಾ ಬಾನು ಅವರನ್ನು ಪೊಲೀಸರು ಬಂಧಿಸಿದ್ದಾರೆ. ಮಧ್ಯಸ್ಥಿಕೆ ವಹಿಸಿದ್ದ ಮತ್ತೋರ್ವ ಆರೋಪಿ ಫೂಲ್‌ಬಾಗ್‌ನ ಫಾಹಿಮಾ ತಲೆಮರೆಸಿಕೊಂಡಿದ್ದಾಳೆ.

ಉಡುಪಿ ಜಿ.ಪಂ.ಗೆ ನಾನಾಜಿ ದೇಶ್‌ಮುಖ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಉಡುಪಿ: ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಇಲಾಖೆಯಿಂದ ನೀಡುವ 'ನಾನಾಜಿ ದೇಶ್‌ಮುಖ್ ಸರ್ವೋತ್ತಮ ಸತತ್ ವಿಕಾಸ್ ಪುರಸ್ಕಾರ'ಕ್ಕೆ ಉಡುಪಿಯ ಜಿಲ್ಲಾ ಪಂಚಾಯಿತಿ ಭಾಜನವಾಗಿದೆ.

ಪ್ರಶಸ್ತಿಯು ₹2 ಕೋಟಿ ನಗದು ಒಳಗೊಂಡಿದ್ದು, ದೇಶದಲ್ಲಿ ಉಡುಪಿ ಜಿಲ್ಲಾ ಪಂಚಾಯಿತಿ ಮೂರನೇ ಸ್ಥಾನವನ್ನು ಪಡೆದಿದೆ.

ಡಿ.11 ರಂದು ದೆಹಲಿಯ ವಿಜ್ಞಾನ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ರತೀಕ್ ಬಾಯಲ್ ಹಾಗೂ ಅಧಿಕಾರಿಗಳ ತಂಡ ಪ್ರಶಸ್ತಿ ಸ್ವೀಕರಿಸಲಿದೆ.

ತ್ರಿಪುರಾದ ಗೋಮತಿ ಜಿಲ್ಲೆ ಪ್ರಥಮ ಮತ್ತು ಒಡಿಶಾದ ಕೊರಾಪುಟ್ ಜಿಲ್ಲೆ ದ್ವಿತೀಯ ಸ್ಥಾನ ಪಡೆದಿವೆ.



ಸುಭಾಷಿತ

ಜಯ ಸಿದ್ಧಿಸುವುದು ಅದಕ್ಕಾಗಿ ಬೆಲೆ ತೆರಲು ಯಾರು ಸಿದ್ಧರಿರುತ್ತಾರೋ ಅವರಿಗೆ.

-ಸುನ್ ಝು

ಸಿರಿಯಾದಲ್ಲಿ ನಿರಂಕುಶಾಡಳಿತ ಅಂತ್ಯ ಜನಪರ ಸರ್ಕಾರ ಈಗಿನ ತುರ್ತು

ಸಿರಿಯಾದಲ್ಲಿ ಬಶರ್ ಅಲ್ ಅಸಾದ್ ನೇತೃತ್ವದ ಸರ್ಕಾರ ಪತನಗೊಂಡಿದೆ. ಬಶರ್ ಅವರು ರಷ್ಯಾದ ಗೋಪ್ಯ ಸ್ಥಳವೊಂದಕ್ಕೆ ಪಲಾಯನ ಮಾಡಿದ್ದಾರೆ. ಅವರು ತಮ್ಮ ದೇಶದಲ್ಲಿ ಇರುವುದನ್ನು ರಷ್ಯಾ ದೃಢಪಡಿಸಿದೆ. ಹತ್ತು ದಿನಗಳಿಂದ ಹೋರಾಟ ತೀವ್ರಗೊಂಡಿತ್ತು. ಸಿರಿಯಾದ ಅತಿದೊಡ್ಡ ನಗರ ಅಲೆಪ್ಪೊವನ್ನು ಹೋರಾಟಗಾರರು ಮೊದಲಿಗೆ ವಶಕ್ಕೆ ಪಡೆದರು. ನಂತರ ಹಮಾ ಮತ್ತು ಹೊಮ್ಸ್ ನಗರಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡರು. ಹೋರಾಟಗಾರರು ಭಾನುವಾರ ಮುಂಜಾನೆ ಮಿಂಚಿನ ವೇಗದಲ್ಲಿ ರಾಜಧಾನಿ ಡಮಾಸ್ಕಸ್ ನಗರವನ್ನು ಹೊಕ್ಕು ಕೆಲ ಹೊತ್ತಿನಲ್ಲಿಯೇ ನಗರದ ಮೇಲೆ ಅಧಿಪತ್ಯ ಸ್ಥಾಪಿಸಿದರು. ಸರ್ಕಾರದ ಪರ ಸೈನಿಕರು ಪ್ರತಿರೋಧವನ್ನೇ ಒಡ್ಡದೆ ಹಿಂದಕ್ಕೆ ಸರಿದ ಕಾರಣ ರಕ್ತ ಹರಿಯದೆಯೇ ಕ್ರಾಂತಿ ನಡೆಯಿತು. 2011ರಲ್ಲಿ ವಿದ್ಯಾರ್ಥಿಗಳು ಆರಂಭಿಸಿದ 'ಅರಬ್ ವಸಂತ' ಎಂಬ ಹೋರಾಟವು ಈಗ ತಾರ್ಕಿಕ ಅಂತ್ಯ ಕಂಡಿದೆ. 2011ರಲ್ಲಿ ಹೋರಾಟವನ್ನು ಬಶರ್ ನಿರ್ದಯವಾಗಿ ಹತ್ತಿಕ್ಕಿದ್ದರು. ಆ ಬಳಿಕ ದಮನಕಾರಿ ಆಳ್ವಿಕೆಯು ಮತ್ತಷ್ಟು ಬಿರುಸು ಪಡೆದುಕೊಂಡಿತ್ತು. 2000ನೇ ಇಸವಿಯಲ್ಲಿ ಅಧಿಕಾರಕ್ಕೆ ಏರಿದ ಬಶರ್, ಆರಂಭದಲ್ಲಿ ಸುಧಾರಣಾವಾದಿ ಎಂಬಂತೆ ತಮ್ಮನ್ನು ಬಿಂಬಿಸಿಕೊಂಡಿದ್ದರು. ಆದರೆ, 2011ರಲ್ಲಿ ಅವರ ವಿರುದ್ಧ ಹೋರಾಟ ತೀವ್ರಗೊಂಡ ಬಳಿಕ, ಶಾಂತಿಯುತ ಹೋರಾಟಗಾರರ ವಿರುದ್ಧ ಸೇನೆಯನ್ನು ಬಳಸಿಕೊಂಡರು. ನಂತರ ಆಂತರಿಕ ಸಂಘರ್ಷ ನಿಲ್ಲಲೇ ಇಲ್ಲ. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಹೈಕಮಿಷನರ್ ಕಚೇರಿಯ ಮಾಹಿತಿ ಪ್ರಕಾರ, ಈ 13 ವರ್ಷಗಳ ಆಂತರಿಕ ಯುದ್ಧದಲ್ಲಿ ಸುಮಾರು ಆರು ಲಕ್ಷ ಮಂದಿ ಜೀವ ಕಳೆದುಕೊಂಡಿದ್ದಾರೆ; ಅವರಲ್ಲಿ ಹೆಚ್ಚಿನವರು ನಾಗರಿಕರು. ಗ್ಲೋಬಲ್ ಸೆಂಟರ್ ಫಾರ್ ದಿ ರೆಸ್ಪಾನ್ಸಿಬಿಲಿಟಿ ಟು ಪ್ರೊಟೆಕ್ಟ್ ಸಂಸ್ಥೆಯ ಪ್ರಕಾರ, 1.3 ಕೋಟಿ ಜನ ನೆಲೆ ಕಳೆದುಕೊಂಡಿದ್ದಾರೆ. ಬಶರ್ ಆಳ್ವಿಕೆ ಮತ್ತು ಆಂತರಿಕ ಯುದ್ಧವು ಸಾಮಾನ್ಯ ಜನರ ಜೀವನಕ್ಕೆ ಬೆಲೆ ಇಲ್ಲದಂತೆ ಮಾಡಿದ್ದವು ಮತ್ತು ಜೀವನವನ್ನು ನರಕವಾಗಿಸಿದ್ದವು. 1971ರಲ್ಲಿ ಆರಂಭಗೊಂಡ ಅಸಾದ್ ಕುಟುಂಬದ ನಿರಂಕುಶಾಡಳಿತವು ಈಗ ಕೊನೆಗೊಂಡಿದೆ. ಜನ ನಿಟ್ಟುಸಿರುಬಿಟ್ಟಿದ್ದಾರೆ ಮತ್ತು ಸಂಭ್ರಮ ಆಚರಿಸಿದ್ದಾರೆ.



ಭಯೋತ್ಪಾದಕರು, ಮೂಲಭೂತವಾದವನ್ನು ದೂರ ಇರಿಸಿ, ಜನಪರವಾದ ಪ್ರಜಾಪ್ರಭುತ್ವಾತ್ಮಕ ಸರ್ಕಾರ ರಚನೆಯಾದರೆ ಸಿರಿಯಾದಲ್ಲಿ ಸ್ಥಿರತೆ ಸಾಧ್ಯವಾಗಬಹುದು

ಸಿರಿಯಾದಲ್ಲಿ ನಡೆದ ಸಂಘರ್ಷವು ಅತ್ಯಂತ ಸಂಕೀರ್ಣವಾದುದಾಗಿತ್ತು. ನಾಗರಿಕ ಸಂಘಟನೆಗಳು, ಮೂಲಭೂತವಾದಿ ಗುಂಪುಗಳು, ಭಯೋತ್ಪಾದಕ ಸಂಘಟನೆಗಳು, ಅಲ್ ಕೈದಾ ಮತ್ತು 'ಇಸ್ಲಾಮಿಕ್ ಸ್ಟೇಟ್'ನಂತಹ ಸಂಘಟನೆಗಳು, ಅಮೆರಿಕ, ರಷ್ಯಾ, ಇರಾನ್ ದೇಶಗಳು ಈ ಸಂಘರ್ಷದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಭಾಗಿಯಾಗಿದ್ದವು. ಹೋರಾಟದ ಮುಂಚೂಣಿಯಲ್ಲಿದ್ದ ಹಯಾತ್ ತಹ್ರೀರ್ ಅಲ್ ಶಾಮ್ ಸಂಘಟನೆಗೆ ಮೊದಲಿಗೆ 'ಇಸ್ಲಾಮಿಕ್ ಸ್ಟೇಟ್' ಜೊತೆಗೆ, ಬಳಿಕ ಅಲ್ ಕೈದಾ ಜೊತೆಗೆ ನಂಟು ಇತ್ತು. ಹೋರಾಟದ ನಾಯಕತ್ವ ವಹಿಸಿದ್ದ ಅಬು ಮೊಹಮ್ಮದ್ ಅಲ್ ಗೊಲಾನಿ ಉಗ್ರಗಾಮಿ ಸಂಘಟನೆಗಳ ಜೊತೆಗೆ ನಿಕಟ ಸಂಪರ್ಕ ಇಟ್ಟು, ಭಯೋತ್ಪಾದನೆಗೆ ಸಂಬಂಧಿಸಿದ ಆರೋಪದಲ್ಲಿ ಇವರು ಅಮೆರಿಕದ ಸೆರೆಮನೆಯಲ್ಲಿಯೂ ಇದ್ದರು. ಸಿರಿಯಾ ಸುತ್ತಲಿನ ಹಲವು ದೇಶಗಳಲ್ಲಿ ಭಯೋತ್ಪಾದಕ ಗುಂಪುಗಳು ಗಟ್ಟಿಯಾಗಿ ನೆಲೆಯೂರಿವೆ. ಈಗ, ಸಿರಿಯಾದ ಸ್ಥಿತಿ ಅಸ್ಪಷ್ಟವಾಗಿದೆ. ಬಶರ್‌ಗೆ ಗಟ್ಟಿ ಬೆಂಬಲ ನೀಡಿದ್ದ ರಷ್ಯಾ ಮತ್ತು ಇರಾನ್ ಸದ್ಯಕ್ಕೆ ಸುಮ್ಮನಿವೆ. ಈ ದೇಶಗಳ ಮುಂದಿನ ನಡೆ ಏನು ಎಂಬುದು ಗೊತ್ತಿಲ್ಲ. ಬಶರ್ ನೇತೃತ್ವದ ಸರ್ಕಾರದ ಪತನವು ರಷ್ಯಾಕ್ಕೆ ಬಿದ್ದ ಹೊಡೆತ ಎಂದೂ ಬಣ್ಣಿಸಲಾಗುತ್ತಿದೆ. ಶಾಮ್ ಸಂಘಟನೆಯು ಮೂಲಭೂತವಾದಿ ಸಿದ್ಧಾಂತ ಹೊಂದಿದೆ ಎಂದು ಹೇಳಲಾಗುತ್ತಿದೆ. ಸಿರಿಯಾದಲ್ಲಿ ಯಾವ ರೀತಿಯ ಸರ್ಕಾರ ರಚನೆಯಾಗಲಿದೆ ಎಂಬುದರ ಬಗ್ಗೆ ಯಾರಿಗೂ ಸ್ಪಷ್ಟತೆ ಇಲ್ಲ. ಭಯೋತ್ಪಾದಕರನ್ನು, ಮೂಲಭೂತವಾದವನ್ನು ದೂರ ಇರಿಸಿ, ಜನಪರವಾದ ಪ್ರಜಾಪ್ರಭುತ್ವಾತ್ಮಕ ಸರ್ಕಾರ ರಚನೆಯಾದರೆ ಅಲ್ಲಿ ಸ್ಥಿರತೆ ಸಾಧ್ಯವಾಗಬಹುದು. ಅರ್ಧ ಶತಮಾನ ನಿರಂಕುಶಾಡಳಿತದಿಂದ ಬಳಲಿರುವ ಆ ದೇಶದ ಜನರಿಗೆ ಇನ್ನು ಮುಂದೆಯಾದರೂ ನೆಮ್ಮದಿಯ ಬದುಕು ದೊರೆಯಬಹುದು. ಶಾಮ್ ಸಂಘಟನೆಯು ಅಲ್ ಕೈದಾದ ನಂಟು ಕಡಿದುಕೊಂಡ ಬಳಿಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ವೀಕಾರಾರ್ಹತೆ ಪಡೆದುಕೊಳ್ಳುವ ಪ್ರಯತ್ನ ಮಾಡಿದೆ. ಗೊಲಾನಿ ಕೂಡ ಭಯೋತ್ಪಾದಕ ಗುಂಪುಗಳಿಂದ ಅಂತರ ಕಾಯ್ದುಕೊಂಡು ಬಂದಿದ್ದಾರೆ. ಸಿರಿಯಾದ ಸಂಕೀರ್ಣ ಸ್ಥಿತಿಯಲ್ಲಿ ಇದು ಈಗ ಕಾಣಿಸುವ ಬೆಳ್ಳಿರೇಖೆಯಾಗಿದೆ.

ದಿನದ ಟ್ವೀಟ್

ಲೂಟಿಗೆ ಕಾಯುತ್ತಿರುತ್ತಾರೆ...



ಟೋಲ್ ಪ್ಲಾಜಾಗಳು ಟೋಲ್ ಸಂಗ್ರಹಿಸಬಾರದು ಎಂದಿದ್ದರೂ ಅವು ಆ ಕಾರ್ಯವನ್ನು ಮುಂದುವರಿಸಿವೆ. ಇಲ್ಲೊಂದು ರಾಷ್ಟ್ರೀಯ ಹೆದ್ದಾರಿಯಲ್ಲಿ ಟೋಲ್ ರಸ್ತೆಯ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವ ಮೊದಲೇ ಟೋಲ್ ಸಂಗ್ರಹ ಕಾರ್ಯ ಆರಂಭವಾಗಿತ್ತು. ಅದೃಷ್ಟವಶಾತ್, ನಾಗರಿಕರು ಅದರ ವಿರುದ್ಧ ಹೋರಾಡಿದರು. ರಾಜಕಾರಣಿಗಳು– ವ್ಯಾಪಾರೋದ್ಯಮಿಗಳ ನಂಟು ನಿಮ್ಮನ್ನು ಲೂಟಿ ಹೊಡೆಯಲು ಕಾಯುತ್ತಿರುತ್ತದೆ.

ಮನೋಜ್ ಅರೋರ, ಲೇಖಕ

ಕಿಡಿನುಡಿ



ಹವಾನಿಯಂತ್ರಿತ ಕಚೇರಿಯಲ್ಲಿ ಕೂರುವ ಅಧಿಕಾರಿಗಳು ಗ್ರಾಮಕ್ಕೆ ಬಂದಾಗ, ಶೇಂಗಾ ಎಲ್ಲಿ ಎಂದು ಮೇಲೆ ನೋಡುತ್ತಾರೆ. ನೆಲದಡಿ ಇರುತ್ತದೆ ಎಂಬುದೂ ಗೊತ್ತಿರುವುದಿಲ್ಲ. ಅಂತಹವರು ಸರ್ಕಾರದ ನೀತಿ ರೂಪಿಸುತ್ತಿರುವುದು ದುರ್ದೈವದ ಸಂಗತಿ.

ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ, ಕೊಲ್ಹಾಪುರ ಕನೇರಿ ಮಠ

25 ವರ್ಷಗಳ ಹಿಂದೆ

ಶುಕ್ರವಾರ, 10-12-1999

● ವಿವಾದಾತ್ಮಕ ಪಡುಬಿದ್ರಿ ವಿದ್ಯುತ್ ಯೋಜನೆ ಕೈಬಿಟ್ಟ ಕೊಜೆಂಟ್ರಿಕ್ಸ್

ಬೆಂಗಳೂರು, ಡಿ. 9– ತೀವ್ರ ವಿವಾದಕ್ಕೆ ಒಳಗಾಗಿದ್ದ, ಮಂಗಳೂರಿನ ಪಡುಬಿದ್ರಿ ಬಳಿ ನಿರ್ಮಾಣ ಹಂತದಲ್ಲಿದ್ದ 1.3 ಶತಕೋಟಿ ಡಾಲರ್ ವೆಚ್ಚದ ವಿದ್ಯುತ್ ಉತ್ಪಾದನಾ ಯೋಜನೆಯನ್ನು ಕೈಬಿಡಲು ಅಮೆರಿಕದ ಬಹುರಾಷ್ಟ್ರೀಯ ಕೊಜೆಂಟ್ರಿಕ್ಸ್ ಸಂಸ್ಥೆ ನಿರ್ಧರಿಸಿದೆ.

ಈ ಸಂಸ್ಥೆಯ ಮಂಗಳೂರು ಘಟಕದ ವ್ಯವಸ್ಥಾಪಕ ನಿರ್ದೇಶಕ ರಾನ್ ಸೋಮರ್ಸ್ ಇಂದು ಪತ್ರಿಕಾ ಪ್ರಕಟಣೆ ನೀಡಿ, ಸರ್ಕಾರದಿಂದ ನಿರ್ಮಾಣಕ್ಕೆ ದೊರೆಯಬೇಕಿದ್ದ ಅನುಮತಿ ಹಾಗೂ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳಿಂದ ಯೋಜನೆಯ ಆರಂಭಕ್ಕೆ ಧಕ್ಕೆಯಾಗಿತ್ತು. ಜೊತೆಗೆ ಒಂದು ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಈ ಯೋಜನೆ ವಿಳಂಬ ಪ್ರಕ್ರಿಯೆಯಿಂದಾಗಿ ಲಾಭದಾಯಕವಲ್ಲ ಎನ್ನುವ ಕಾರಣದಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ತಿಳಿಸಿದ್ದಾರೆ.

● ಮುಚ್ಚಲಿರುವ ನಾಡಕಚೇರಿ

ಬೆಂಗಳೂರು, ಡಿ. 9 – ಹೋಬಳಿ ಮಟ್ಟದಲ್ಲಿರುವ ನಾಡಕಚೇರಿಗಳನ್ನು ರದ್ದು ಪಡಿಸುವ ವಿಚಾರ ಸರ್ಕಾರದ ಗಂಭೀರ ಪರಿಶೀಲನೆಯಲ್ಲಿದೆ ಎಂದು ಕಂದಾಯ ಸಚಿವ ಎಚ್.ಸಿ. ಶ್ರೀಕಂಠಯ್ಯ ಅವರು ಹೇಳಿದರು.

'ಅಧಿಕಾರ ವಿಕೇಂದ್ರೀಕರಣವಾದರೆ ಗ್ರಾಮೀಣ ಪ್ರದೇಶದ ಜನರಿಗೆ ಹೆಚ್ಚು ಅನುಕೂಲವಾಗಬಹುದು ಎಂಬ ಉದ್ದೇಶದಿಂದ ಹೋಬಳಿ ಮಟ್ಟದಲ್ಲಿ ನಾಡಕಚೇರಿಗಳನ್ನು ಪ್ರಾರಂಭಿಸಲಾಯಿತು. ಆದರೆ ಇದುವರೆಗಿನ ಅನುಭವದ ಪ್ರಕಾರ ನಾಡಕಚೇರಿಗಳಿಂದ ಜನರಿಗೆ ಅನುಕೂಲಕ್ಕಿಂತ ಅನನುಕೂಲವೇ ಹೆಚ್ಚಾಗಿದೆ; ಈ ಹಿನ್ನೆಲೆಯಲ್ಲಿ ನಾಡಕಚೇರಿ ವ್ಯವಸ್ಥೆಯನ್ನೇ ರದ್ದುಪಡಿಸುವ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತಿದೆ' ಎಂದು ಅವರು ವರದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 10-12-1974

● ಅಸಂಖ್ಯಾತರ ಮೂಕವೇದನೆಗೆ ಧ್ವನಿ ಕಡಿದಾಳರ ಹೊಸ ಪಕ್ಷದ ಗುರಿ

ಬೆಂಗಳೂರು, ಡಿ. 9 – ಏನು ಬೇಕು ಅನ್ನುವುದನ್ನು ಹೇಳಿಕೊಂಡು ಪಕ್ಷಗಳನ್ನು ಕಟ್ಟುವವರೇ ಹೆಚ್ಚು. ಇನ್ನೂ ಹೆಸರಿಡದಿರುವ ಕಡಿದಾಳರ ಪಕ್ಷ ತದ್ವಿರುದ್ಧ.

'ನಮ್ಮ ಮೊದಲ ಕಾರ್ಯ ಜನರಿಗೆ ತಿಳಿವಳಿಕೆ ನೀಡುವುದು'.

ಏನು ತಿಳಿವಳಿಕೆ?

'ಭ್ರಷ್ಟರಿಗೆ ಮತ ನೀಡಬೇಡಿ ಎಂದು ಪ್ರಚಾರ ಮಾಡುವುದು'.

'ನಮ್ಮ ಪಕ್ಷ ತಾತ್ವಿಕ ಆಧಾರದ ಮೇಲೆ ಬೆಳೆದು ಬಲಗೊಳ್ಳುವವರೆಗೆ' ತಮ್ಮ ಪಕ್ಷದ ಕಾರ್ಯ ಚಟುವಟಿಕೆ ಬಹುಮಟ್ಟಿಗೆ ಈ ಉದ್ದೇಶಕ್ಕೇ ಮೀಸಲು ಅನ್ನುತ್ತಾರೆ ಕಡಿದಾಳ್ ಮಂಜಪ್ಪನವರು.

ಅಧಿಕಾರವೇ ಗುರಿಯಲ್ಲ ಅನ್ನುತ್ತಾರವರು.

ಪ್ರಶ್ನೆ:– ಇಷ್ಟೊಂದು ಪಕ್ಷಗಳು ಹುಟ್ಟಿಸಾಯುತ್ತಿವೆ. ನಿಮ್ಮ ಈ ಪಕ್ಷ ಯಶಸ್ವಿಯಾಗುವುದೆಂಬ ನಿಮ್ಮ ವಿಶ್ವಾಸಕ್ಕೆ ಆಧಾರವೇನು?

ಕಡಿದಾಳ್: ನಮ್ಮ ಪಕ್ಷದ ವೈಶಿಷ್ಟ್ಯ ಅಂದರೆ ಅಧಿಕಾರವೇ ಗುರಿಯಾಗದಿರುವುದು.

ಪ್ರಶ್ನೆ:– ಅಧಿಕಾರವೇ ತಮ್ಮ ಗುರಿಯಲ್ಲವೆಂದು ಎಲ್ಲ ಪಕ್ಷಗಳೂ ಹೇಳಿಕೊಳ್ಳುತ್ತವೆಯಲ್ಲವೆ?

ಉ: ಹೇಳಿಕೊಳ್ಳಬಹುದು. ಮಾಡುತ್ತಿರುವುದೇನು?

ಪ್ರತಿಭೆ ಇದ್ದರೂ ಅಶಿಸ್ತು ಮೈಗೂಡಿದರೆ ಯಶಸ್ಸು ಕೈಜಾರಬಲ್ಲದು ಎಂಬ ಪಾಠ ನಮ್ಮ ಮುಂದಿದೆ

ದೌರ್ಬಲ್ಯ ಮೀರಿ ನಿಲ್ಲದಿದ್ದರೆ...



ವಿಶ್ಲೇಷಣೆ

ಗಿರೀಶ ದೊಡ್ಡಮನಿ

1993ರ ಬೇಸಿಗೆಯ ಧಗೆಗೆ ವಾಂಖೆಡೆ ಕ್ರೀಡಾಂಗಣದಲ್ಲಿದ್ದವರ ನೆತ್ತಿ ಸುಡುತ್ತಿತ್ತು. ಎಲ್ಲರ ಮೈಯಿಂದ ಧಾರಾಕಾರವಾಗಿ ಬೆವರು ಸುರಿಯುತ್ತಿತ್ತು. ಆದರೂ ಅಲ್ಲಿಂದ ಯಾರೂ ಸರಿಯಲಿಲ್ಲ. ಏಕೆಂದರೆ, ದಶಕಗಳ ನಂತರ ಕ್ರಿಕೆಟ್‌ಪ್ರೇಮಿಗಳಿಗೆ ಭಾರತೀಯ ಎಡಗೈ ಬ್ಯಾಟರ್ ಒಬ್ಬರ ಆಟವನ್ನು ಕಣ್ತುಂಬಿಕೊಳ್ಳುವ ಅವಕಾಶ ಅದಾಗಿತ್ತು. ಭಾರತದ ಮಟ್ಟಿಗೆ ಸ್ಟೈಲಿಷ್ ಎಡಗೈ ಬ್ಯಾಟರ್‌ಗಳು ಅಪರೂಪವೆಂಬಂತಿದ್ದ ಕಾಲದಲ್ಲಿ 'ಮುಂಬೈಕರ್' ವಿನೋದ್ ಕಾಂಬ್ಳಿ ತಮ್ಮ ಬಿರುಸಿನ ಆಟದಿಂದ ಎಲ್ಲರ ಹೃದಯ ತಟ್ಟಿಬಿಟ್ಟಿದ್ದರು. ತಮ್ಮ ತವರು ವಾಂಖೆಡೆಯಲ್ಲಿ ಇಂಗ್ಲೆಂಡ್ ಎದುರು ದ್ವಿಶತಕ ಸಿಡಿಸಿದ್ದ ಕಾಂಬ್ಳಿ, ಒಂದು ತಿಂಗಳ ನಂತರ ದೆಹಲಿಯ ಫಿರೋಜ್ ಶಾ ಕೋಟ್ಲಾದಲ್ಲಿ ಜಿಂಬಾಬ್ವೆ ಎದುರೂ 227 ರನ್ ಬಾರಿಸಿಬಿಟ್ಟರು. ಮುಂಬೈ ನಗರಿಯ ಪುಟ್ಟ ಗಲ್ಲಿಯೊಂದರ ನಿವಾಸಿ ಸತತ ಎರಡು ದ್ವಿಶತಕ ಹೊಡೆಯುವ ಮೂಲಕ ವಿಶ್ವದ ಗಮನ ಸೆಳೆದರು.

ದೀಪಕ್ ಶೋಧನ್, ನರೀಮನ್ ಕಾಂಟ್ರಾಕ್ಟರ್ ಮತ್ತು ಅಜಿತ್ ವಾಡೇಕರ್ ಅವರ ನಂತರ ಭಾರತಕ್ಕೆ ಎಡಗೈ ಬ್ಯಾಟರ್ ಲಭಿಸಿದ ಖುಷಿಯ ಸಂದರ್ಭ ಅದು. ಸಚಿನ್ ತೆಂಡೂಲ್ಕರ್ ಜೊತೆಗೆ ಶಾಲಾ ಕ್ರಿಕೆಟ್‌ನಲ್ಲಿ ವಿಶ್ವದಾಖಲೆ ಬರೆದಿದ್ದ ವಿನೋದ್ ಕೂಡ ರಮಾಕಾಂತ ಆಚ್ರೇಕರ್ ಕ್ರಿಕೆಟ್ ಶಾಲೆಯ ವಿದ್ಯಾರ್ಥಿ. ಸಚಿನ್ ಮತ್ತು ವಿನೋದ್ ಇಬ್ಬರಿಗೂ ತಮ್ಮಲ್ಲಿದ್ದ ಎಲ್ಲ ಕೌಶಲಗಳನ್ನೂ ಧಾರೆಯೆರೆದವರು ಆಚ್ರೇಕರ್. ಇತ್ತೀಚೆಗೆ ಆಚ್ರೇಕರ್ ಅವರ ಸ್ಮಾರಕ ಅನಾವರಣ ಕಾರ್ಯಕ್ರಮದಲ್ಲಿ ಸಚಿನ್ ಮತ್ತು ವಿನೋದ್ ಭೇಟಿಯಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.

ಪ್ರತಿಭೆ ಮತ್ತು ಪರಿಶ್ರಮದಿಂದ ಜೀವನದಲ್ಲಿ ಯಾರು ಬೇಕಾದರೂ ಯಶಸ್ಸು ಸಾಧಿಸಬಹುದು. ಆದರೆ ಆ ಯಶಸ್ಸು ತಂದುಕೊಡುವ ಕೀರ್ತಿಯನ್ನು ಕಾಪಾಡಿಕೊಳ್ಳುವುದು ಮತ್ತು ಯಶಸ್ಸನ್ನು ನಿಭಾಯಿಸುವುದು ದೊಡ್ಡ ಸವಾಲು. ಅದಕ್ಕೆ ಕಟ್ಟುನಿಟ್ಟಾದ ಶಿಸ್ತು, ಸಂಯಮ ಮತ್ತು ಪ್ರಬುದ್ಧತೆ ಬೇಕಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ದೌರ್ಬಲ್ಯಗಳನ್ನು ಮೀರಿ ನಿಲ್ಲುವ ಗುಣ ಬೆಳೆಸಿಕೊಳ್ಳಬೇಕಾಗುತ್ತದೆ. ಹಣ, ಹೆಸರು ಬಂದಾಗ ಅಹಂಕಾರ, ವಿಲಾಸಿ ಜೀವನಕ್ಕೆ ಮಾರು ಹೋಗುವವರೇ ಹೆಚ್ಚು. ಇದನ್ನು ಮೀರಿ ನಿಂತ ಸಚಿನ್ ಅಭಿಮಾನಿಗಳ ಕಣ್ಮಣಿಯಾದರು. ಆದರೆ ವಿನೋದ್ ಕುಡಿತ, ಅಶಿಸ್ತಿನ ಜೀವನ, ಅಹಂಕಾರದಿಂದಾಗಿ ಪ್ರಪಾತಕ್ಕೆ ಕುಸಿದರು. ಇವರಿಬ್ಬರ ಜೀವನವೂ ಯುವ ಪೀಳಿಗೆಯ ಕ್ರೀಡಾಪಟುಗಳಿಗೆ ಒಂದು ಪಾಠ. ಆಚ್ರೇಕರ್ ಅವರೇ ಒಂದು ಸಂದರ್ಭದಲ್ಲಿ ಹೇಳಿದ್ದಂತೆ, ವಿನೋದ್ ಅವರು ಸಚಿನ್‌ಗಿಂತಲೂ ಚೆನ್ನಾಗಿ ಆಡಬಲ್ಲ ಕೌಶಲವುಳ್ಳವರಾಗಿದ್ದರು. ಆಗೇನಾದರೂ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿ ಇದ್ದಿದ್ದರೆ ಬಹುಶಃ ವಿನೋದ್ ಕೂಡ ದಾಖಲೆ ಮೊತ್ತ ಗಳಿಸುತ್ತಿದ್ದರೇನೊ?

ವಿನೋದ್ ಅವರು ಸಿನಿಮಾ, ಕ್ರಿಕೆಟ್ ಕೋಚಿಂಗ್ ಮತ್ತಿತರ ಕ್ಷೇತ್ರಗಳಲ್ಲಿಯೂ ತಮ್ಮ ಅದೃಷ್ಟ ಪರೀಕ್ಷಿಸಿಕೊಂಡರು. ಯಾವುದೂ ಕೈಹಿಡಿಯಲಿಲ್ಲ. ಎರಡು ಮದುವೆಗಳೂ ವಿಫಲವಾದವು. 52 ವರ್ಷ ವಯಸ್ಸಿನ ವಿನೋದ್ ಈಗ ಅನಾರೋಗ್ಯಕ್ಕೂ ತುತ್ತಾಗಿದ್ದಾರೆ. ಆರ್ಥಿಕವಾಗಿ ಜರ್ಜರಿತರಾಗಿದ್ದಾರೆ. ಬಿಸಿಸಿಐ ನೀಡುವ ನಿವೃತ್ತಿ ವೇತನವೊಂದೇ ಆಸರೆ ಎಂದು ಅವರ ಆಪ್ತರು ಹೇಳುತ್ತಾರೆ. ಇದೀಗ 1983ರ ವಿಶ್ವಕಪ್ ವಿಜೇತ ತಂಡವು ವಿನೋದ್ ಅವರಿಗೆ ಸಹಾಯಹಸ್ತ ಚಾಚಲು ಮುಂದಾಗಿದೆ. 'ವಿನೋದ್ ನನ್ನ ಮಗ ಇದ್ದಂತೆ. ಆತನಿಗೆ ಎಲ್ಲ ರೀತಿಯ ಸಹಾಯ ಮಾಡಲು ನಾವು ಸಿದ್ಧರಿದ್ದೇವೆ' ಎಂದು ಸುನಿಲ್ ಗಾವಸ್ಕರ್ ಹೇಳಿದ್ದಾರೆ. ಆದರೆ ಈ ಅವಕಾಶವನ್ನು ಕಾಂಬ್ಳಿ ಸಕಾರಾತ್ಮಕವಾಗಿ ಬಳಸಿಕೊಳ್ಳುವರೇ?

ಕಾಂಬ್ಳಿ ಕಾಲಘಟ್ಟಕ್ಕೂ ಈಗಿನ ಕ್ರಿಕೆಟ್‌ಗೂ ಅಜಗಜಾಂತರ ಇದೆ. ಈಗಿನ ಕ್ರಿಕೆಟಿಗರಿಗೆ ಪ್ರತಿ ಹೆಜ್ಜೆಗೂ ಮಾರ್ಗದರ್ಶನ ಪಡೆಯುವ ಅನೇಕ ಸೌಲಭ್ಯಗಳು ಇವೆ. ಆದರೂ ಅಶಿಸ್ತಿನ ವರ್ತನೆಗಳು ತಪ್ಪಿಲ್ಲ. ಈ ಮಾತಿಗೆ ತಾಜಾ ಉದಾಹರಣೆ ಪೃಥ್ವಿ ಶಾ ಅವರದ್ದು. ಆರು ವರ್ಷಗಳ ಹಿಂದೆ 19 ವರ್ಷದೊಳಗಿನವರ ವಿಶ್ವಕಪ್ ಗೆದ್ದ ಭಾರತ ತಂಡದ ನಾಯಕತ್ವ ವಹಿಸಿದ್ದರು. ಟೆಸ್ಟ್ ಕ್ರಿಕೆಟ್‌ನಲ್ಲಿಯೂ ದಾಖಲೆ ಬರೆದರು. ಆದರೆ ಅವರೂ ಹಾದಿ ತಪ್ಪಿದರು. ಉದ್ದೀಪನ ಮದ್ದು ಪ್ರಕರಣದಲ್ಲಿ ಸಿಕ್ಕಿಕೊಂಡರು. ಮುಂಬೈನ ರಸ್ತೆಯಲ್ಲಿಯೇ ಜಗಳವಾಡಿಕೊಂಡು ಪೊಲೀಸ್ ಠಾಣೆ ಮೆಟ್ಟಿಲು ಕೂಡ ಹತ್ತಿದರು. ಅದೆಲ್ಲದರ ನಡುವೆ ತಮ್ಮ ಫಿಟ್‌ನೆಸ್ ಕಳೆದುಕೊಂಡರು. ಆದರೂ ಕೆಲವು ಹಿತೈಷಿಗಳ ಮಾರ್ಗದರ್ಶನದಿಂದಾಗಿ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಪುನಶ್ಚೇತನ ಶಿಬಿರದಲ್ಲಿ ಭಾಗವಹಿಸಿ ಮರಳಿ ಫಿಟ್ ಆದರು. ಮುಂಬೈ ತಂಡ ಮತ್ತು ಐಪಿಎಲ್‌ನಲ್ಲಿ ಆಡಿದರು. ಆದರೆ ಈಚೆಗೆ ಮತ್ತೆ ಸುದ್ದಿಯಾದರು. ರಣಜಿ ಟ್ರೋಫಿ ಟೂರ್ನಿಯ ತಾಲೀಮಿನ ಸಂದರ್ಭದಲ್ಲಿ ಅಶಿಸ್ತು ತೋರಿದ ಕಾರಣಕ್ಕೆ ಎರಡು ಪಂದ್ಯಗಳಿಂದ ಹೊರಗುಳಿಯಬೇಕಾಯಿತು. ಇಷ್ಟೇ ಸಾಲದು ಎಂಬಂತೆ, ಈಚೆಗೆ ನಡೆದ ಐಪಿಎಲ್ ಮೆಗಾ ಹರಾಜಿನಲ್ಲಿ ಅವರನ್ನು ಯಾವ ತಂಡವೂ ಖರೀದಿಸಲಿಲ್ಲ. 25 ವರ್ಷ ವಯಸ್ಸಿನ ಪೃಥ್ವಿ ಮತ್ತು ಕಾಂಬ್ಳಿ ಅವರ ಜೀವನವನ್ನು ಹೋಲಿಕೆ ಮಾಡಿ ಚರ್ಚೆ ನಡೆಯುತ್ತಿದೆ.

'ವಿನೋದ್ ಮತ್ತು ಪೃಥ್ವಿ ಪ್ರತಿಭಾನ್ವಿತ ಆಟಗಾರರು. ಒಬ್ಬ ಯಶಸ್ವಿ ಆಟಗಾರನಾಗಬೇಕಾದರೆ ಬಹಳಷ್ಟು ತ್ಯಾಗಗಳನ್ನೂ ಮಾಡಬೇಕಾಗುತ್ತದೆ. ಅದಕ್ಕೆ ಸ್ವಯಂ ನಿಯಂತ್ರಣ ಮುಖ್ಯ. ಅವರಿಬ್ಬರ ವೈಯಕ್ತಿಕ ಜೀವನದಲ್ಲಿ ಏನಾಗಿದೆ ಎಂಬುದು ನಮಗೆ ಗೊತ್ತಿಲ್ಲ. ಮದ್ಯವ್ಯಸನದಿಂದ ಮುಕ್ತರಾಗಲು ಕಾಂಬ್ಳಿ ಅವರನ್ನು 16 ಬಾರಿ ಪುನಶ್ಚೇತನ ಶಿಬಿರಕ್ಕೆ ಕಳಿಸಲಾಗಿತ್ತಂತೆ. ಈಗ ಅವರು ಎಲ್ಲವನ್ನೂ ಬಿಟ್ಟು ತಮ್ಮನ್ನು ವೃತ್ತಿಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಪೃಥ್ವಿಗೆ ಇನ್ನೂ ಆಟಕ್ಕೆ ಮರಳಲು ಅವಕಾಶವಿದೆ. ಆದರೆ ಬದ್ಧತೆ ರೂಢಿಸಿಕೊಳ್ಳಬೇಕು. ಕ್ರಿಕೆಟ್ ಮತ್ತು ತಂಡದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಫಿಟ್‌ನೆಸ್ ಬಹಳ ಮುಖ್ಯ. ಫಾರ್ಮ್ ಚೆನ್ನಾಗಿಲ್ಲದ ಸಂದರ್ಭದಲ್ಲಿ ಆಟಗಾರರಲ್ಲಿ ಒತ್ತಡ ಹೆಚ್ಚಿ, ಹಾರ್ಮೋನುಗಳು ಏರುಪೇರಾಗುತ್ತವೆ. ಅದರಿಂದಾಗಿ ದೇಹತೂಕ ಹೆಚ್ಚಾಗುತ್ತದೆ. ನಿಯಂತ್ರಣ ಮೀರಿ ತಿನ್ನುವ ಮತ್ತು ಮದ್ಯವ್ಯಸನ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಅಂತಹ ಸಂದರ್ಭದಲ್ಲಿ ಸಮಸ್ಯೆಗಳತ್ತ ಚಿತ್ತ ನೆಡುವುದರಿಂದ ನಕಾರಾತ್ಮಕ ಮನೋಭಾವ ಬೆಳೆಯುತ್ತದೆ. ಸೋಲುಗಳನ್ನು ಒಪ್ಪಿಕೊಳ್ಳಬೇಕು. ಲೋಪಗಳನ್ನು ತಿದ್ದಿಕೊಂಡು ಮುನ್ನಡೆಯಬೇಕು' ಎಂದು ಕ್ರೀಡಾ ಮನಃಶಾಸ್ತ್ರಜ್ಞ ಎಂ.ಎನ್.ವಿಶ್ವನಾಥ್ ಅಭಿಪ್ರಾಯ ಪಡುತ್ತಾರೆ.

ಕ್ರಿಕೆಟ್ ಒಂದೇ ಅಲ್ಲ. ಇವತ್ತಿನ ಕಾಲದ ಎಲ್ಲ ಕ್ರೀಡೆಗಳಲ್ಲಿಯೂ ಇಂತಹ ದುರಂತ ಕತೆಗಳು ಇವೆ. ಕುಸ್ತಿಯನ್ನೇ ತೆಗೆದುಕೊಳ್ಳಿ. ಎರಡು ಒಲಿಂಪಿಕ್ ಕೂಟಗಳಲ್ಲಿ ಪದಕಗಳನ್ನು ಗೆದ್ದ ಸುಶೀಲ್ ಕುಮಾರ್ ಇವತ್ತು ಕೊಲೆ ಪ್ರಕರಣವೊಂದರಲ್ಲಿ ಜೈಲು ಸೇರಿದ್ದಾರೆ. ಸಿಟ್ಟು, ದುಡುಕು ಬುದ್ಧಿಗೆ ದಂಡ ತೆತ್ತಿದ್ದಾರೆ. ಆಸ್ಟ್ರೇಲಿಯಾದ ಸ್ಪಿನ್ ದಿಗ್ಗಜ ಶೇನ್ ವಾರ್ನ್ ಅವರೂ ಹಲವು ವಿವಾದಗಳಿಂದ ಸುದ್ದಿಯಾಗಿದ್ದರು. ಬ್ಲೇಡ್ ರನ್ನರ್ ಆಸ್ಕರ್ ಪಿಸ್ಟೋರಿಯಸ್, ಬಾಕ್ಸಿಂಗ್ ತಾರೆ ಮೈಕ್ ಟೈಸನ್ ಸೇರಿದಂತೆ ಹಲವು ಕ್ರೀಡಾಪಟುಗಳು ತಮ್ಮ ಅಹಂಕಾರ ಮತ್ತು ದುರ್ನಡತೆಗಳಿಂದ ಸುದ್ದಿಯಾದವರು. ಖ್ಯಾತಿ ಮತ್ತು ಹಣ ಬಂದಾಗ ಮನುಷ್ಯ ಹೇಗಿರಬಾರದು ಎಂಬುದಕ್ಕೆ ಉದಾಹರಣೆಯಾದರು.

ಅದೇ ಕ್ರೀಡಾಲೋಕದಲ್ಲಿ ಸಭ್ಯ ನಡವಳಿಕೆಯ ಮೂಲಕ ತಮ್ಮ ಆಟದ ಸಾಧನೆಗಿಂತಲೂ ವ್ಯಕ್ತಿತ್ವದ ಮೂಲಕ ಗಮನ ಸೆಳೆದ ಹಲವರಿದ್ದಾರೆ. ಕನ್ನಡಿಗ ಜಿ.ಆರ್. ವಿಶ್ವನಾಥ್, ಸುನಿಲ್ ಗಾವಸ್ಕರ್, ಬಿ.ಎಸ್. ಚಂದ್ರಶೇಖರ್, ಜಾವಗಲ್ ಶ್ರೀನಾಥ್, ರಾಹುಲ್ ದ್ರಾವಿಡ್, ಚೇತೇಶ್ವರ ಪೂಜಾರ, ಜಾವೆಲಿನ್ ತಾರೆ ನೀರಜ್ ಚೋಪ್ರಾ, ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು, ಟೆನಿಸ್ ಆಟಗಾರರಾದ ರೋಜರ್ ಫೆಡರರ್, ಸಾನಿಯಾ ಮಿರ್ಜಾ ಸೇರಿದಂತೆ ಹಲವರು ತಮ್ಮ ಜೀವನದಲ್ಲಿ ಹಲವಾರು ಸವಾಲುಗಳನ್ನು ಎದುರಿಸಿದ್ದಾರೆ. ಕಠಿಣ ಸಂದರ್ಭಗಳನ್ನೂ ಎದುರಿಸಿದ್ದಾರೆ. ಅದೆಲ್ಲವನ್ನೂ ಮೀರಿ ಬೆಳೆದು ದಿಗ್ಗಜರಾದರು.

ಬೇರೆಲ್ಲರಿಗಿಂತಲೂ ಒಬ್ಬ ಕ್ರೀಡಾಪಟುವಿನ ಜೀವನ ವಿಭಿನ್ನವಾಗಿರುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುವ ಮಟ್ಟಕ್ಕೆ ಬೆಳೆಯುವವರೆಗೂ ಆ ಕ್ರೀಡಾಪಟು ಅಪಾರ ಶ್ರಮಪಟ್ಟಿರುತ್ತಾನೆ. ಆದ್ದರಿಂದ ಉತ್ತುಂಗಕ್ಕೇರಿದಾಗ ಹೆಜ್ಜೆ ತಪ್ಪಿದರೆ ಅದೆಲ್ಲವೂ ವ್ಯರ್ಥವಾದಂತೆಯೇ. ಕ್ರಿಕೆಟ್ ತತ್ವಗಳಲ್ಲಿ ಒಂದು ಮಾತಿದೆ: 'ಆಟಗಾರ ಎಷ್ಟೇ ದೊಡ್ಡವನಾಗಿ ಬೆಳೆದರೂ ಬೌಂಡರಿಯತ್ತ ಓಡುವ ಚೆಂಡನ್ನು ತಡೆದು ಕೈಗೆತ್ತಿಕೊಳ್ಳಲು ಬಾಗಲೇಬೇಕು'. ಅಂದರೆ ಕ್ರೀಡೆ ಅಥವಾ ಜೀವನದಲ್ಲಿ ನಿಯಮಗಳು ಮತ್ತು ಸಭ್ಯತೆಗೆ ಬಾಗಿ ನಡೆದರೆ ಮಾತ್ರ ತಲೆಯೆತ್ತಿ ನಿಲ್ಲಲು ಸಾಧ್ಯ.



ಚುರುಮುರಿ



ಬೀದಿನಾಯಿಗೆ ಬೇಡಿಕೆ!

● ಮಣ್ಣೆ ರಾಜು

ಪದೇ ಪದೇ ಊರಿಗೆ ನುಗ್ಗಿ ಚಟ್ನಹಳ್ಳಿ ಜನರಲ್ಲಿ ಆತಂಕ ಉಂಟುಮಾಡಿದ್ದ ಚಿರತೆ ಅರಣ್ಯ ಇಲಾಖೆಯ ಬೋನಿಗೆ ಬಿದ್ದಿತ್ತು. ಜನ ಸಂಭ್ರಮಿಸಿದರು.

'ಚಿರತೆ ಹಿಡಿದಿದ್ದಕ್ಕೆ ಥ್ಯಾಂಕ್ಸ್ ಸಾರ್' ಅರಣ್ಯಾಧಿಕಾರಿಗೆ ಹೇಳಿದ ಶಿವಲಿಂಗ.

'ಸಾರ್, ನಮ್ಮೂರಿನಲ್ಲಿ ಬೀದಿನಾಯಿಗಳ ಹಾವಳಿಯೂ ಜಾಸ್ತಿಯಾಗಿದೆ, ನಾಯಿಗಳನ್ನೂ ಹಿಡಿದುಕೊಂಡು ಹೋಗಿ' ಕೆಂಪಣ್ಣ ಕೇಳಿಕೊಂಡ.

'ನಾವು ಚಿರತೆ ಹಿಡಿಯೋರು, ಬೀದಿನಾಯಿಗಳು ನಮ್ಮ ವ್ಯಾಪ್ತಿಗೆ ಬರೋದಿಲ್ಲ' ಎಂದರು ಅಧಿಕಾರಿ.

ಸೆರೆಹಿಡಿದ ಚಿರತೆಯನ್ನು ಅರಣ್ಯ ಇಲಾಖೆಯವರು ತೆಗೆದುಕೊಂಡು ಹೋಗಿ ಚಿಕಿತ್ಸೆ ನೀಡಿ ಕಾಡಿಗೆ ಬಿಟ್ಟರು. ಇದಾಗಿ ಎರಡೇ ದಿನದಲ್ಲಿ ಚಿರತೆ ಮತ್ತೆ ಊರಿನಲ್ಲಿ ಕಾಣಿಸಿಕೊಂಡಿತು. ಜನ ಹೆದರಿದರು.

'ಅರಣ್ಯ ಇಲಾಖೆಯವರು ಹಿಡಿದ ಚಿರತೆಯನ್ನು ಅವರ ಆಫೀಸಿನಲ್ಲಿ ಕಟ್ಟಿಹಾಕುವುದಿಲ್ಲ, ಕಾಡಿಗೇ ಬಿಡಬೇಕು. ಅವರು ಕಾಡಿಗೆ ಬಿಡ್ತಾರೆ, ಅದು ಮತ್ತೆ ನಾಡಿಗೆ ಬರ್ತದೆ. ಚಿರತೆ ಹಾವಳಿ ತಡೆಯಬೇಕೆಂದರೆ ಕಾಡಿಗೆ ಬೇಲಿ ಹಾಕಬೇಕು, ಇಲ್ಲವೆ ಊರಿಗೆ ಕಾಂಪೌಂಡ್ ಕಟ್ಟಿಕೊಳ್ಳಬೇಕು' ಅಂದ ತಿಮ್ಮಜ್ಜ.

ಗ್ರಾಮಸ್ಥರು ಎಚ್ಚೆತ್ತುಕೊಂಡು ತಮ್ಮ ದನಕರು, ಕುರಿಮೇಕೆಗಳನ್ನು ಕೊಟ್ಟಿಗೆಗೆ ಕೂಡಿ ಕಾಪಾಡಿಕೊಂಡರು. ಚಿರತೆ ಊರಿಗೆ ನುಗ್ಗಿದಾಗಲೆಲ್ಲಾ ಬೀದಿನಾಯಿಗಳನ್ನು ಕಚ್ಚಿಕೊಂಡು ಹೋಗುತ್ತಿತ್ತು. ದಿನ ಕಳೆದಂತೆ ಎಲ್ಲಾ ಬೀದಿನಾಯಿಗಳು ಚಿರತೆ ಪಾಲಾಗಿದ್ದವು. ಬೀದಿನಾಯಿಗಳ ಕಾಟ ನಿವಾರಣೆಯಾಯಿತು ಎಂದು ಜನ ಸಮಾಧಾನ ಮಾಡಿಕೊಂಡರು.

ಅದಾದ ನಂತರ ಊರಿನಲ್ಲಿ ಕಳ್ಳತನದ ಪ್ರಕರಣಗಳು ಹೆಚ್ಚಾದವು. ಮನೆ ಮುಂದೆ ಇರಿಸಿದ್ದ ನೇಗಿಲು-ನೊಗ, ಗುದ್ದಲಿ, ಮಂಕರಿ, ಬಟ್ಟೆಬರೆ ಯಾವುದನ್ನೂ ಬಿಡದೆ ಕಳ್ಳರು ಹೊತ್ತುಕೊಂಡು ಹೋಗುತ್ತಿದ್ದರು.

'ಬೀದಿನಾಯಿಗಳು ಇದ್ದಿದ್ದರೆ ಕಳ್ಳರು ಊರೊಳಗೆ ನುಗ್ಗಲು ಬಿಡುತ್ತಿರಲಿಲ್ಲ ಕಣ್ರಲಾ...' ಎಂದ ತಿಮ್ಮಜ್ಜನ ಮಾತಿಗೆ ಜನ ತಲೆದೂಗಿದರು.

ಪಕ್ಕದೂರಿನಿಂದ ನಾಲ್ಕಾರು ಬೀದಿನಾಯಿಗಳನ್ನು ತಂದು ಸಾಕಿ ಊರನ್ನು ಕಾಪಾಡಿಕೊಳ್ಳಲು ತೀರ್ಮಾನ ಮಾಡಿದರು.

ಸಂಗತ

ಜಲಸಾಕ್ಷರತೆ: ಬತ್ತದಿರಲಿ ಒರತೆ

ಶುದ್ಧಜಲ ಮರೀಚಿಕೆಯಾಗಿರುವ ಈ ಸಂದರ್ಭದಲ್ಲಿ ಜಲಸಾಕ್ಷರರಾಗುವುದೇ ನಮ್ಮ ಮುಂದೆ ಇರುವ ಏಕೈಕ ಪರಿಹಾರ ಮಾರ್ಗ

● ಡಾ. ಮುರಳೀಧರ ಕಿರಣಕೆರೆ

'ಅಮೃತಸದೃಶ ಜೀವಜಲವನ್ನಾಗಲಿ, ಪಾನೀಯವನ್ನಾಗಲಿ ಪ್ಲಾಸ್ಟಿಕ್ ಎಂಬ ವಿಷಕಾರಿ ಬಟ್ಟಲಿನಲ್ಲಿ ನೀಡಬಾರದು' ಎಂಬುದು ಆ ಸಹೋದರರ ದೃಢ ನಿಲುವು. ಪ್ಲಾಸ್ಟಿಕ್ ತ್ಯಾಜ್ಯವು ಜನ, ಜಾನುವಾರು, ಜಲಚರ, ಖಗ-ಮೃಗಗಳು ಸೇರಿದಂತೆ ಇಡೀ ಪರಿಸರಕ್ಕೆ ವಿಷಕಾರಿಯಷ್ಟೇ ಅಲ್ಲ ವಿನಾಶಕಾರಿಯೂ ಹೌದು. ನೆಲ, ಜಲ, ವಾಯುಮಂಡಲವು ಅಪಾಯಕಾರಿ ಪ್ಲಾಸ್ಟಿಕ್ ಕಣಗಳಿಂದ ಮಲಿನವಾಗುವುದನ್ನು ತಪ್ಪಿಸಲು ಅವರು 'ಲೋಟಗಳ ಬ್ಯಾಂಕ್' ಎಂಬ ಪುಟ್ಟ ಪ್ರಯತ್ನ ಪ್ರಾರಂಭಿಸಿದ್ದಾರೆ.

ಸಭೆ, ಸಮಾರಂಭಗಳಲ್ಲಿ ಪ್ಲಾಸ್ಟಿಕ್ ಕಪ್‌ಗಳ ಬಳಕೆ ತಪ್ಪಿಸುವ ದಿಸೆಯಲ್ಲಿ ನೀರು ಮತ್ತು ಕಾಫಿ ಕುಡಿಯುವುದಕ್ಕಾಗಿ ತಲಾ 500 ಸ್ಟೀಲ್ ಲೋಟಗಳ ವ್ಯವಸ್ಥೆ ಮಾಡಿದ್ದಾರೆ. ಅಗತ್ಯವಿರುವವರು ತಮ್ಮ ಕಾರ್ಯಕ್ರಮಕ್ಕೆ ಈ ಲೋಟಗಳನ್ನು ತೆಗೆದುಕೊಳ್ಳಬಹುದು. ಇದಕ್ಕೆ ಬಾಡಿಗೆ ಕೊಡಬೇಕಾಗಿಲ್ಲ. ಕಾರ್ಯಕ್ರಮ ಮುಗಿದ ನಂತರ ತೊಳೆದು, ಸ್ವಚ್ಛವಾಗಿ ಮರಳಿಸಬೇಕೆಂಬ ಒಂದೇ ಷರತ್ತು. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ಆದಷ್ಟುಮಟ್ಟಿಗೆ ಪ್ಲಾಸ್ಟಿಕ್ ಬಾಟಲ್, ಲೋಟಗಳ ಬಳಕೆ ತಪ್ಪಿಸುವ ಉದ್ದೇಶ. ಇದರಿಂದ ಮಾಲಿನ್ಯ ಮಿತಗೊಳಿಸುವ ಜೊತೆಗೆ ನೀರು ಪೋಲಾಗುವುದೂ ತಪ್ಪುತ್ತದೆಯೆಂದು ಅವರು ತೋರಿಸುತ್ತಿದ್ದಾರೆ.

ಮುಂದೆ ಸ್ಟೀಲ್ ತಟ್ಟೆಗಳನ್ನೂ ಹೀಗೆ ನೀಡುವ ಆಲೋಚನೆಯಲ್ಲಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನವರಾದ ಅಶೋಕ್ ಮತ್ತು ಅರವಿಂದ್ ಸಹೋದರರ ಪರಿಸರ ರಕ್ಷಣೆಯ ಈ ಪುಟ್ಟ ಹೆಜ್ಜೆ ನಿಜಕ್ಕೂ ಪ್ರಶಂಸಾರ್ಹ. ಬೆಂಗಳೂರಿನ ಅದಮ್ಯ ಚೇತನ ಸಂಸ್ಥೆಯು ಹತ್ತು ಸಾವಿರ ಸ್ಟೀಲ್ ತಟ್ಟೆ, ಲೋಟ, ಚಮಚಗಳ 'ಪ್ಲೇಟ್ ಬ್ಯಾಂಕ್' ನಡೆಸುತ್ತಾ ಶುಲ್ಕರಹಿತವಾಗಿ ಬಾಡಿಗೆಗೆ ನೀಡುತ್ತಿರುವ ಕಾರ್ಯವೇ ಇವರಿಗೆ ಸ್ಫೂರ್ತಿ.

ಈ ಅನುಕರಣೀಯ ಕಾರ್ಯ ದೊಡ್ಡ ಮಟ್ಟದಲ್ಲಿ ಪ್ರಚಾರಕ್ಕೆ ಬಂದಿದ್ದು ಶೃಂಗೇರಿಯಿಂದ ಹರಿಹರದವರೆಗೆ ಇತ್ತೀಚೆಗೆ ನಡೆದ 'ನಿರ್ಮಲ ತುಂಗಭದ್ರಾ ಅಭಿಯಾನ'ದ ಮೊದಲ ಚರಣದಲ್ಲಿ. ಜನಜಾಗೃತಿ, ಜಲಜಾಗೃತಿ, ಜನಾಗ್ರಹದ ಸಂಕಲ್ಪ ಹೊತ್ತು ನದಿಯಗುಂಟ ನಡೆದ ಈ ಪಾದಯಾತ್ರೆಯು ಸಾರ್ವಜನಿಕರಲ್ಲಿ, ಅದರಲ್ಲೂ ಪ್ರಮುಖವಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಜಲಮಾಲಿನ್ಯದ ಬಗ್ಗೆ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದೆ. ಹಲವರ ಮನಃಪರಿವರ್ತನೆಗೂ ಕಾರಣವಾಗಿದೆ.

ಈ ಅಭಿಯಾನದಲ್ಲಿ ಪಾಲ್ಗೊಂಡ ಶಿವಮೊಗ್ಗದ ಬಾಳೆಕಾಯಿ ಮಂಡಿಯ ವರ್ತಕರೊಬ್ಬರು ಹಣ್ಣುಗಳನ್ನು ಪ್ಲಾಸ್ಟಿಕ್ ಕವರ್ ಬದಲಿಗೆ ಕಾಗದದಲ್ಲಿ ಸುತ್ತಿಕೊಡುತ್ತಾ, ಪ್ಲಾಸ್ಟಿಕ್ ತ್ಯಾಜ್ಯದ ಬಗ್ಗೆ ಗ್ರಾಹಕರಲ್ಲಿ ಅರಿವು ಮೂಡಿಸುವ ಜೊತೆಗೆ ತಾವೇ ಮಾದರಿಯಾಗಿ ನಡೆದುಕೊಳ್ಳುತ್ತಿದ್ದಾರೆ. ಮಕ್ಕಳನ್ನು ಜಲಸಾಕ್ಷರರನ್ನಾಗಿ ಮಾಡಲು ಶಾಲಾ ಕಾಲೇಜುಗಳಲ್ಲಿ 'ಜಲ ಸಂಘ' (ವಾಟರ್ ಕ್ಲಬ್) ಸ್ಥಾಪಿಸಬೇಕೆಂಬ ಒತ್ತಾಯದ ಧ್ವನಿಯೂ ಈ ಅಭಿಯಾನದಲ್ಲಿ ಹೊರಹೊಮ್ಮಿದೆ. ಜೀವಜಲದ ಮಿತಬಳಕೆ, ಪುನರ್ಬಳಕೆ, ಜಲಮೂಲಗಳ ಅರಿವು, ಅವುಗಳನ್ನು ಮಲಿನಗೊಳಿಸದಿರುವ ಪ್ರಜ್ಞೆ, ನೀರು ಇಂಗಿಸುವಲ್ಲಿ ಕೆರೆಕಟ್ಟೆಗಳ ಪಾತ್ರ, ಮಳೆನೀರು ಸಂಗ್ರಹದಂತಹ ವಿಚಾರಗಳಲ್ಲಿ ವಿದ್ಯಾರ್ಥಿಗಳಲ್ಲಿ ತಿಳಿವಳಿಕೆ ಮೂಡಿಸಬೇಕಿರುವುದು ಸದ್ಯದ ತುರ್ತು. ಜಲಸಂಘದ ಮೂಲಕ ಜಲಸಂರಕ್ಷಣೆಯ ಮಹತ್ವವನ್ನು ಮನದಟ್ಟು ಮಾಡಿಸಿದಾಗ ಮಾತ್ರ ಜಲಕ್ಷಾಮವನ್ನು ತಡೆಯಲು ಸಾಧ್ಯ. ನಮ್ಮ ವಿದ್ಯಾಲಯಗಳಲ್ಲಿ ಪಠ್ಯದ ಹೊರೆಯನ್ನು ಕಡಿತಗೊಳಿಸಿ, ಬದುಕಿನ ಪಾಠ, ಜೀವನ ಕೌಶಲಗಳಿಗೂ ತರಗತಿಗಳಲ್ಲಿ ಒತ್ತು ನೀಡಬೇಕಿರುವ ಸಂಧಿಕಾಲವಿದು.

ಈಗ ಶುದ್ಧಜಲ ಎಂಬುದು ನಿಜಕ್ಕೂ ಮರೀಚಿಕೆ. ವಿಷಯುಕ್ತ, ತ್ಯಾಜ್ಯ ತುಂಬಿದ, ರೋಗಾಣುಗಳ ಆಗರ ಆಗಿರುವ ನೀರಿನಿಂದಾಗಿ ಪರಿಸರದ ಸ್ವಾಸ್ಥ್ಯ ಬಿಗಡಾಯಿಸುತ್ತಿದೆ. ಎಳೆಯರಲ್ಲಿ ಈ ಕುರಿತು ಸರಿಯಾಗಿ ಜಾಗೃತಿ ಮೂಡಿಸಿದಾಗ ಮುಂದೆ ಅವರು ಜವಾಬ್ದಾರಿಯುತ ನಾಗರಿಕರಾಗಿ ನಡೆದುಕೊಳ್ಳುತ್ತಾರೆ. ಜಲಸಾಕ್ಷರತೆಯ ಬಗ್ಗೆ ಮಾತನಾಡಿದರೆ ಕೇಳುವ ವಯಸ್ಕರು ಕಡಿಮೆ. ಅದೇ ಮಕ್ಕಳಿಗೆ ಮನದಟ್ಟು ಮಾಡಿಸಿದರೆ ತಾವು ಪಾಲಿಸುವ ಜೊತೆಗೆ ಮನೆಯ ಹಿರಿಯರಿಗೂ ಕಲಿಸುತ್ತಾರೆ.



ನಮ್ಮ ರಾಷ್ಟ್ರದ ಬೃಹತ್ ಜನಸಂಖ್ಯೆಯನ್ನು ಪರಿಗಣಿಸಿದರೆ ಸಾಕ್ಷರತೆಯ ಮಟ್ಟವೇನೊ ತೃಪ್ತಿಕರ. ಅದೇ ಜಲಸಾಕ್ಷರತೆಯ ವಿಚಾರಕ್ಕೆ ಬಂದರೆ ನಮ್ಮದು ತುಂಬಾ ಶೋಚನೀಯ ಸ್ಥಿತಿ. ಹಳ್ಳಿಗಳು ಸೇರಿದಂತೆ ಪಟ್ಟಣಗಳು, ನಗರಗಳಲ್ಲಿ ಮನೆ ಮುಂದಿನ ಅಂಗಳ, ರಸ್ತೆ, ವಾಹನಗಳನ್ನು ತೊಳೆಯಲು ಅಮೂಲ್ಯ ಕುಡಿಯುವ ನೀರನ್ನು ಮನಸೋಇಚ್ಛೆ ಬಳಸಲಾಗುತ್ತಿದೆ. ಹೆಚ್ಚೆಂದರೆ ಒಂದೆರಡು ಬಕೆಟ್ ನೀರಿನಲ್ಲಿ ಆಗುವ ಕೆಲಸಕ್ಕೆ ನಿತ್ಯವೂ ಸಾವಿರಾರು ಲೀಟರ್ ನೀರು ಪೋಲಾಗುತ್ತಿದೆ. ಮಾನವನ ದುರಾಸೆಗೆ ಅರಣ್ಯ ಪ್ರದೇಶ, ಹಸಿರು ತಾಣಗಳು ಬಲಿಯಾಗುತ್ತಿರುವಂತೆಯೇ ಜಲಮೂಲ ಗಳೂ ಬತ್ತುತ್ತಿವೆ. ಬರಡು ನೆಲದಲ್ಲಿ ಬಸಿಯಲಾಗದೆ ಮಳೆನೀರು ಹರಿದು ವ್ಯರ್ಥವಾಗುತ್ತಿದೆ.

ಪರಿಣಾಮವಾಗಿ, ಅಂತರ್ಜಲದ ಮಟ್ಟ ಆತಂಕಕಾರಿಯಾಗಿ ಕುಸಿಯುತ್ತಿದೆ. ಕೆರೆಕಟ್ಟೆಗಳು, ಹಳ್ಳಕೊಳ್ಳಗಳು, ನದಿಗಳಂತಹ ಜೀವದಾಯಿಗಳು ಮಾನವನ ಅನಾಚಾರದ ವರ್ತನೆಗಳಿಂದ ಮಾರಕ ಸಾಂಕ್ರಾಮಿಕ, ಅಸಾಂಕ್ರಾಮಿಕ ಕಾಯಿಲೆಗಳ ತೊಟ್ಟಿಲುಗಳಾಗುತ್ತಿರುವುದು ಆತಂಕಕಾರಿ ವಿದ್ಯಮಾನ. ಜಲಸಾಕ್ಷರರಾಗಿ ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದೊಂದೇ ನಮ್ಮೆದುರಿಗೆ ಇರುವ ಏಕೈಕ ಪರಿಹಾರ ಮಾರ್ಗ.

ವಾಚಕರ ವಾಣಿ

ಆಹಾರದ ಸುಳಿಗೆ ಸಿಲುಕಿದ ಸಮ್ಮೇಳನ

ಮಂಡ್ಯದಲ್ಲಿ ನಡೆಯಲಿರುವ ಮೂರು ದಿನಗಳ ಸಾಹಿತ್ಯ ಸಮ್ಮೇಳನ ಸಸ್ಯಾಹಾರ–ಮಾಂಸಾಹಾರದ ಸುಳಿಯಲ್ಲಿ ಸಿಲುಕಿ ನಲುಗುತ್ತಿದೆ. ಎಡಪಂಥೀಯರು ಮಾಂಸಾಹಾರಕ್ಕೆ ಬೇಡಿಕೆ ಇಟ್ಟು ಹೋರಾಟ ಮಾಡುತ್ತಿದ್ದಾರೆ. ಇದುವರೆಗೂ ಯಾವ ಸಮ್ಮೇಳನದಲ್ಲೂ ಇಲ್ಲದ್ದು ಈಗೇಕೆ ಇಂತಹ ಬೇಡಿಕೆ?

ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಾಡು, ನುಡಿ, ಗಡಿಯಂತಹ ವಿಷಯಗಳಿಗೆ ಸಂಬಂಧಿಸಿದ ಮುಖ್ಯ ಗೋಷ್ಠಿಗಳಿಗೆ ಮಹತ್ವವಿರಬೇಕು. ತಮಾಷೆಯೆಂದರೆ, ಲಕ್ಷಾಂತರ ಜನ ಸೇರುವ ಸಮ್ಮೇಳನದ ಗೋಷ್ಠಿಗಳಲ್ಲಿ ಭಾಗವಹಿಸುವವರು ಕೆಲವೇ ಆಸಕ್ತರು ಮಾತ್ರ. ಊಟ ಬೇಕು, ಅದು ಸರಳವಾಗಿ, ಪರಂಪರೆಗೆ ಅನುಸಾರವಾಗಿ ಇರಬೇಕು. ಅದುಬಿಟ್ಟು ಸಾರ್ವಜನಿಕ ಕಾರ್ಯಕ್ರಮವಾಗಿ ರೂಪುಗೊಂಡಿರುವ ಸಾಹಿತ್ಯ ಸಮ್ಮೇಳನದಲ್ಲಿ ಇಂತಹ ಊಟವೇ ಬೇಕು ಎನ್ನುವ ಬೇಡಿಕೆ ಸಲ್ಲದು. ಅಪರೂಪದ ಈ ಕಾರ್ಯಕ್ರಮದಲ್ಲಿ ಹಲವು ಲೋಪದೋಷಗಳು ಇವೆಯಾದರೂ ಕನ್ನಡ ಭಾಷೆಯ ಅಭಿಮಾನದಿಂದಲಾದರೂ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕಾದ ಅಗತ್ಯವಿದೆ. ವಿವಾದಕ್ಕೆ ಆಸ್ಪದವಿಲ್ಲದಂತೆ ಸಮ್ಮೇಳನವನ್ನು ಆಯೋಜಿಸುವ ಅವಕಾಶವಿತ್ತು. ಆದರೆ ಅದು ಸಾಧ್ಯವಾಗಿಲ್ಲ ಎಂಬುದು ಅತ್ಯಂತ ಬೇಸರದ ಸಂಗತಿ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

'ಸಿದ್ಧರೂಢ'ರಾಗುತ್ತಿರುವ 'ಸಿದ್ಧಾರೂಢ'ರು

'ವಿಶ್ವದ ಅತ್ಯಂತ ಉದ್ದದ ರೈಲ್ವೆ ಪ್ಲ್ಯಾಟ್‌ಫಾರ್ಮ್' ಎಂಬ ಹೆಗ್ಗಳಿಕೆಯ ಹುಬ್ಬಳ್ಳಿ ರೈಲು ನಿಲ್ದಾಣಕ್ಕೆ, 'ಶ್ರೀ ಸಿದ್ಧಾರೂಢಸ್ವಾಮಿ ರೈಲು ನಿಲ್ದಾಣ' ಎಂದು ಹೆಸರಿಟ್ಟದ್ದು ಸಾರ್ಥಕ ಕಾರ್ಯ. ಈ ಹೆಸರನ್ನು ರೈಲು ನಿಲ್ದಾಣದ ಮುಂಭಾಗದಲ್ಲಿ ಶುದ್ಧವಾಗಿಯೇ ಬರೆಸಿದ್ದಾರೆ. ಆದರೆ, ಹುಬ್ಬಳ್ಳಿ ನಿಲ್ದಾಣದಲ್ಲಿ ರೈಲು ಇಳಿದ ಕೂಡಲೇ ಕೇಳಿಬರುವ ಉದ್ಘೋಷಣೆಯು 'ಶ್ರೀ 'ಸಿದ್ಧರೂಢ'ಸ್ವಾಮಿ ರೈಲು ನಿಲ್ದಾಣಕ್ಕೆ ಸ್ವಾಗತ' ಎಂದು ಹೇಳುತ್ತದೆ. ಈ 'ಸಿದ್ಧರೂಢ' ಶಬ್ದವನ್ನು ಕೇಳಿದ ಕೂಡಲೇ ಕಿವಿಗೆ ಚುಚ್ಚಿದಂತಾಗುತ್ತದೆ!

ಶ್ರೀ 'ಸಿದ್ಧಾರೂಢ' ಶಬ್ದವು ಶ್ರೀ 'ಸಿದ್ಧರೂಢ' ಎಂದು ಉದ್ಘೋಷಿತವಾಗುತ್ತಿರುವುದು ಯಾಂತ್ರೀಕೃತ ಅನುವಾದದ ಪರಿಣಾಮ. ಆದರೆ, ಇದನ್ನು ಕೇಳುವ ಕಿವಿ ಮತ್ತು ಮನಸ್ಸುಗಳು ಯಂತ್ರಗಳಲ್ಲ. ಅದಕ್ಕಾಗಿ ಅದು ಆಭಾಸವಾಗಿಯೇ ಕಿವಿಗೆ ಅಪ್ಪಳಿಸುತ್ತದೆ. 'ಸಿದ್ಧರೂಢ' ಶಬ್ದವು 'ಸಿದ್ಧಾರೂಢ' ಶಬ್ದದ ಅರ್ಥವನ್ನು ಹೊಂದಿಲ್ಲವಷ್ಟೇ ಅಲ್ಲ, ಅದು ವ್ಯಾಕರಣದ ಪ್ರಕಾರ 'ಸಂಧಿ ದೋಷ'ವೂ ಹೌದು. ಶಬ್ದ ಮತ್ತು ಅರ್ಥ ಎರಡೂ ಬಗೆಯಲ್ಲಿ ಹೀಗೆ ದೋಷವಾಗುತ್ತಿರುವುದು ಕನ್ನಡ ಭಾಷೆಗೆ ಆಗುತ್ತಿರುವ ಬಹುದೊಡ್ಡ ಅವಮಾನ.

ನಾನು ಆಕಾಶವಾಣಿ ಧಾರವಾಡ ಕೇಂದ್ರದ ಸಹಾಯಕ ನಿರ್ದೇಶಕನಾಗಿದ್ದಾಗ, ಆಗಿನ ರೈಲ್ವೆ ಅಧಿಕಾರಿಗಳ ಕೋರಿಕೆಯ ಮೇರೆಗೆ, ರೈಲುಗಳ ಆಗಮನ, ನಿರ್ಗಮನದಂತಹ ಉದ್ಘೋಷಣೆಗಳನ್ನು ಶುದ್ಧ ಕನ್ನಡ ಭಾಷೆಯಲ್ಲಿ ಧ್ವನಿಮುದ್ರಿಸಿ ಕೊಟ್ಟಿದ್ದೆ. ಈಗಲೂ ಈ ಯಾಂತ್ರೀಕೃತ ಭಾಷೆಯಿಂದಾಗಿರುವ ದೋಷವನ್ನು ಸರಿಪಡಿಸಲು ಆಕಾಶವಾಣಿಯ ಉದ್ಘೋಷಕರಿಂದ ಶುದ್ಧ ಮತ್ತು ಸೂಕ್ತ ಉಚ್ಚಾರದ ಉದ್ಘೋಷಣೆಗಳನ್ನು ಧ್ವನಿಮುದ್ರಿಸಿ ಪ್ರಕಟಿಸುವ ವ್ಯವಸ್ಥೆ ಮಾಡಬಹುದಾಗಿದೆ.

ಬಸವರಾಜ ಸಾದರ, ಬೆಂಗಳೂರು

ನಾಯಕ ಹೇಳದೇ ಉಳಿದದ್ದು...

ಭಾರತ– ಆಸ್ಟ್ರೇಲಿಯಾ ನಡುವೆ ಇತ್ತೀಚೆಗೆ ನಡೆದ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ (ಪಿಂಕ್ ಬಾಲ್) ಭಾರತ ಸೋಲನುಭವಿಸಿದ ನಂತರ ನಾಯಕ ರೋಹಿತ್ ಶರ್ಮಾ, 'ಎರಡೂ ಕಡೆಯಿಂದ ಬೂಮ್ರಾ ಬೌಲಿಂಗ್ ಮಾಡಲಾಗದು' ಎಂದು ಇತರ ಬೌಲರ್‌ಗಳಿಗೆ ಪರೋಕ್ಷ ಎಚ್ಚರಿಕೆ ನೀಡಿದ್ದಾರೆ. ಆದರೆ ಬ್ಯಾಟ್ಸ್‌ಮನ್‌ಗಳ ಪಾತ್ರದ ಕುರಿತು ಕಡಿಮೆ ಮಾತನಾಡಿದ್ದಾರೆ.

ಏಕೆಂದರೆ ನಾಯಕನಾಗಿ ತಮ್ಮ ಆಟ ಕಳಪೆಯಾಗಿದ್ದು, ಖ್ಯಾತನಾಮರ ಬ್ಯಾಟಿಂಗ್ ಕೂಡಾ ಪೇಲವವಾಗಿದ್ದನ್ನು ಅವರು ಹೇಗೆ ಹೇಳಿಯಾರು? ಕೊಹ್ಲಿ ಮತ್ತು ತಮಗೆ ಎಷ್ಟೊಂದು ಅವಕಾಶಗಳು ದೊರೆತಿವೆ, ಕೆ.ಎಲ್.ರಾಹುಲ್ ಹಾಗೂ ಬೆಂಚಲ್ಲಿ ಕೂರಿಸಿರುವ ರಿಸರ್ವ್ ಆಟಗಾರರಿಗೆ ಎಷ್ಟು ಅವಕಾಶಗಳನ್ನು ನೀಡಲಾಗಿದೆ ಎಂಬುದನ್ನೂ ಜನರಿಗೆ ಅವರು ವಿವರಿಸಬೇಕಲ್ಲವೇ? ಹಿಂದಿನ ಟೆಸ್ಟ್ ಆಟದಲ್ಲಿ ಬೂಮ್ರಾ ನಾಯಕತ್ವ ಹೇಗಿತ್ತು, ಟೀಂ ಆಸ್ಟ್ರೇಲಿಯಾ ತಂಡವನ್ನು ಸೋಲಿಸಲು ಹೇಗೆ ಸಾಧ್ಯವಾಯಿತು ಎಂಬುದನ್ನು ನಾಯಕ ಹಾಗೂ ಆಯ್ಕೆ ಸಮಿತಿ ಅರ್ಥ ಮಾಡಿಕೊಳ್ಳಲು ಇನ್ನೂ ಎಷ್ಟು ಕಾಲ ಬೇಕು?

ಎಸ್.ಕೆ.ನಿತ್ಯಾನಂದ, ಬೆಂಗಳೂರು

ಔಷಧಿ ವಿತರಣೆ: ಹಿಂದಿನ ವರದಿ ಏನಾಯಿತು?

ಬಳ್ಳಾರಿಯಲ್ಲಿ ಬಾಣಂತಿಯರ ಸರಣಿ ಸಾವಿನ ನಂತರ ಈಗ ರಾಜ್ಯದಲ್ಲಿ ಈ ವರ್ಷ ವರದಿಯಾಗಿರುವ 327 ಬಾಣಂತಿಯರ ಸಾವಿನ ಪ್ರಕರಣಗಳ ಕಡೆ ಗಮನಹರಿದಿದೆ. ಬಳ್ಳಾರಿಯ ಪ್ರಕರಣದಲ್ಲಿ ಕಳಪೆ ಔಷಧಿಯ ಕಾರಣ ಸಾವುಗಳು ಸಂಭವಿಸಿವೆ ಎಂದು ಅನುಮಾನಿಸಲಾಗಿದೆ. ಈ ಪ್ರಕರಣಗಳಲ್ಲಿ ಅಧಿಕಾರಿಗಳ ಭ್ರಷ್ಟಾಚಾರ, ಬೇಜವಾಬ್ದಾರಿ ನಡೆ, ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಮುಖ್ಯಮಂತ್ರಿ ಆದೇಶಿಸಿದ್ದಾರೆ. ಆದರೆ ಆರೋಗ್ಯ ಇಲಾಖೆಯ ನಿರ್ಲಕ್ಷ್ಯದ ವಿಷಯ ಮಹಾಲೇಖಪಾಲರ ದಶಕದ ಹಿಂದಿನ ವರದಿಗಳಲ್ಲಿ ಈಗಾಗಲೇ ದಾಖಲಾಗಿದೆ. ಕೆಲ ವರ್ಷಗಳ ಹಿಂದೆ, ಔಷಧಿ ವಿತರಣೆಯಲ್ಲಿ ಬೇಜವಾಬ್ದಾರಿತನದಿಂದ ಕಾರ್ಯನಿರ್ವಹಿಸಿದವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲು ರಾಮಲಿಂಗಾರೆಡ್ಡಿ ಅವರ ಅಧ್ಯಕ್ಷತೆಯ ವಿಧಾನಮಂಡಲ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ವರದಿಯಲ್ಲಿ ಶಿಫಾರಸು ಮಾಡಿತ್ತು. ಅಂದು ಸರಿಯಾದ ಕ್ರಮ ತೆಗೆದುಕೊಂಡಿದ್ದಿದ್ದರೆ ಇಂದು ಈ ಅಮಾಯಕರು ಬದುಕಿರುತ್ತಿದ್ದರು.

'ಸಾರ್ವಜನಿಕ ಆರೋಗ್ಯ, ಬದುಕು ಮತ್ತು ಜೀವಗಳ ಮೇಲೆ ಅಧಿಕಾರಿಗಳಿಗೆ ಇರುವಂತಹ ದುರಹಂಕಾರಪೂರಿತ ಅಲಕ್ಷ್ಯ ಮನೋಭಾವ ಸಾಬೀತಾಗಿದೆ. ಗುಣಮಟ್ಟವಿಲ್ಲದ ಔಷಧಗಳನ್ನು ಆಸ್ಪತ್ರೆಗಳಿಗೆ ಹಂಚಿಕೆ ಮಾಡಿ ಅವುಗಳನ್ನು ಬಡ ರೋಗಿಗಳಿಗೆ ನೀಡಲು ಕಾರಣಕರ್ತರಾದ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕು' ಎಂದು ಸಮಿತಿಯು ಶಿಫಾರಸು ಮಾಡಿತ್ತು. ತಪ್ಪಿತಸ್ಥರಿಗೆ ಇನ್ನಾದರೂ ಶಿಕ್ಷೆ ಆಗುತ್ತದೆ ಎಂದು ನಂಬಬಹುದೇ?

ಎ.ಜೆ.ಜಾವೀದ್, ಹಾಸನ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜನಾಕ್ರೋಶಕ್ಕೆ ಸರ್ಕಾರಗಳು ಪತನ

ಆಗ ಶ್ರೀಲಂಕಾ, ಬಾಂಗ್ಲಾದೇಶ; ಈಗ ಸಿರಿಯಾ

ಜನರ ದಂಗೆಯಿಂದ ಸರ್ಕಾರಗಳು ಪತನಗೊಳ್ಳುತ್ತಿರುವ ವಿದ್ಯಮಾನ ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿದೆ. ಸಿರಿಯಾದಲ್ಲಿ ನಡೆದಿರುವ ಬೆಳವಣಿಗೆಯು, ಜನರೇ ಬೀದಿಗಿಳಿದು ಅಧಿಕಾರಸ್ಥರನ್ನು ಕಿತ್ತೊಗೆಯುತ್ತಿರುವ ಪ್ರವೃತ್ತಿಗೆ ಹೊಸ ನಿದರ್ಶನವಾಗಿದೆ. ಇದೇ ವರ್ಷದ ಆಗಸ್ಟ್‌ನಲ್ಲಿ ಬಾಂಗ್ಲಾದೇಶದ ಪ್ರಧಾನಿ ಆಗಿದ್ದ ಶೇಖ್ ಹಸೀನಾ ಅವರು ಪದವಿ ತೊರೆದು, ವಿದೇಶಕ್ಕೆ ಪಲಾಯನ ಮಾಡಿದ್ದರು. ಅದಕ್ಕೆ ಕಾರಣವಾಗಿದ್ದು, ವಿದ್ಯಾರ್ಥಿಗಳ ಹೋರಾಟ. 2022ರಲ್ಲಿ ಶ್ರೀಲಂಕಾದಲ್ಲಿಯೂ ಅಧ್ಯಕ್ಷ ಗೊಟಬಯ ಅವರನ್ನು ಕೆಳಗಿಳಿಸಿದ್ದು ಜನತಾ ದಂಗೆಯೇ. ಸರ್ಕಾರಗಳ ದುರಾಡಳಿತ, ನಿರಂಕುಶಾಧಿಕಾರದ ವಿರುದ್ಧ ಜನರೇ ನೇರವಾಗಿ ಬೀದಿಗಿಳಿದು ನಿರ್ಣಾಯಕ ಹೋರಾಟ ನಡೆಸುತ್ತಿರುವುದು ಜಾಗತಿಕವಾಗಿ ಮಹತ್ವದ ಬೆಳವಣಿಗೆಯಾಗಿದೆ



ಸಿರಿಯಾದಲ್ಲಿ ಬಶರ್ ಅಸಾದ್ ಸರ್ಕಾರದ ಪತನದ ಸುದ್ದಿ ಕೇಳಿ ಇಸ್ರೇಲ್ ಹಿಡಿತದಲ್ಲಿರುವ ಗೋಲನ್ ಹೈಟ್ಸ್‌ನಲ್ಲಿರುವ ಮಜ್ದಲ್ ಶಾಮ್ಸ್ ಪಟ್ಟಣದ ಜನರು ಸುಲ್ತಾನ್ ಪಾಷಾ ಅಲ್ ಅಟ್ರಾಶ್ (1925ರಲ್ಲಿ ಫ್ರೆಂಚ್ ಆಡಳಿತದ ವಿರುದ್ಧದ ದಂಗೆಯ ನೇತೃತ್ವ ವಹಿಸಿದ್ದ ಡ್ರೂಜ್ ಸಮುದಾಯದ ಯೋಧ) ಅವರ ಪ್ರತಿಮೆಯ ಮುಂದೆ ಸಿರಿಯಾ ಧ್ವಜ ಹಿಡಿದು ಸಂಭ್ರಮಿಸಿದರು ಎಎಫ್‌ಪಿ ಚಿತ್ರ

ಶ್ರೀಲಂಕಾದ ಅಧ್ಯಕ್ಷರಾಗಿದ್ದ ಗೊಟಬಯ ರಾಜಪಕ್ಸ, ಬಾಂಗ್ಲಾದೇಶದ ಪ್ರಧಾನಿ ಆಗಿದ್ದ ಶೇಖ್ ಹಸೀನಾ ಅವರ ಸಾಲಿಗೆ ಈಗ ಸಿರಿಯಾದ ಅಧ್ಯಕ್ಷರಾಗಿದ್ದ ಬಶರ್ ಅಲ್ ಅಸಾದ್ ಅವರೂ ಸೇರಿದ್ದಾರೆ. ಈ ಮೂವರೂ ಜನತಾ ದಂಗೆಯಿಂದ ಅಧಿಕಾರ ಕಳೆದುಕೊಂಡು ದೇಶ ಬಿಟ್ಟು ಪಲಾಯನ ಮಾಡಿದ ದಾಖಲೆ ಮಾಡಿದ್ದಾರೆ. ಈ ಘಟನೆಗಳು ಆಯಾ ದೇಶಗಳ ಸಂಕೀರ್ಣ ರಾಜಕೀಯ ಸಂದರ್ಭಕ್ಕೆ ಕನ್ನಡಿ ಹಿಡಿಯುತ್ತಲೇ, ಜನತಾ ದಂಗೆಯ ಹೊಸ ಮುಖಗಳನ್ನೂ ಪರಿಚಯಿಸುತ್ತಿವೆ.

ಒಂದು ಕಾಲದಲ್ಲಿ (1946–1970) ಸಿರಿಯಾವು ರಾಜಕೀಯವಾಗಿ ಪಶ್ಚಿಮ ಏಷ್ಯಾದ ಅತ್ಯಂತ ಅಸ್ಥಿರ ದೇಶ ಎಂದು ಹೆಸರಾಗಿತ್ತು. ನಂತರ 30 ವರ್ಷ ದೇಶದ ಅಧ್ಯಕ್ಷರಾಗಿ ಅಧಿಕಾರ ನಡೆಸಿದ್ದ ಹಫೇಜ್ ಅಲ್ ಅಸಾದ್ ತನ್ನ ಅಧಿಕಾರ ಉಳಿಸಿಕೊಳ್ಳಲು ದಮನಕಾರಿ ಮಾರ್ಗಗಳನ್ನು ಅನುಸರಿಸಿದರು. ಲಂಡನ್‌ನಲ್ಲಿ ವೈದ್ಯಕೀಯ ಪದವಿ ಪಡೆದುಬಂದಿದ್ದ ಹಫೇಜ್ ಅವರ ಮಗ ಬಶರ್ ಅಲ್ ಅಸಾದ್ ಬಗ್ಗೆ ಅಲ್ಲಿನ ಜನ ಅಪಾರ ಭರವಸೆ ಹೊಂದಿದ್ದರು. ಆದರೆ, ಅಧಿಕಾರಕ್ಕೇರಿದ ಬಳಿಕ ಅಪ್ಪನಿಗಿಂತಲೂ ಹೆಚ್ಚಿನ ಕ್ರೌರ್ಯವನ್ನು ಪ್ರದರ್ಶಿಸಿದ್ದ ಅಸಾದ್, ವಿರೋಧಿಗಳನ್ನು ಹತ್ತಿಕ್ಕಿದ್ದರು.

2010-11ರಲ್ಲಿ ಅರಬ್ ರಾಷ್ಟ್ರಗಳಲ್ಲಿ ‘ಅರಬ್ ದಂಗೆ’, ಉತ್ತರ ಆಫ್ರಿಕಾ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಪರ ಹೋರಾಟ ಕಾಣಿಸಿಕೊಂಡಿತ್ತು. ಜನ ಅಧಿಕಾರಸ್ಥರ ವಿರುದ್ಧ ಬೀದಿಗಿಳಿಯತೊಡಗಿದ್ದರು. ಈಜಿಪ್ಟ್, ಟ್ಯುನೀಷಿಯಾಗಳಲ್ಲಿ ಸರ್ಕಾರಗಳು ಪತನಗೊಂಡಿದ್ದವು. ಈ ದಂಗೆ ಸಿರಿಯಾಕ್ಕೂ ಹರಡಿತ್ತು. ಪ್ರಜಾಪ್ರಭುತ್ವ, ಉದ್ಯೋಗ ಮತ್ತು ಸ್ವಾತಂತ್ರ್ಯಕ್ಕಾಗಿ ಒತ್ತಾಯಿಸಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರದ ವಿರುದ್ಧ ಸಿಡಿದೆದ್ದಿದ್ದರು. ಪ್ರತಿಭಟನಕಾರರನ್ನು ಬಶರ್ ಸರ್ಕಾರದ ಸೇನಾ ಮುಖಂಡರು ನಿರ್ದಯವಾಗಿ ಹತ್ತಿಕ್ಕತೊಡಗಿದ್ದರು. ನಾಗರಿಕ ಯುದ್ಧ ಸ್ಫೋಟಗೊಂಡಿತ್ತು. ಅದರ ಪರಿಣಾಮಗಳೂ ಘೋರವಾಗಿದ್ದವು. ಸಿರಿಯಾದ ರಸ್ತೆಗಳಲ್ಲಿ ನೆತ್ತರು ಹರಿದಿತ್ತು.

2011ರ ದಂಗೆಯನ್ನು ಕ್ರೂರವಾಗಿ ದಮನ ಮಾಡಿದ ನಂತರ ಅಸಾದ್ ಸರ್ಕಾರದ ವಿರುದ್ಧ ಜನರ ಅಸಮಾಧಾನ, ಆಕ್ರೋಶ ಮತ್ತಷ್ಟು ಹೆಚ್ಚಾಗಿತ್ತು. ಸರ್ಕಾರದ ವಿರುದ್ಧ ಜನಾಭಿಪ್ರಾಯ ರೂಪುಗೊಳ್ಳತೊಡಗಿತ್ತು. ಇದೆಲ್ಲದರ ಅಂತಿಮ ಫಲವೇ ಈಗ ಬಶರ್ ಅಲ್ ಅಸಾದ್ ಜನರ ದಂಗೆಗೆ ಹೆದರಿ ದೇಶ ಬಿಟ್ಟು ಪಲಾಯನ ಮಾಡಿರುವುದು. ವಾಸ್ತವವಾಗಿ, ಹಯಾತ್ ತಹ್ರೀರ್ ಅಲ್-ಶಾಮ್ (ಎಚ್‌ಟಿಎಸ್) ಸಂಘಟನೆ ನವೆಂಬರ್ ಕೊನೆಯಲ್ಲಿ ಅಲೆಪ್ಪೊ ನಗರವನ್ನು ಹೆಚ್ಚು ಪ್ರತಿರೋಧವಿಲ್ಲದೆ ವಶಕ್ಕೆ ಪಡೆದುಕೊಂಡಾಗಲೇ ಬಶರ್ ನಿರ್ಗಮನ ಸನ್ನಿಹಿತವಾಗಿದೆ ಎನ್ನುವುದರ ಸೂಚನೆ ಸಿಕ್ಕಿತ್ತು. 54 ವರ್ಷದ ಅವರ ಕುಟುಂಬದ ಆಡಳಿತ ಸಿರಿಯಾದಲ್ಲಿ ಅಂತ್ಯವಾಗಿದೆ.

ಶೇಖ್ ಹಸೀನಾ ಪಲಾಯನ

ಬಾಂಗ್ಲಾದೇಶದಲ್ಲಿ ಅವಾಮಿ ಲೀಗ್ ಮುಖ್ಯಸ್ಥೆ ಶೇಖ್ ಹಸೀನಾ ನೇತೃತ್ವದ ಸರ್ಕಾರವೂ ಇದೇ ವರ್ಷದ ಆಗಸ್ಟ್ ತಿಂಗಳಲ್ಲಿ ಜನರ ದಂಗೆಯಿಂದಲೇ ಪತನಗೊಂಡಿತ್ತು. 1971ರ ಬಾಂಗ್ಲಾ ವಿಮೋಚನಾ ಸಂಘರ್ಷದಲ್ಲಿ ಭಾಗಿಯಾದ ಸೈನಿಕರ ಸಂಬಂಧಿಕರಿಗೆ ಸರ್ಕಾರಿ ಉದ್ಯೋಗಗಳಲ್ಲಿ ಶೇ 30ರಷ್ಟು ಮೀಸಲಾತಿ ನೀಡುವುದರ ವಿರುದ್ಧ ಹುಟ್ಟಿಕೊಂಡ ಹೋರಾಟ, ಪ್ರಧಾನಿ ಶೇಖ್ ಹಸೀನಾ ಸರ್ಕಾರದ ವಿರೋಧಿ ಹೋರಾಟವಾಗಿ ರೂಪುತಳೆದಿತ್ತು. ವಿದ್ಯಾರ್ಥಿಗಳು ಆರಂಭಿಸಿದ ಈ ಪ್ರತಿಭಟನೆಗೆ ವಿವಿಧ ರಾಜಕೀಯ ಪಕ್ಷಗಳು, ಗಣ್ಯರು ಬೆಂಬಲ ನೀಡಿದ್ದರು. ಪ್ರತಿಭಟನೆಯ ಸಂದರ್ಭದಲ್ಲಿ 440ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದರು ಎನ್ನಲಾಗಿತ್ತು. ಕೊನೆಗೆ ಹಸೀನಾ ದೇಶದಿಂದ ಪಲಾಯನ ಮಾಡಬೇಕಾಯಿತು.

ಗೊಟಬಯ ದುರಾಡಳಿತ

ಶ್ರೀಲಂಕಾ ದೇಶದ್ದೂ ಇಂಥದ್ದೇ ಕಥೆ. ಗೊಟಬಯ ರಾಜಪಕ್ಸ ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ದೇಶ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿತ್ತು. ಜನ ಸೇವಿಸುವ ಆಹಾರ ಪದಾರ್ಥಗಳಿಂದ ಹಿಡಿದು ದಿನನಿತ್ಯ ಬಳಸುವ ಪೆಟ್ರೋಲ್ ಡೀಸೆಲ್‌ವರೆಗಿನ ಅತ್ಯವಶ್ಯಕ ವಸ್ತುಗಳ ದರವು ಆಕಾಶ ಮುಟ್ಟಿತ್ತು. ಅಡುಗೆ ಅನಿಲ, ಔಷಧಿಗಳಿಗಾಗಿ ಜನ ಕ್ಯೂ ನಿಲ್ಲಬೇಕಿತ್ತು. ಗೊಟಬಯ ದುರಾಡಳಿತದ ವಿರುದ್ಧ ಪ್ರತಿಭಟನೆಗಳು ಆರಂಭವಾದವು. ಜನತಾ ದಂಗೆಯ ಪರಿಣಾಮ 2022ರ ಜುಲೈನಲ್ಲಿ ಗೊಟಬಯ ದೇಶ ತೊರೆದಿದ್ದರು.

ಶ್ರೀಲಂಕಾದಲ್ಲಿ ಜನತಾ ದಂಗೆಯ ಅಂತಿಮ ಹಂತದಲ್ಲಿ ಜನ ಅಧ್ಯಕ್ಷರ ನಿವಾಸಕ್ಕೆ ನುಗ್ಗಿ, ದಾಂಧಲೆ ಎಬ್ಬಿಸಿದ್ದರು. ಐಷಾರಾಮಿ ಬೆಡ್ ರೂಂಗೆ ನುಗ್ಗಿ ಸೆಲ್ಫಿ ತೆಗೆದುಕೊಂಡಿದ್ದರು, ಈಜುಕೊಳದಲ್ಲಿ ಈಜಾಡಿದ್ದರು, ಬಂಗಲೆಯಲ್ಲಿಯೇ ಅಡುಗೆ ಮಾಡಿ ಊಟ ಮಾಡಿದ್ದರು. ಬಾಂಗ್ಲಾ ಪ್ರಧಾನಿಯಾಗಿದ್ದ ಶೇಖ್ ಹಸೀನಾ ನಿವಾಸದ ಮೇಲೂ ದಾಳಿ ಮಾಡಿದ್ದ ಯುವಕರು, ಅಲ್ಲಿದ್ದ ಬಟ್ಟೆ ಸೇರಿದಂತೆ ಹಲವು ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿದ್ದರು. ಸಿರಿಯಾದಲ್ಲಿಯೂ ಅಸಾದ್ ಅರಮನೆ ಮೇಲೆ ದಾಳಿ ಮಾಡಿರುವ ಜನ, ಮನೆಯನ್ನು ಧ್ವಂಸ ಮಾಡಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೂರೂ ದೇಶಗಳಲ್ಲಿ ಅಧಿಕಾರದ ಕೇಂದ್ರವಾದ ಅಧ್ಯಕ್ಷರ ಕಚೇರಿ/ಪ್ರಧಾನಿ ಕಚೇರಿ, ಅವರ ಮನೆಗಳ ಮೇಲೆ ದಾಳಿ ಮಾಡಿರುವುದು ಜನರ ಪ್ರತಿಭಟನೆಯ, ಸಿಟ್ಟಿನ ಒಂದು ರೂಪ ಎಂದೇ ವಿಶ್ಲೇಷಿಸಲಾಗುತ್ತಿದೆ.

ಜನತಾ ದಂಗೆಯ ಈ ಘಟನೆಗಳು ಮೇಲ್ನೋಟಕ್ಕೆ ಕಾಣುವಷ್ಟು ಸರಳವಲ್ಲ. ಇವುಗಳ ಹಿಂದೆ ಮೂಲಭೂತವಾದಿ ಸಂಘಟನೆಗಳೂ ಸೇರಿದಂತೆ ಹಲವು ಹಿತಾಸಕ್ತ ಗುಂಪುಗಳು, ಚೀನಾ, ಅಮೆರಿಕ, ರಷ್ಯಾದಂಥ ದೊಡ್ಡ ರಾಷ್ಟ್ರಗಳ ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿಗಳೂ ಇವೆ ಎನ್ನುವುದನ್ನು ಅಲ್ಲಗಳೆಯಲಾಗದು.

ಆಧಾರ: ಪಿಟಿಐ, ಬ್ರಿಟಾನಿಕಾ, ಬಿಬಿಸಿ, ವರ್ಲ್ಡ್‌ಪಾಪ್ಯುಲೇಷನ್‌ರಿವೀವ್.ಕಾಂ

ಜನರ ದಂಗೆ/ ನಾಗರಿಕ ಯುದ್ಧ ನಡೆದ ಪ್ರಮುಖ ರಾಷ್ಟ್ರಗಳು


ಸಿರಿಯಾ
2011ರಲ್ಲಿ ನಾಗರಿಕ ಯುದ್ಧ ಆರಂಭಗೊಂಡಿದ್ದ ಸಿರಿಯಾದಲ್ಲಿ 13 ವರ್ಷಗಳ ಬಳಿಕ (2024 ಡಿಸೆಂಬರ್) ಜನರೇ ದಂಗೆ ಎದ್ದು ಸರ್ಕಾರವನ್ನು ಉರುಳಿಸಿದ್ದಾರೆ

ಅಫ್ಗಾನಿಸ್ತಾನ
20 ವರ್ಷಗಳ ಬಳಿಕ 2021ರಲ್ಲಿ ತಾಲಿಬಾನ್ ಸಂಘಟನೆಯು ಅಫ್ಗಾನಿಸ್ತಾನ ಸರ್ಕಾರ ಮತ್ತು ಸೇನೆಯ ಮೇಲೆ ಸಂಪೂರ್ಣ ನಿಯಂತ್ರಣವನ್ನು ಪಡೆದುಕೊಂಡು, ಆಳ್ವಿಕೆ ಆರಂಭಿಸಿತು. ಇಡೀ ರಾಷ್ಟ್ರದಲ್ಲಿ ಅಶಾಂತಿ ತಾಂಡವವಾಡುತ್ತಿದೆ

ಬಾಂಗ್ಲಾದೇಶ
ಸರ್ಕಾರಿ ನೇಮಕಾತಿಯಲ್ಲಿ ಪಾಲಿಸಲಾಗುತ್ತಿರುವ ಮೀಸಲಾತಿ ನಿಯಮದ ವಿರುದ್ಧ ವಿದ್ಯಾರ್ಥಿಗಳು ಆರಂಭಿಸಿದ ಚಳವಳಿ ತೀವ್ರಗೊಂಡು, ಜನರ ದಂಗೆಯಾಗಿ ಮಾರ್ಪಟ್ಟು 2024ರ ಆಗಸ್ಟ್‌ನಲ್ಲಿ ಶೇಖ್ ಹಸಿನಾ ನೇತೃತ್ವದ ಸರ್ಕಾರದ ಪತನಕ್ಕೆ ಕಾರಣವಾಯಿತು

ಲಿಬಿಯಾ
ಮುಅಮ್ಮರ್ ಗಡಾಫಿ ಅವರ ನಾಲ್ಕು ದಶಕಗಳ ಸರ್ವಾಧಿಕಾರಿ ಆಡಳಿತದ ವಿರುದ್ಧ ಆರಂಭಗೊಂಡ ಜನರ ಹೋರಾಟವು ನಾಗರಿಕ ಯುದ್ಧವಾಗಿ ಪರಿವರ್ತನೆಗೊಂಡು, ಅಂತರರಾಷ್ಟ್ರೀಯ ಪಡೆಗಳ ಮಧ್ಯಪ್ರವೇಶದೊಂದಿಗೆ, ಗಡಾಫಿ ಆಡಳಿತ 2011ರಲ್ಲಿ ಕೊನೆಗೊಂಡಿತು. ಗಡಾಫಿ ಅವರು ವಿರೋಧಿ ಪಡೆಗಳ ಗುಂಡಿಗೆ ಬಲಿಯಾದರು. 2014ರ ನಂತರ ಲಿಬಿಯಾದಲ್ಲಿ ರಾಜಕೀಯ ಬಿಕ್ಕಟ್ಟು ತಲೆ ದೋರಿದ್ದು, ಹಲವು ವಾರಗಳಿಂದ ಅದು ತೀವ್ರಗೊಂಡಿದೆ

ಮ್ಯಾನ್ಮಾರ್
ಮ್ಯಾನ್ಮಾರ್‌ನ ಸೇನೆಯು 2021ರಲ್ಲಿ ಸರ್ಕಾರದ ವಿರುದ್ಧ ದಂಗೆ ಎದ್ದು ಸರ್ಕಾರವನ್ನು ಪತನಗೊಳಿಸಿದ ನಂತರ ಆರಂಭಗೊಂಡ ನಾಗರಿಕ ಯುದ್ಧ ಈಗಲೂ ನಡೆಯುತ್ತಿದೆ. 50 ಸಾವಿರಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಲಕ್ಷಾಂತರ ಮಂದಿ ನಿರಾಶ್ರಿತರಾಗಿದ್ದಾರೆ



ಟ್ಯುನೀಷಿಯಾ ಮತ್ತು ಈಜಿಪ್ಟ್
ಪಶ್ಚಿಮ ಏಷ್ಯಾ ಮತ್ತು ಉತ್ತರ ಆಫ್ರಿಕಾ ರಾಷ್ಟ್ರಗಳಲ್ಲಿ 2010 ಮತ್ತು 2011ರಲ್ಲಿ ನಡೆದ ಪ್ರಜಾಪ್ರಭುತ್ವ ಪರ ಜನರ ಪ್ರತಿಭಟನೆಗಳಿಂದಾಗಿ ಟ್ಯುನೀಷಿಯಾ ಮತ್ತು ಈಜಿಪ್ಟ್‌ನಲ್ಲಿ ಸರ್ಕಾರ ಪತನಗೊಂಡಿದ್ದವು

ಶ್ರೀಲಂಕಾ
ಶ್ರೀಲಂಕಾದಲ್ಲಿ ಉಂಟಾದ ಆರ್ಥಿಕ ಬಿಕ್ಕಟ್ಟಿನಿಂದ ಬೇಸತ್ತ ಜನರು 2022ರಲ್ಲಿ ಅಧ್ಯಕ್ಷ ಗೊಟಬಯ ರಾಜಪಕ್ಸೆ ನೇತೃತ್ವದ ಸರ್ಕಾರದ ವಿರುದ್ಧ ಕೈಗೊಂಡ ಪ್ರತಿಭಟನೆಯು ಸರ್ಕಾರವನ್ನೇ ಉರುಳಿಸಿತು

ಸುಡಾನ್
ಸುಡಾನಿನಲ್ಲಿ ಸೇನೆ ಮತ್ತು ಅರೆ ಸೇನಾ ಕ್ಷಿಪ್ರ ಬೆಂಬಲ ಪಡೆಗಳ ನಡುವೆ ನಡೆಯುತ್ತಿದ್ದ ಘರ್ಷಣೆಯು ಕಳೆದ ವರ್ಷ ಏಪ್ರಿಲ್‌ನಿಂದ ಯುದ್ಧದ ಸ್ವರೂಪ ಪಡೆದಿದ್ದು, ದೇಶವನ್ನು ಪತನದ ಅಂಚಿಗೆ ಕೊಂಡೊಯ್ದಿದೆ. ಸಾವಿರಾರು ಜನರು ಮೃತಪಟ್ಟಿದ್ದು ಲಕ್ಷಾಂತರ ಜನರು ನಿರಾಶ್ರಿತರಾಗಿದ್ದಾರೆ

ಇಥಿಯೋಪಿಯಾ
ಇಥಿಯೋಪಿಯಾದ ಒಕ್ಕೂಟ ಸರ್ಕಾರ ಮತ್ತು ಟಿಗ್ರೇ ಪೀಪಲ್ಸ್ ಲಿಬರೇಷನ್ ಫ್ರಂಟ್ ನಡುವೆ 2020–22ರ ನಡುವೆ ಎರಡು ವರ್ಷ ಯುದ್ಧ ನಡೆದಿತ್ತು. ನಂತರ ಎರಡೂ ಕಡೆಯವರು ಒಪ್ಪಂದದ ಮೂಲಕ ಘರ್ಷಣೆಯನ್ನು ಕೊನೆಗೊಳಿಸಿದ್ದಾರೆ. ಯುದ್ಧ ತಂದ ಸಂಕಷ್ಟದಿಂದ ನಾಗರಿಕರು ಇನ್ನೂ ಹೊರ ಬಂದಿಲ್ಲ

ಯೆಮನ್
2011ರಲ್ಲಿ ಯೆಮನ್‌ನಲ್ಲೂ ಆಡಳಿತದ ವಿರುದ್ಧ ಹೋರಾಟ ಆರಂಭಗೊಂಡಿತ್ತು. 2014ರ ನಂತರ ಮತ್ತೆ ನಾಗರಿಕ ಯುದ್ಧ ಕಾಣಿಸಿಕೊಂಡಿದೆ. ಹೂಥಿ ಹೋರಾಟಗಾರರು ಮತ್ತು ಆಡಳಿತದ ನಡುವೆ ಘರ್ಷಣೆ ನಡೆಯುತ್ತಿದೆ. ಸೌದಿ ಅರೇಬಿಯಾ ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ಸಹಜ ಸ್ಥಿತಿಗೆ ತರಲು ಯತ್ನಿಸುತ್ತಿದೆ. ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಮತ್ತು ಹಮಾಸ್ ನಡುವೆ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಹೂಥಿ ಸಂಘಟನೆಯು ಇಸ್ರೇಲ್ ವಿರುದ್ಧ ಕ್ಷಿಪಣಿ ದಾಳಿ ನಡೆಸಿತ್ತು

ಮೂಲಭೂತವಾದಿ ಸಂಘಟನೆಗಳ ಕೈ ಮೇಲಾಗುವ ಆತಂಕ

ನಾಗರಿಕ ಯುದ್ಧ/ಜನರ ದಂಗೆ ನಡೆದು ಸರ್ಕಾರ ಪತನ ಹೊಂದಿದ ಕೆಲ ರಾಷ್ಟ್ರಗಳಲ್ಲಿ ಜನರ ಹೋರಾಟದೊಂದಿಗೆ ಮೂಲಭೂತವಾದಿ ಸಂಘಟನೆಗಳೂ ಸೇರಿವೆ. ಅಸ್ತಿತ್ವಕ್ಕೆ ಬಂದಿರುವ ಹೊಸ ಸರ್ಕಾರಗಳ ಮೇಲೆ ಈ ಸಂಘಟನೆಗಳು ಪ್ರಭಾವ ಬೀರುವ, ಅವುಗಳ ಮುಖಂಡರು ಆಡಳಿತವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವ ಆತಂಕ ವ್ಯಕ್ತವಾಗಿದೆ.

ಬಾಂಗ್ಲಾದೇಶದಲ್ಲಿ ನಡೆದ ಪ್ರತಿಭಟನೆಯಲ್ಲಿ ಜಮಾತೆ ಇ–ಇಸ್ಲಾಮಿ ಪಕ್ಷ ಮತ್ತು ಅದರ ವಿದ್ಯಾರ್ಥಿ ಘಟಕ ಸಕ್ರಿಯವಾಗಿ ಭಾಗವಹಿಸಿತ್ತು. ಈ ಸಂಘಟನೆಯು ಭಯೋತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದೆ ಎಂದು ಆರೋಪಿಸಿದ್ದ ಶೇಖ್ ಹಸೀನಾ ನೇತೃತ್ವದ ಸರ್ಕಾರ ಭಯೋತ್ಪಾದನಾ ತಡೆ ಕಾನೂನು ಅಡಿಯಲ್ಲಿ ಪಕ್ಷಕ್ಕೆ ನಿಷೇಧ ಹೇರಿತ್ತು. ಮಧ್ಯಂತರ ಸರ್ಕಾರವು ಈ ನಿರ್ಬಂಧವನ್ನು ತೆರವುಗೊಳಿಸಿದೆ. ಜಮಾತೆ ಇ–ಇಸ್ಲಾಮಿಯು ಇಸ್ಲಾಂ ಮೂಲಭೂತವಾದ ಬೆಂಬಲಿಸುತ್ತದೆ ಎನ್ನಲಾಗಿದೆ.

ಸಿರಿಯಾದಲ್ಲಿ ಬಶರ್ ಅಸಾದ್ ಸರ್ಕಾರದ ವಿರುದ್ಧದ ಹೋರಾಟದ ನಾಯಕತ್ವ ವಹಿಸಿದ್ದ, ಹಯಾತ್ ತಹ್ರೀರ್ ಅಲ್ ಶಾಮ್ ಬಂಡುಕೋರ ಪಡೆಯ ಮುಖ್ಯಸ್ಥ ಅಬು ಮೊಹಮ್ಮದ್ ಅಲ್ ಗೊಲಾನಿ ಅವರು ಉಗ್ರ ಸಂಘಟನೆ ಅಲ್ ಕೈದಾದೊಂದಿಗೆ ಸಂಪರ್ಕ ಹೊಂದಿದ್ದಾರೆ. ಅವರ ನೇತೃತ್ವದಲ್ಲೇ ಸಿರಿಯಾದಲ್ಲಿ ಹೊಸ ಸರ್ಕಾರ ರಚನೆಯಾಗಬಹುದು ಎಂದು ಹೇಳಲಾಗುತ್ತಿದೆ.

ಯೆಮನ್‌ನಲ್ಲಿ ಸರ್ಕಾರದೊಂದಿಗೆ ಘರ್ಷಣೆಯಲ್ಲಿ ತೊಡಗಿರುವ ಹೂಥಿ ಸಂಘಟನೆಯು ಇಸ್ಲಾಂ ಮೂಲಭೂತವಾದವನ್ನು ಪಾಲಿಸುತ್ತದೆ. ಪ್ಯಾಲೆಸ್ಟೀನಿನಲ್ಲಿ ಹಮಾಸ್, ಲೆಬನಾನಿನಲ್ಲಿ ಪರ್ಯಾಯ ಆಡಳಿತವನ್ನು ನಡೆಸುತ್ತಿರುವ ಹಿಜ್ಬುಲ್ಲಾ ಸಂಘಟನೆಗಳು ಕೂಡ ಇಸ್ಲಾಂ ಮೂಲಭೂತವಾದದ ಪರವಾಗಿವೆ.

ಸುಡಾನಿನ ಸರ್ವಾಧಿಕಾರಿಯಾಗಿದ್ದ ಒಮರ್ ಅಲ್ ಬಶೀರ್ ಅವರನ್ನು ಐದು ವರ್ಷಗಳ ಹಿಂದೆ ಪದಚ್ಯುತಿಗೊಳಿಸಿದ ನಂತರ ಅಧಿಕಾರಕ್ಕಾಗಿ ಅಲ್ಲಿನ ಸೇನೆ ಮತ್ತು ಅರೆ ಸೇನಾ ಕ್ಷಿಪ್ರ ಬೆಂಬಲ ಪಡೆಗಳ ನಡುವೆ ನಡೆಯುತ್ತಿರುವ ಯುದ್ಧದ ಲಾಭ ಪಡೆದು ಇಸ್ಲಾಂ ಮೂಲಭೂತವಾದಿಗಳು ದೇಶದಲ್ಲಿ ಸಕ್ರಿಯರಾಗಬಹುದು ಎಂದು ಸಾಮಾಜಿಕ ಕಾರ್ಯಕರ್ತರು, ಪ್ರಜಾಪ್ರಭುತ್ವ ಪರ ಇರುವ ರಾಜಕಾರಣಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಸಿನಿ ಬಿಟ್ಸ್



ಉಪೇಂದ್ರ, ಶಿವರಾಜ್‌ಕುಮಾರ್, ರಾಜ್ ಬಿ.ಶೆಟ್ಟಿ

ಪೋಸ್ಟ್ ಪ್ರೊಡಕ್ಷನ್‌ನಲ್ಲಿ ‘45’

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳುತ್ತಿರುವ, ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಿ ಕಾಣಿಸಿಕೊಳ್ಳಲಿರುವ ‘45’ ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಭರದಿಂದ ಸಾಗಿದೆ. ದೊಡ್ಡ ಬಜೆಟ್‌ನಲ್ಲಿ ನಿರ್ಮಾಣವಾಗಿರುವ ಈ ಸಿನಿಮಾದ ಗ್ರಾಫಿಕ್ಸ್ ಕೆಲಸಗಳನ್ನು ಖ್ಯಾತ ‘MARZ’ ವಿಎಫ್‌ಎಕ್ಸ್ ಕಂಪನಿ ಮಾಡುತ್ತಿದೆ. ಹಾಲಿವುಡ್‌ನ ನೂರೈವತ್ತಕ್ಕೂ ಅಧಿಕ ಸಿನಿಮಾಗಳಿಗೆ ವಿಎಫ್‌ಎಕ್ಸ್ ಮಾಡಿರುವ ಈ ಕಂಪನಿ, ಮೊದಲ ಬಾರಿಗೆ ಕನ್ನಡ ಸಿನಿಮಾವೊಂದಕ್ಕೆ ಕೆಲಸ ಮಾಡುತ್ತಿದೆ. ರಾಫೆಲ್ ಹಾಗೂ ಜಸ್ಟಿನ್ ಎಂಬುವವರು ‘45’ ಸಿನಿಮಾದ ವಿಎಫ್‌ಎಕ್ಸ್ ಮಾಡುತ್ತಿದ್ದಾರೆ ಎಂದು ಚಿತ್ರತಂಡ ತಿಳಿಸಿದೆ. ನಿರ್ದೇಶಕ ಅರ್ಜುನ್ ಜನ್ಯ ಅವರೂ ಟೊರಾಂಟೊದಲ್ಲಿರುವ ಕಂಪನಿಯ ಕಚೇರಿಗೆ ಇತ್ತೀಚೆಗೆ ಭೇಟಿ ನೀಡಿದ್ದರು.

ಅರ್ಜುನ್ ಜನ್ಯ ನಿರ್ದೇಶನದ ಚೊಚ್ಚಲ ಚಿತ್ರವನ್ನು ಎಂ. ರಮೇಶ್ ರೆಡ್ಡಿ ಅವರು ತಮ್ಮ ‘ಸೂರಜ್ ಪ್ರೊಡಕ್ಷನ್’ ಬ್ಯಾನರ್‌ನಲ್ಲಿ ನಿರ್ಮಾಣ ಮಾಡಿದ್ದಾರೆ. ಈ ಸಿನಿಮಾ ಕನ್ನಡ, ತಮಿಳು, ತೆಲುಗು, ಹಿಂದಿ ಹಾಗೂ ಮಲಯಾಳದಲ್ಲಿ ತೆರೆಕಾಣಲಿದೆ. ಚಿತ್ರಕ್ಕೆ ಅರ್ಜುನ್ ಜನ್ಯ ಅವರೇ ಕಥೆ-ಚಿತ್ರಕಥೆ ಬರೆದು ಸಂಗೀತ ಸಂಯೋಜಿಸಿದ್ದಾರೆ.



ಧೀರೆನ್‌ಗೆ ಸಂದೀಪ್ ಸುಂಕದ್ ಆ್ಯಕ್ಷನ್ ಕಟ್

ಸಂದೀಪ್ ಸುಂಕದ್

‘ಶಾಖಾಹಾರಿ’ ಸಿನಿಮಾ ಬಳಿಕ ನಿರ್ದೇಶಕ ಸಂದೀಪ್ ಸುಂಕದ್ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ. ಈ ಸಿನಿಮಾವನ್ನು ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜ್‌ಕುಮಾರ್ ನಿರ್ಮಾಣ ಮಾಡಲಿದ್ದಾರೆ.

‘ವೇದ’ ಸಿನಿಮಾ ಮೂಲಕ ಸಿನಿಮಾ ನಿರ್ಮಾಣಕ್ಕೆ ಇಳಿದಿದ್ದ ಗೀತಾ ಪಿಕ್ಚರ್ಸ್, ಬಳಿಕ ‘ಭೈರತಿ ರಣಗಲ್’ ನಿರ್ಮಾಣ ಮಾಡಿತ್ತು. ನ.14ರಂದು ಮಕ್ಕಳ ದಿನಾಚರಣೆ ಅಂಗವಾಗಿ ಶಿವರಾಜ್‌ಕುಮಾರ್ ಅವರ ಹೊಸ ಸಿನಿಮಾವನ್ನು ಘೋಷಣೆ ಮಾಡಿತ್ತು. ಶ್ರೀನಿ ನಿರ್ದೇಶನದ ‘A for ಆನಂದ್’ ಸಿನಿಮಾ ಇದಾಗಿದೆ. ಇದೀಗ ತಮ್ಮ ನಾಲ್ಕನೇ ಸಿನಿಮಾವನ್ನು ಗೀತಾ ಶಿವರಾಜ್‌ಕುಮಾರ್ ಘೋಷಿಸಿದ್ದಾರೆ. ಈ ಸಿನಿಮಾದಲ್ಲಿ ಧೀರೆನ್ ಆರ್ ರಾಜ್‌ಕುಮಾರ್ ನಾಯಕನಾಗಿ ನಟಿಸಲಿದ್ದಾರೆ. ‘ಕೆಲ ತಿಂಗಳುಗಳಿಂದ ಕಥೆಯ ಚರ್ಚೆ ನಡೆಯುತ್ತಿತ್ತು. ಕಥೆಯನ್ನು ಶಿವರಾಜ್‌ಕುಮಾರ್ ಮತ್ತು ಗೀತಾ ಶಿವರಾಜ್‌ಕುಮಾರ್ ಅವರಿಗೆ ಹೇಳಿದಾಗ, ಅವರಿಗೆ ತುಂಬಾ ಇಷ್ಟವಾಯಿತು. ಇಂತಹ ದೊಡ್ಡ ಬ್ಯಾನರ್ ಜೊತೆ ಕೆಲಸ ಮಾಡುವ ಆಸೆ ಎಷ್ಟೋ ನಿರ್ದೇಶಕರಿಗೆ ಇರುತ್ತದೆ. ನನ್ನ ಎರಡನೇ ಸಿನಿಮಾಗೆ ಈ ಅವಕಾಶ ಸಿಕ್ಕಿರುವುದಕ್ಕೆ ಬಹಳ ಸಂತೋಷವಿದೆ’ ಎಂದಿದ್ದಾರೆ.

‘ನನ್ನ ಮೊದಲ ಸಿನಿಮಾ ಬಳಿಕ ಹಲವಾರು ಆಫರ್‌ಗಳು ಬಂದರೂ ನಾನು ನಿರಾಕರಿಸಿದ್ದೆ. ನಟನೆಗೆ ಹೆಚ್ಚಿನ ಪ್ರಾಶಸ್ತ್ಯವಿರುವ ಸಿನಿಮಾ ಮಾಡಬೇಕು ಎನ್ನುವ ಹಂಬಲವಿತ್ತು. ‘ಶಾಖಾಹಾರಿ’ ಸಿನಿಮಾ ಕರ್ನಾಟಕದಲ್ಲಷ್ಟೇ ಅಲ್ಲ ಹೊರ ರಾಜ್ಯಗಳಲ್ಲಿ ಒಟಿಟಿ ಮೂಲಕ ಸದ್ದು ಮಾಡಿದೆ. ಇಂತಹ ನಿರ್ದೇಶಕರ ಜೊತೆ ಕೆಲಸ ಮಾಡುವ ಅವಕಾಶ ಸಿಕ್ಕಿರುವುದು ಖುಷಿಯ ವಿಷಯ’ ಎನ್ನುತ್ತಾರೆ ಧೀರೆನ್. ಚಿತ್ರದ ತಾಂತ್ರಿಕ ತಂಡದ ವಿವರಗಳು ಇನ್ನಷ್ಟೇ ಬಹಿರಂಗವಾಗಬೇಕಿದೆ. ಚಿತ್ರೀಕರಣ ಶೀಘ್ರದಲ್ಲೇ ಪ್ರಾರಂಭವಾಗಲಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ನಮ್ಮ ನಮ್ಮ ಕರ್ಮದಂತೆ ಫಲ!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

84

ಸತ್ಯ ಹರಿಶ್ಚಂದ್ರ ಎಂತಹ ಪುಣ್ಯಾತ್ಮ! ಆತ ನಡೆದುಕೊಂಡು ಹೋಗುತ್ತಿದ್ದರೆ ಪುರದ ಪುಣ್ಯವೇ ಮನುಷ್ಯರೂಪದಲ್ಲಿ ಹೋಗುತ್ತಿದೆ ಎಂದು ಜನ ಹೇಳುತ್ತಿದ್ದರು. ಆತ ದೇಶ ಬಿಟ್ಟು ಹೊರಟಾಗ ದೇಶದ ಪುಣ್ಯವೇ ಬಿಟ್ಟು ಹೊರಟಿತು ಅಂತ ಜನ ಹೇಳಿದ್ದರು. ಅಂತಹ ಮನುಷ್ಯಗೆ ಸ್ಮಶಾನ ಕಾಯುವ ಕಷ್ಟ ಬಂತು.

ರಮಣ ಮಹರ್ಷಿಗಳನ್ನು ನೋಡಲು ದೇಶ ವಿದೇಶದಿಂದ ಜನ ಬರುತ್ತಿದ್ದರು. ‘ನಾವು ದೇವರನ್ನು ನೋಡಿಲ್ಲ. ರಮಣ ಮಹರ್ಷಿಗಳನ್ನು ನೋಡಿ ದೇವರನ್ನು ಕಂಡ ತೃಪ್ತಿ ಪಡುತ್ತೀವಿ’ ಅಂತಿದ್ದರು. ಅಂತಹ ರಮಣಮಹರ್ಷಿಗಳಿಗೂ ಕ್ಯಾನ್ಸರ್ ಆಯಿತು. ಅವರ ಮೈಯಿಂದ ಹುಳಗಳು ಉದುರುತ್ತಿದ್ದವಂತೆ. ಕೆಳಕ್ಕೆ ಬಿದ್ದಹುಳಗಳನ್ನು ಅವರು ಎತ್ತಿ ಮೈಮೇಲೆ ಹಾಕಿಕೊಂಡು ಬಟ್ಟೆ ಸುತ್ತಿಕೊಳ್ಳುತ್ತಿದ್ದರಂತೆ. ಅವರ ಭಕ್ತರು ‘ಹುಳಗಳನ್ನು ಮೈಮೇಲೆ ಹಾಕಿಕೊಳ್ಳಬೇಡಿ. ನಿಮ್ಮನ್ನು ವೈದ್ಯರ ಬಳಿಗೆ ಕರೆದುಕೊಂಡು ಹೋಗ್ತೇವೆ’ ಎಂದು ಹೇಳಿದರೆ ರಮಣರು ‘ನಾನು ಸತ್ತ ಮೇಲೆ ಈ ದೇಹ ಮಣ್ಣಲ್ಲಿ ಮಣ್ಣಾಗಿ ಹೂಗುವಂತಹದ್ದು, ಈಗ ಆ ಹುಳಗಳಿಗಾದರೂ ಆಹಾರವಾಗಲಿ’ ಎಂದು ಹೇಳುತ್ತಿದ್ದರಂತೆ.

ಅಂಥವರಿಗೆ ಯಾಕೆ ಹೀಗಾಯಿತು? ಯಾಕೆಂದರೆ ಇದು ಕರ್ಮಾಧೀನ. ನಮಗೆ ದುಃಖ ಬಂದರೆ ಅದಕ್ಕೆ ನಾವು ಮಾಡಿದ ಕೆಟ್ಟ ಕೆಲಸಗಳು ಕಾರಣ. ನಮಗೆ ಸುಖ ಬಂದರೆ ಅದಕ್ಕೆ ನಾವು ಮಾಡಿದ ಒಳ್ಳೆಯ ಕೆಲಸಗಳು ಕಾರಣ ಅಷ್ಟೆ. ಕೆಟ್ಟ ಕೆಲಸಗಳನ್ನು ಮಾಡಿ ಒಳ್ಳೆಯ ಫಲ ಬೇಕು ಅಂದರೆ ಸಿಗೋದಿಲ್ಲ. ಒಳ್ಳೆಯ ಕೆಲಸಗಳನ್ನು ಮಾಡಿದರೆ ಕೆಟ್ಟ ಫಲಗಳೂ ಸಿಗೋದಿಲ್ಲ. ಏನು ಕರ್ಮ ಮಾಡಿದ್ದೇವೋ ಅದೇ ಫಲ ಸಿಗೋದು. ಬೇವಿನ ಬೀಜ ಬಿತ್ತಿ ಜೇನುತುಪ್ಪ ಹಾಕಿ ಆಕಳ ಹಾಲು ಹಾಕಿದರೂ ಬೇವಿನ ಮರ ಮಾವಿನ ಫಲ ಕೊಡೋದಿಲ್ಲ.

ಒಮ್ಮೆ ದೂರ್ವಾಸ ಮುನಿಗಳು ನದಿಯಲ್ಲಿ ಸ್ನಾನ ಮಾಡುತ್ತಿದ್ದರು. ಅವರು ಉಟ್ಟಿದ್ದ ಕೌಪೀನ (ಲಂಗೋಟಿ) ಜಾರಿ ನದಿಯಲ್ಲಿ ತೇಲಿ ಹೋಯಿತು. ಅದೇ ಹೊತ್ತಿಗೆ ದ್ರೌಪದಿ ಸಖಿಯರೊಂದಿಗೆ ಸ್ನಾನಕ್ಕೆ ಬಂದಳು. ಹೆಣ್ಣು ಮಕ್ಕಳು ಬಂದಾರ ಅಂತ ನದಿಯಿಂದ ಮೇಲಕ್ಕೆ ಏಳೋದು ಹ್ಯಾಂಗ ಅಂತ ಮುನಿಗಳು, ದೊಡ್ಡವರು ಸ್ನಾನ ಮಾಡಾಕ ಹತ್ತಾರ ನಾವು ನದಿಗೆ ಇಳಿಯೋದು ಹ್ಯಾಂಗ ಅಂತ ದ್ರೌಪದಿ. ಒಂದು ತಾಸು ಎರಡು ತಾಸು ಹೀಂಗೇ ಸುಮ್ಮನಿದ್ದರು. ಆಗ ದ್ರೌಪದಿಗೆ ಗೊತ್ತಾತು. ಮುನಿಗಳಿಗೆ ಏನೋ ತೊಂದರೆ ಆಗಿದೆ ಅಂತ ಸ್ವಲ್ಪ ನದಿಯ ಮೇಲಕ್ಕೆ ಹೋಗಿ ತಾನುಟ್ಟ ಪೀತಾಂಬರವನ್ನು ಹರಿದು ನೀರಿನೊಳಗೆ ಬಿಟ್ಟಳು. ಅದು ಹರಿದು ಬಂದು ಮುನಿಗೆ ಸಿಕ್ಕಿತು. ಮುನಿಗಳು ಅದನ್ನು ಉಟ್ಟುಕೊಂಡು ನದಿಯಿಂದ ಮೇಲಕ್ಕೆ ಬಂದು ದ್ರೌಪದಿಗೆ ‘ಮಗೂ ಇವತ್ತು ನೀನು ನನ್ನ ಮಾನ ಕಾಪಾಡಿದ್ದಿ’ ಎಂದು ಹರಸಿದರು.

ನಂತರ ದ್ರೌಪದಿ ವಸ್ತ್ರಾಪಹರಣವಾದ ಕಾಲದಲ್ಲಿ ಕೃಷ್ಣ ದ್ರೌಪದಿಯ ಮಾನ ಕಾಪಾಡಿದ. ಆಗ ದ್ರೌಪದಿ ಕೃಷ್ಣನಿಗೆ ‘ನೀನು ಮೊದಲೇ ಯಾಕೆ ಬರಲಿಲ್ಲ. ಆ ದುಷ್ಟ ಅರ್ಧ ಸೀರೆ ಎಳೆದ ಮೇಲೆ ಬಂದೆ ನೀನು’ ಎಂದು ಕೇಳಿದಳು. ಅದಕ್ಕೆ ಕೃಷ್ಣ ‘ನಾನು ಹುಡುಕಾಕತ್ತಿದ್ದೆ’ ಎಂದ. ‘ಏನು ಹುಡುಕಾಕತ್ತಿದ್ದೆ?’ ಎಂದು ಪ್ರಶ್ನಿಸಿದಳು ದ್ರೌಪದಿ. ‘ನಿನ್ನ ಪುಣ್ಯನ. ನೀನು ಹಿಂದೆ ದೂರ್ವಾಸ ಮುನಿಗಳ ಮಾನ ಕಾಪಾಡಿದ ವಸ್ತ್ರವೇ ಈಗ ದಿವ್ಯಾಸ್ತ್ರವಾಗಿ ಬಂದು ನಿನ್ನ ಮಾನ ಕಾಪಾಡಿತು’ ಎಂದ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಮಂಗಳವಾರ ಡಿಸೆಂಬರ್ 10, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ದಶಮಿ ಗಂ. 27-43 **ನಕ್ಷತ್ರ:** ಉತ್ತರಾಭಾದ್ರ ಗಂ. 13-30 **ಯೋಗ:** ವ್ಯತೀಪಾತ ಗಂ. 22-03 **ಕರಣ:** ತೈತಿಲ ಗಂ. 16-55, ವೃಶ್ಚಿಕ ಮಾಸದ 24 ನೇ ದಿನ, **ಮಳೆನಕ್ಷತ್ರ:** ಜ್ಯೇಷ್ಠ 3.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 06-47 **ಸೂರ್ಯಾಸ್ತ:** 06-00
ಮುಸ್ಲಿಂ ದಿನಾಂಕ: 07 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 3, 12

ಮೇಷ: ಧ್ಯಾನದಿಂದ ಮಾನಸಿಕ ಧೈರ್ಯ ಮತ್ತು ಸಾಮರ್ಥ್ಯ ಹೆಚ್ಚಲಿದೆ. ಮಹಿಳಾ ಉದ್ಯೋಗಿಗಳಿಗೆ ಬಡ್ತಿ ದೊರೆಯುವ ಸಂಭವವಿದೆ. ವೈದ್ಯಕೀಯ ವಿದ್ಯಾರ್ಥಿಗಳು ಹೆಚ್ಚು ಪರಿಶ್ರಮದಿಂದ ಅಭ್ಯಾಸದಲ್ಲಿ ತೊಡಗಿಕೊಳ್ಳಿ.

ವೃಷಭ: ಕಾರ್ಯಕ್ಷೇತ್ರದಲ್ಲಿ ವಿಳಂಬ ಕಂಡುಬಂದರೂ, ಯೋಜಿತ ಕೆಲಸಗಳು ಈಡೇರಲಿವೆ. ಟ್ರಾವೆಲ್ಸ್ ಉದ್ಯೋಗದವರಿಗೆ ಲಾಭದಾಯಕ ದಿನ. ಸ್ವಸಾಮರ್ಥ್ಯದಿಂದ ಉನ್ನತ ಹುದ್ದೆ ಪಡೆದುಕೊಳ್ಳುವಿರಿ.

ಮಿಥುನ: ಅಧಿಕಾರಿಗಳ ಜೊತೆ ಮುಕ್ತವಾಗಿ ಚರ್ಚಿಸುವ ಮೂಲಕ, ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುವುದು. ಸರ್ಕಾರಿ ಕಾಮಗಾರಿಗಳ ಗುತ್ತಿಗೆ ಸಿಗಲಿದ್ದು, ಆರ್ಥಿಕವಾಗಿ ಅಭಿವೃದ್ಧಿ ಹೊಂದುವಿರಿ.

ಕರ್ಕಾಟಕ: ವಿಳಂಬಗೊಂಡಿದ್ದ ಕಾರ್ಯಗಳು ಚುರುಕಾಗಲಿದ್ದು, ನೆಮ್ಮದಿ ಉಂಟಾಗಲಿದೆ. ಪ್ರಭಾವಿ ವ್ಯಕ್ತಿಗಳ ನಿಕಟ ಸಂಪರ್ಕವು ಕಾರ್ಯಾನುಕೂಲ ಮಾಡಿಕೊಡಲಿದೆ. ಆರ್ಥಿಕ ಮುಗ್ಗಟ್ಟು ನಿವಾರಣೆಯಾಗಲಿದೆ.

ಸಿಂಹ: ಆಪ್ತ ಸ್ನೇಹಿತರು ಮತ್ತು ನೆರೆಯವರೊಂದಿಗಿನ ಬಾಂಧವ್ಯ ಉತ್ತಮಗೊಳ್ಳಲಿದೆ. ವಿದ್ಯಾರ್ಥಿಗಳು ಹೆಚ್ಚು ಶ್ರದ್ಧೆಯಿಂದ ಅಧ್ಯಯನದಲ್ಲಿ ತೊಡಗಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಮಾರಾಟ ಪ್ರತಿನಿಧಿಗಳಿಗೆ ಹೆಚ್ಚಿನ ಕಮಿಷನ್ ಸಿಗಲಿದೆ.

ಕನ್ಯಾ: ಕಚೇರಿಯಲ್ಲಿನ ಭಿನ್ನಾಭಿಪ್ರಾಯಗಳು ಬಗೆ ಹರಿಯಲಿದ್ದು, ಮಾನಸಿಕ ನೆಮ್ಮದಿ ಸಿಗಲಿದೆ. ಅನಗತ್ಯ ಚಿಂತೆ, ಭಯಗಳು ದೂರಾಗಿ ನಿರಾಳರಾಗುವಿರಿ. ಪಾಲುದಾರಿಕೆಯಲ್ಲಿ ನಿರ್ಲಿಪ್ತತೆಯಿಂದ ಇರುವುದು ಉತ್ತಮ.

ತುಲಾ: ವ್ಯವಸ್ಥಿತ ಹಾಗೂ ತಂತ್ರಗಾರಿಕೆ ಹೊಂದಿರುವ ಯೋಜನೆಗಳಿಂದ ಆರ್ಥಿಕ ಲಾಭವುಂಟಾಗಲಿದೆ. ಕಾರ್ಯಾಗಾರದಲ್ಲಿ ತಂಡದ ಮುಂದಾಳತ್ವ ವಹಿಸಿಕೊಳ್ಳಬೇಕಾಗುವುದು. ತಂದೆಯವರಲ್ಲಿಟ್ಟ ಬೇಡಿಕೆಗಳು ಈಡೇರಲಿವೆ.

ವೃಶ್ಚಿಕ: ಸುತ್ತಮುತ್ತಲಿನ ವಾತಾವರಣ ಹಿತಕರವಾಗಿರಲಿದೆ. ಅಧಿಕಾರ ದೊರೆಯುವಲ್ಲಿ ಅಡೆತಡೆಗಳುಂಟಾಗುವ ಸಾಧ್ಯತೆ ಇದೆ. ರಾಜಕೀಯ ವ್ಯಕ್ತಿಗಳ ಸಹಾಯದಿಂದ ವೈಯಕ್ತಿಕ ಕಾರ್ಯಗಳು ನೆರವೇರಲಿವೆ.

ಧನು: ನೆರೆಹೊರೆಯವರ ಟೀಕೆಗಳನ್ನೂ ಶಾಂತ ಮನಸ್ಸಿನಿಂದ ಸ್ವೀಕರಿಸುವುದನ್ನು ರೂಢಿಸಿಕೊಳ್ಳಿ. ಅಪರಿಚಿತರಿಂದ ಮೋಸವಾಗುವ ಸಾಧ್ಯತೆಯಿದ್ದು, ಅಪರಿಚಿತ ವ್ಯಕ್ತಿಗಳೊಂದಿಗೆ ವ್ಯಾಪಾರ–ವಹಿವಾಟು ನಡೆಸುವುದು ಸೂಕ್ತವಲ್ಲ.

ಮಕರ: ಜಾಗತಿಕ ಬೆಳವಣಿಗೆಯ ವೇಗಕ್ಕೆ ಹೋಲಿಸಿದಲ್ಲಿ, ನಿಮ್ಮ ಕಾರ್ಯತಂತ್ರಗಳು ನಿಧಾನ ಗತಿಯಲ್ಲಿರುವ ವಿಚಾರ ಶೀಘ್ರ ಅರಿವಾಗಲಿದೆ. ಹೊಸ ವಾಹನ ಖರೀದಿಸುವ ಅವಶ್ಯಕತೆ ಹೆಚ್ಚಾಗಲಿದೆ.


ಕುಂಭ: ಆಪತ್ಕಾಲದಲ್ಲಿ ನೆರೆಹೊರೆಯವರ ಸಹಾಯ ಅತ್ಯಗತ್ಯವಾಗಿದ್ದು, ಜನರೊಂದಿಗೆ ಬೆರೆಯುವುದನ್ನು ರೂಢಿಸಿಕೊಳ್ಳಿ. ಕೈ ಮೀರಿದ ಕೆಲಸಗಳ ಬಗ್ಗೆ ಚಿಂತಿಸುವುದು ಸರಿಯಲ್ಲ.

ಮೀನ: ಸಂಕೋಚದ ಪ್ರವೃತ್ತಿಯಿಂದಾಗಿ ಯಾವುದೇ ಲಾಭಗಳಿಲ್ಲದೆ ಹೆಚ್ಚುವರಿ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಎಂಜಿನಿಯರ್‌ಗಳ ನಿರುದ್ಯೋಗದ ಸಮಸ್ಯೆಯು ಸ್ನೇಹಿತನ ನೆರವಿನಿಂದ ದೂರಾಗಲಿದೆ.

ಪದಬಂಧ 5887 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಹಾರವನ್ನು ಸೇವಿಸದಿರುವುದು (4)
3.ಇತರರಿಗೆ ತಿಳಿಯಲಾಗದ ಬರಹ (4)
4.ಪ್ರತ್ಯೇಕವಾಗಿ ತೆಗೆದಿರಿಸಿದ ವಸ್ತು (3)
5.ಅಪ್ಪನ ಈ ರೂಪ ಬಲು ವಿರಳ! (4)
7.ಅಷ್ಟಮಿ ನಂತರದ ತಿಥಿ (3)
9.ಅದೇ ತಾನೆ ಜನಿಸಿದ್ದು (4)
10.ಉದ್ಯಾನವನ್ನು ಹೀಗೂ ಕರೆಯುತ್ತಾರೆ (4)
11.ಸೂರ್ಯನ ಕಾವು (3)
13.ತುಸುವೆ ಬೀರಿದ ಮಂದಹಾಸ (4)
14.ಗಮನವಿಟ್ಟು ವೀಕ್ಷಿಸಿದ ಆಕಾಶ (3)
15.ಅತಿಯಾದ ಬಾಯಾರಿಕೆ (4)
16.ಮಧುರವಾಗಿ ಮಾತನಾಡುವವಳು (4)

ಮೇಲಿಂದ ಕೆಳಕ್ಕೆ
2.ಹತ್ತಿರಕ್ಕೊಂದು ಪರ್ಯಾಯ ಪದ (3)
3.ಮುದುಡುವಿಕೆಯು ಉಲ್ಟಾ ಆಗಿಬಿಟ್ಟಿದೆಯಲ್ಲಾ? (3)
6.ಬೇರೆಯವರನ್ನು ಅವಲಂಬಿಸಿರುವುದು (5)
8.ಸಂಕ್ಷಿಪ್ತವಾದ ಮಾತು (5)
12.ಇರುಳಿನ ವಿರುದ್ಧ ಪದವೇ ತಿರುವುಮುರುವಾಗಿದೆ (3)
13.ಕನಸು ಇಲ್ಲಿ ದಿಟವಾಗಿದೆ (3)



5886ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭ್ಯಂಜನ 3.ಮಹಾಕಾವ್ಯ 5.ಖಚರ 7.ಅಧ್ಯಾಯ 8.ಕಡಸು 10.ಕುಮಾರವ್ಯಾಸ 11.ರಸಾಲ 13.ಗಡಾರಿ 14.ಭವಿಷ್ಯ 16.ಕಲರವ 17.ಶಿರೋನಾಮೆ

ಮೇಲಿಂದ ಕೆಳಕ್ಕೆ:
1.ಅರಾಜಕತೆ 2.ನಖ 3.ಮರ 4.ವ್ಯತ್ಯಯ 6.ಚನ್ನವೀರಕಣವಿ 7.ಅವಸರ 9.ಸುಕುಮಾರಿ 12.ಲವಾಜಮೆ 13.ಗಣಕ 14.ಭವ 15.ಷ್ಯರಿ

ಸುಡೊಕು 6272


2		9			7	1		4
	6	4						
5		7	4		6	2		3
					5		3	1
	5	1		8			2	
3			9					8
		2		1		8		5
9			7		8		1	2
	8			2		4		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6271 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,677
ಇಂದಿನ ಅಂತ್ಯ	24,619
▼	58
ದಿನದ ಕನಿಷ್ಠ	24,580

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹635
12 ಕ್ಕೆ	₹82
ಮೈಸೂರು	
100ಕ್ಕೆ	₹637

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹365-630
ದ್ವಿತಳಿ (ಬಿ.ವಿ)	₹312-815

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹190
ಆರ್‌ಎಸ್‌ಎಸ್-5	₹185
ಗುಡ್ ಲಾಟ್	₹180

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1515 (1490)
ಸೋಯಾ (ರಿಫೈನ್ಡ್)	₹1310 (1320)
ಸೂರ್ಯಕಾಂತಿ (ರಿಫೈನ್ಡ್)	₹1380 (1400)
ಪಾಮೋಲಿನ್	₹1400 (1420)

'ತೆಂಗು ಎಫ್‌ಪಿಒ: 247 ಫ್ರಾಂಚೈಸಿಗೆ ಅವಕಾಶ'

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ತೆಂಗು ರೈತ ಉತ್ಪಾದಕ ಸಂಸ್ಥೆಯು ರಾಜ್ಯಾದ್ಯಂತ ಮಾರುಕಟ್ಟೆ ವಿಸ್ತರಣೆಗೆ ಮುಂದಾಗಿದ್ದು, 247 ಫ್ರಾಂಚೈಸಿ ತೆರೆಯಲು ಅವಕಾಶ ಕಲ್ಪಿಸಿದೆ ಎಂದು ಸಂಸ್ಥೆಯ ಅಧ್ಯಕ್ಷ ಕುಸುಮಾಧರ ಎಸ್.ಕೆ. ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಈಗಾಗಲೇ 11 ಕಡೆಗಳಲ್ಲಿ ಫ್ರಾಂಚೈಸಿ ಇದ್ದು, ಮತ್ತಷ್ಟು ನೀಡುವ ಮೂಲಕ ಕಡಿಮೆ ಬಂಡವಾಳದಲ್ಲಿ ಸ್ವ ಉದ್ಯೋಗಕ್ಕೆ ಪ್ರೇರಣೆ ನೀಡಲಾಗುವುದು. ಪದವೀಧರರು, ಕೃಷಿ ಕುಟುಂಬದ ಸದಸ್ಯರು, ಸ್ವ ಸಹಾಯ ಸಂಘ, ಸಹಕಾರ ಸಂಸ್ಥೆಗಳು ಫ್ರಾಂಚೈಸಿ ಹೊಂದಲು ಅವಕಾಶ ಕಲ್ಪಿಸಲಾಗಿದೆ ಎಂದರು.

ತೆಂಗಿನ ಗರಿಯಿಂದ ಬೇರಿನವರೆಗೆ ಎಲ್ಲ ಭಾಗಗಳನ್ನು ಬಳಸಿ, ಮೌಲ್ಯವರ್ಧನೆ ಮಾಡಿ, ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ಉತ್ಪನ್ನಗಳಾಗಿ ಪರಿವರ್ತನೆ ಮಾಡಲಾಗುತ್ತಿದೆ. ತೆಂಗಿನ ಎಣ್ಣೆ, ಗೊಬ್ಬರ, ಪೀಠೋಪಕರಣ, ಕಲಾಕೃತಿ ಸೇರಿದಂತೆ 32 ಉತ್ಪನ್ನಗಳನ್ನು ಮಾರುಕಟ್ಟೆಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ. ರಾಜ್ಯದಲ್ಲಿ ಸಂಸ್ಥೆಯ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುತ್ತಿದೆ. 24 ತಳಿಗಳ ತೆಂಗಿನ ಸಸಿಗಳನ್ನು ಕೇಂದ್ರದ ಮೂಲಕ ಅಭಿವೃದ್ಧಿಪಡಿಸಲಾಗಿದೆ ಎಂದು ವಿವರಿಸಿದರು.

ಕಲ್ಪವಿಕಾಸ ಯೋಜನೆಯಡಿ ತರಬೇತಿ ಪಡೆದ ಮಹಿಳೆಯರು ತೆಂಗಿನ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಿ ಆದಾಯ ಗಳಿಸುತ್ತಿದ್ದಾರೆ. ಉತ್ಪನ್ನಗಳ ಬೇಡಿಕೆ ಪೂರೈಸಲು ಸದ್ಯದಲ್ಲೇ ಗುಡಿ ಕೈಗಾರಿಕೆಯಿಂದ ಆಧುನಿಕ ತಂತ್ರಜ್ಞಾನದ ಫ್ಯಾಕ್ಟರಿ ಸ್ಥಾಪಿಸುವ ಯೋಜನೆ ಇದೆ ಎಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಚೇತನ್ ಎ. ಹೇಳಿದರು.

ಸಂಸ್ಥೆಯ ಪ್ರಮುಖರಾದ ಗಿರಿಧರ್ ಸ್ಕಂದ, ಯತೀಶ ಕೆ.ಎಸ್., ಕುಮಾರ್ ಪೆರ್ನಾಜೆ, ಆದಿತ್ಯ ಕಲ್ಲಾಜೆ ಪತ್ರಿಕಾಗೋಷ್ಠಿಯಲ್ಲಿದ್ದರು.

ಮಾಹಿತಿಗೆ ಸಂಪರ್ಕ ಸಂಖ್ಯೆ: 8105487763, ಟೋಲ್ ಫ್ರೀ ಸಂಖ್ಯೆ: 18002030129.

'ಬಿಮಾ ಸಖಿ ಯೋಜನೆ'ಗೆ ಚಾಲನೆ

ಮೂರು ವರ್ಷದಲ್ಲಿ 2 ಲಕ್ಷ ಮಹಿಳಾ ವಿಮಾ ಏಜೆಂಟರನ್ನು ನೇಮಿಸುವ ಗುರಿ


ನರೇಂದ್ರ ಮೋದಿ

ಪಾಣಿಪತ್ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) 'ಬಿಮಾ ಸಖಿ ಯೋಜನೆ'ಗೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಚಾಲನೆ ನೀಡಿದ್ದಾರೆ.

ಈ ಯೋಜನೆಯ ಅಡಿ ಮುಂದಿನ ಮೂರು ವರ್ಷಗಳಲ್ಲಿ 2 ಲಕ್ಷ ಮಹಿಳಾ ವಿಮಾ ಏಜೆಂಟರನ್ನು ನೇಮಿಸುವ ಗುರಿಯನ್ನು ಎಲ್‌ಐಸಿ ಹೊಂದಿದೆ.

ಯಾರು ಅರ್ಹರು?: 10ನೇ ತರಗತಿ ಪೂರೈಸಿದ 18ರಿಂದ 70ರ ವಯೋಮಾನದ ಮಹಿಳೆಯರನ್ನು ಸಶಕ್ತಗೊಳಿಸಲು ಈ ಯೋಜನೆ ವಿನ್ಯಾಸಗೊಳಿಸಲಾಗಿದೆ. ತರಬೇತಿಯ ಅವಧಿ ಮೂರು ವರ್ಷವಾಗಿದ್ದು, ಈ ಅವಧಿಯಲ್ಲಿ ವಿಶೇಷ ತರಬೇತಿ ಮತ್ತು ಮಾಸಿಕ ಭತ್ಯೆ ಪಡೆಯುತ್ತಾರೆ.

ತರಬೇತಿಯ ಮೊದಲ ವರ್ಷದಲ್ಲಿ ಮಾಸಿಕ ₹7 ಸಾವಿರ, ಎರಡನೇ ವರ್ಷ ಮಾಸಿಕ ₹6 ಸಾವಿರ ಮತ್ತು ಮೂರನೇ ವರ್ಷದಲ್ಲಿ ಮಾಸಿಕ ₹5 ಸಾವಿರ ಭತ್ಯೆ ಪಡೆಯುತ್ತಾರೆ. ಕಮಿಷನ್ ಲಾಭ ಸಹ ಸಿಗಲಿದೆ. ಆರ್ಥಿಕ ಸಾಕ್ಷರತೆ ಹಾಗೂ ವಿಮೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದು ಈ ಯೋಜನೆಯ ಉದ್ದೇಶವಾಗಿದೆ ಎಂದು ಎಲ್‌ಐಸಿ ತಿಳಿಸಿದೆ.

ಮೂರು ವರ್ಷಗಳಲ್ಲಿ 2 ಲಕ್ಷ ಬಿಮಾ ಸಖಿಗಳನ್ನು ನೇಮಿಸುವ ಯೋಜನೆ ಇದೆ. ತರಬೇತಿ ಪೂರ್ಣಗೊಂಡ ಬಳಿಕ ಅವರು ಎಲ್‌ಐಸಿ ಪ್ರತಿನಿಧಿಗಳಾಗಿ ಕೆಲಸ ಮಾಡಬಹುದು. ಪದವಿ ಪೂರೈಸಿದ ಬಿಮಾ ಸಖಿಗಳು ಎಲ್‌ಐಸಿಯಲ್ಲಿ ಅಭಿವೃದ್ಧಿ ಅಧಿಕಾರಿಗಳಾಗುವ ಅವಕಾಶ ಇರುತ್ತದೆ ಎಂದು ತಿಳಿಸಿದೆ.

ಮುಖ್ಯಾಂಶಗಳು

- 18 ರಿಂದ 70ರ ವಯೋಮಾನದವರು ಯೋಜನೆಗೆ ಅರ್ಹರು
- ಮೂರು ವರ್ಷದ ತರಬೇತಿ ಪ್ರತಿ ತಿಂಗಳು ಭತ್ಯೆ
- ಆರ್ಥಿಕ ಸಾಕ್ಷರತೆ, ವಿಮೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದು ಉದ್ದೇಶ

1 ಲಕ್ಷ ಬಿಮಾ ಸಖಿ ನೋಂದಣಿ

ಮಹಿಳಾ ಸಬಲೀಕರಣ ಅಭಿಯಾನದ ಭಾಗವಾಗಿ ಮುಂದಿನ 12 ತಿಂಗಳಲ್ಲಿ 1 ಲಕ್ಷ ಬಿಮಾ ಸಖಿಯರನ್ನು ನೋಂದಾಯಿಸುವ ಗುರಿಯನ್ನು ಹೊಂದಲಾಗಿದೆ ಎಂದು ಎಲ್‌ಐಸಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸಿದ್ಧಾರ್ಥ ಮೊಹಾಂತಿ ಹೇಳಿದ್ದಾರೆ.

ಬಿಮಾ ಸಖಿ ಯೋಜನೆ ನಮ್ಮ ಐದು ಪಟ್ಟು ಹೊಸ ವ್ಯವಹಾರವನ್ನು ಗಳಿಸುವ ನಿರೀಕ್ಷೆಯಿದೆ. ಈ ಯೋಜನೆಗೆ ₹840 ಕೋಟಿ ವ್ಯಯಿಸಲಾಗುವುದು. ಮೊದಲ ವರ್ಷದಲ್ಲಿ ₹4 ಸಾವಿರ ಕೋಟಿ ಹೊಸ ವ್ಯವಹಾರವನ್ನು ತರಬಹುದು ಎಂದು ನಿರೀಕ್ಷಿಸಿದ್ದೇವೆ. ಪ್ರತಿ ಗ್ರಾಮ ಪಂಚಾಯಿತಿಗೆ ಒಬ್ಬ ಬಿಮಾ ಸಖಿಯನ್ನು ನೇಮಿಸುವ ಯೋಜನೆ ಇದೆ ಎಂದರು.

ಸುದ್ದಿ 2 ನಿಮಿಷ

ರಾಜಸ್ಥಾನದಲ್ಲಿ ₹7.5 ಲಕ್ಷ ಕೋಟಿ ಹೂಡಿಕೆಗೆ ಅದಾನಿ ಸಮೂಹ ಚಿಂತನೆ

ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ಅದಾನಿ ಸಮೂಹವು ₹7.5 ಲಕ್ಷ ಕೋಟಿ ಹೂಡಿಕೆ ಮಾಡಲು ಯೋಜಿಸುತ್ತಿದೆ ಎಂದು ಅದಾನಿ ಪೋರ್ಟ್ಸ್ ಮತ್ತು ಎಸ್‌ಇಜೆಡ್‌ನ ವ್ಯವಸ್ಥಾಪಕ ನಿರ್ದೇಶಕ ಕರಣ್ ಅದಾನಿ ಹೇಳಿದ್ದಾರೆ.

ರಾಜಸ್ಥಾನದಲ್ಲಿ ಸೋಮವಾರ ಆಯೋಜಿಸಿದ್ದ 'ರೈಸಿಂಗ್ ರಾಜಸ್ಥಾನ ಶೃಂಗಸಭೆ'ಯಲ್ಲಿ ಮಾತನಾಡಿದ ಅವರು, ಒಟ್ಟು ಹೂಡಿಕೆಯ ಪೈಕಿ ಶೇ 50ರಷ್ಟನ್ನು ಮುಂದಿನ ಐದು ವರ್ಷದಲ್ಲಿ ವಿವಿಧ ವಲಯಗಳಲ್ಲಿ ಹೂಡಿಕೆ ಮಾಡಲಾಗುವುದು ಎಂದು ಹೇಳಿದ್ದಾರೆ.

100 ಗಿಗಾವಾಟ್ ಸಾಮರ್ಥ್ಯದ ನವೀಕರಿಸಬಹುದಾದ ಇಂಧನ, 20 ಲಕ್ಷ ಟನ್ ಟನ್ ಹೈಡ್ರೋಜನ್ ಮತ್ತು 1.8 ಗಿಗಾವಾಟ್ ಸಾಮರ್ಥ್ಯದ ಹೈಡ್ರೋ ಯೋಜನೆಗಳನ್ನು ಸ್ಥಾಪಿಸುವ ಗುರಿಯನ್ನು ಕಂಪನಿ ಹೊಂದಿದೆ. ಇದು ರಾಜ್ಯದಲ್ಲಿ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲಿದೆ ಎಂದು ಹೇಳಿದರು.

ಆದಿತ್ಯ ಬಿರ್ಲಾ ₹50 ಸಾವಿರ ಕೋಟಿ ಹೂಡಿಕೆ: ಆದಿತ್ಯ ಬಿರ್ಲಾ ಸಮೂಹವು ರಾಜಸ್ಥಾನದಲ್ಲಿನ ತನ್ನ ಉದ್ಯಮಗಳಲ್ಲಿ ಮುಂದಿನ ಕೆಲವೇ ವರ್ಷಗಳಲ್ಲಿ ₹50 ಸಾವಿರ ಕೋಟಿ ಹೂಡಿಕೆ ಮಾಡಲು ಯೋಜಿಸಿದೆ ಎಂದು ಸಮೂಹದ ಅಧ್ಯಕ್ಷ ಕುಮಾರ್ ಮಂಗಲಂ ಬಿರ್ಲಾ ಹೇಳಿದ್ದಾರೆ.

ನವೀಕರಿಸಬಹುದಾದ ಇಂಧನ ವಲಯದಲ್ಲಿ ಮುಂದಿನ 1 ರಿಂದ 2 ವರ್ಷದಲ್ಲಿ ಮಾಡುತ್ತಿರುವ ₹6 ಸಾವಿರ ಕೋಟಿ ಹೂಡಿಕೆಯು ಸಹ ಇದರಲ್ಲಿ ಒಳಗೊಂಡಿದೆ. ರಾಜ್ಯದಲ್ಲಿ ಆಭರಣಗಳ ಉದ್ಯಮದ ಸಣ್ಣ ತಯಾರಿಕ ಘಟಕವನ್ನು ಸ್ಥಾಪಿಸುವುದಾಗಿ ಹೇಳಿದ್ದಾರೆ. ಸಮೂಹವು ಸಿಮೆಂಟ್, ಟೆಲಿಕಾಂ, ಫ್ಯಾಷನ್ ರಿಟೇಲ್ ಸೇರಿ ಹಲವು ಉದ್ಯಮವನ್ನು ನಡೆಸುತ್ತಿದೆ.

ಟಾಟಾ ಮೋಟರ್ಸ್, ಕಿಯಾ ವಾಹನ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ತನ್ನ ಪ್ರಯಾಣಿಕ ವಾಹನಗಳ ಬೆಲೆಯನ್ನು ಶೇ 3ರಷ್ಟು ಏರಿಕೆ ಮಾಡುವುದಾಗಿ ಸೋಮವಾರ ತಿಳಿಸಿದೆ.

ಹೊಸ ದರವು ಜನವರಿ 1ರಿಂದ ಜಾರಿಗೆ ಬರಲಿದೆ. ಮಾದರಿ ಮತ್ತು ವೇರಿಯೆಂಟ್ ಆಧಾರದ ಮೇಲೆ ದರವು ಇರಲಿದೆ. ತಯಾರಿಕ ವೆಚ್ಚದಲ್ಲಿನ ಹೆಚ್ಚಳದಿಂದಾಗಿ ಬೆಲೆ ಏರಿಕೆ ಮಾಡಲಾಗುತ್ತಿದೆ ಎಂದು ಕಂಪನಿ ತಿಳಿಸಿದೆ.

ಕಿಯಾ ಇಂಡಿಯಾ ತನ್ನ ಎಲ್ಲ ಮಾದರಿಯ ವಾಹನಗಳ ಬೆಲೆಯನ್ನು ಶೇ 2ರಷ್ಟು ಹೆಚ್ಚಳ ಮಾಡುವುದಾಗಿ ತಿಳಿಸಿದೆ.

ಮಾರುತಿ ಸುಜುಕಿ, ಹುಂಡೈ, ಮಹೀಂದ್ರ, ಜೆಎಸ್‌ಡಬ್ಲ್ಯು ಎಂಜಿ ಮೋಟರ್, ಔಡಿ, ಬಿಎಂಡಬ್ಲ್ಯು ಇತರೆ ಕಂಪನಿಗಳು ವಾಹನಗಳ ಬೆಲೆ ಏರಿಕೆ ಮಾಡುವುದಾಗಿ ಈಗಾಗಲೇ ತಿಳಿಸಿವೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-33500
ಹಳತು	45000-48500
ಚಿತ್ರದುರ್ಗ	
ಅಪಿ	48600-49000
ಬೆಟ್ಟೆ	28900-29300
ಕೆಂಪುಗೋಟು	23800-24200
ರಾಶಿ	48100-48500
ಕುಮಟ	
ಚಾಲಿ	34069-37599
ಚಿಪ್ಪು	22569-26689
ಕೋಕ	7019-22019
ಫ್ಯಾಕ್ಟರಿ	5099-20429
ಹಳೆಚಾಲಿ	37589-40009
ಹೊಸಚಾಲಿ	24869-29999
ಪುತ್ತೂರು	
ಹೊಸತು	25000-33500
ಹೊಸತು	36000-48500
ಸಾಗರ	
ಬಿಳಿಗೋಟು	12099-25310
ಚಾಲಿ	23599-34319
ಕೋಕ	6569-18199
ಕೆಂಪುಗೋಟು	15269-27199
ರಾಶಿ	40009-50000
ಸಿಪ್ಪೆಗೋಟು	7299-16688
ಶಿವಮೊಗ್ಗ	
ಬೆಟ್ಟೆ	47099-57640
ಗೊರಬಲು	16599-30669
ಹೊಸತು	46199-50409
ರಾಶಿ	35009-50409
ಸರಕು	52199-90410
ಸಿದ್ದಾಪುರ	
ಬಿಳಿಗೋಟು	24009-27899
ಚಾಲಿ	31609-38399
ಕೋಕ	19199-25889
ಕೆಂಪುಗೋಟು	19289-19289
ರಾಶಿ	41809-47899
ತಟ್ಟಿಬೆಟ್ಟೆ	26909-34889
ಶಿರಸಿ	
ಬೆಟ್ಟೆ	29599-37099
ಬಿಳಿಗೋಟು	20786-31299
ಚಾಲಿ	35208-39299
ಕೆಂಪುಗೋಟು	21999-23699
ರಾಶಿ	44009-47389

ರೂಪಾಯಿ ಮೌಲ್ಯ 20 ಪೈಸೆ ಇಳಿಕೆ



ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ಸೋಮವಾರ ರೂಪಾಯಿ ಮೌಲ್ಯವು 20 ಪೈಸೆಯಷ್ಟು ಕುಸಿದಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ ₹84.86ಕ್ಕೆ ಇಳಿದಿದೆ.

ಜಾಗತಿಕ ಮಟ್ಟದಲ್ಲಿ ರಾಜಕೀಯ ಚಂಚಲತೆ, ಡಾಲರ್ ಮೌಲ್ಯದಲ್ಲಿ ಏರಿಕೆ, ದೇಶೀಯ ಷೇರುಪೇಟೆ ಸೂಚ್ಯಂಕಗಳ ಇಳಿಕೆಯಿಂದ ರೂಪಾಯಿ ಮೌಲ್ಯ ಇಳಿದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

₹42 ಸಾವಿರ ಕೋಟಿ ಸಾಲ ರೈಟ್‌ಆಫ್

ನವದೆಹಲಿ (ಪಿಟಿಐ): 2024–25ರ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ₹42 ಸಾವಿರ ಕೋಟಿ ಮೊತ್ತದ ಸಾಲವನ್ನು ರೈಟ್‌ಆಫ್ ಮಾಡಿವೆ ಎಂದು ಕೇಂದ್ರ ಸರ್ಕಾರವು, ಲೋಕಸಭೆಗೆ ಸೋಮವಾರ ತಿಳಿಸಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ₹8,312 ಕೋಟಿ ಮೊತ್ತದ ಸಾಲವನ್ನು ರೈಟ್‌ಆಫ್ ಮಾಡಿದೆ. ಪಂಜಾಬ್ ನ್ಯಾಷನಲ್ ಬ್ಯಾಂಕ್ ₹8,061 ಕೋಟಿ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ₹6,344 ಕೋಟಿ ಮತ್ತು ಬ್ಯಾಂಕ್ ಆಫ್ ಬರೋಡಾ ₹5,925 ಕೋಟಿ ರೈಟ್‌ಆಫ್ ಮಾಡಿವೆ.

2023–24ರ ಹಣಕಾಸು ವರ್ಷದಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ₹1.14 ಲಕ್ಷ ಕೋಟಿ ಮೊತ್ತದ ಸಾಲವನ್ನು ರೈಟ್‌ಆಫ್ ಮಾಡಿದ್ದವು. ಇದು 2022–23ರಲ್ಲಿ ₹1.18 ಲಕ್ಷ ಕೋಟಿಯಷ್ಟಿತ್ತು ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಲೋಕಸಭೆಗೆ ತಿಳಿಸಿದ್ದಾರೆ.

ರೈಟ್‌ಆಫ್ ಮಾಡಿರುವ ಸಾಲವನ್ನು ತೀರಿಸುವ ಹೊಣೆಯು ಸಾಲ ಪಡೆದವರ ಮೇಲೆ ಇದ್ದೇ ಇರುತ್ತದೆ. ರೈಟ್‌ಆಫ್ ಆಗಿರುವ ಸಾಲದ ವಸೂಲಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. ಸಾಲ ಪಡೆದವರಿಗೆ ರೈಟ್‌ಆಫ್ ಮಾಡಿದ್ದರಿಂದಾಗಿ ಪ್ರಯೋಜನವೇನೂ ಆಗುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

17,818 ನಕಲಿ ಕಂಪನಿಗಳ ಪತ್ತೆ: ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ದೇಶದಾದ್ಯಂತ ಜಿಎಸ್‌ಟಿ ನಕಲಿ ನೋಂದಣಿ ವಿರುದ್ಧ ನಡೆದ ಕಾರ್ಯಾಚರಣೆಯಲ್ಲಿ ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಅಕ್ಟೋಬರ್ ಅವಧಿಯಲ್ಲಿ 17,818 ನಕಲಿ ಕಂಪನಿಗಳನ್ನು ಪತ್ತೆಹಚ್ಚಲಾಗಿದೆ. ಒಟ್ಟು ₹35,132 ಕೋಟಿ ವಂಚನೆ ಬೆಳಕಿಗೆ ಬಂದಿದೆ. 69 ಜನರನ್ನು ಬಂಧಿಸಲಾಗಿದ್ದು, ಪ್ರಕರಣ ದಾಖಲಿಸಲಾಗಿದೆ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ಸೋಮವಾರ ತಿಳಿಸಿದೆ.

ನಕಲಿ ಕಂಪನಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ನಕಲಿ ಸಂಸ್ಥೆಗಳನ್ನು ಪತ್ತೆಹಚ್ಚಲು ವಿಶೇಷ ಕಾರ್ಯಾಚರಣೆಯು ಆಗಸ್ಟ್ 16 ರಿಂದ ಅಕ್ಟೋಬರ್ 30ರ ವರೆಗೆ ನಡೆದಿತ್ತು.

ವಿನಿಮಯ ದರ

$ ಡಾಲರ್	84.86
£ ಪೌಂಡ್	108.23
€ ಯುರೊ	89.58
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8500-10000
ಮಧುಗಿರಿ	₹10000-13500
ತುರುವೇಕೆರೆ	₹13500-13600



ಸಿರಿಯಾದಲ್ಲಿ ಬಶರ್ ಅಸಾದ್ ಸರ್ಕಾರ ಪತನಗೊಂಡ ಬೆನ್ನಲ್ಲೇ ದೇಶ ತೊರೆಯಲು ಮುಂದಾಗಿರುವ ಹಲವು ಸಿರಿಯನ್ನರು ಲೆಬನಾನ್ ಗಡಿಯತ್ತ ಧಾವಿಸಿದ್ದರು – ಎಎಫ್‌ಪಿ ಚಿತ್ರ

ಸಿರಿಯಾ: ಮಧ್ಯಂತರ ಸರ್ಕಾರ ರಚನೆಗೆ ಕಸರತ್ತು ಆರಂಭ

ಡಮಾಸ್ಕಸ್ (ರಾಯಿಟರ್ಸ್/ಎಪಿ): ಸಿರಿಯಾದಲ್ಲಿ ಬಂಡಾಯವೆದ್ದ ಹೋರಾಟಗಾರರ ಕಮಾಂಡರ್ ಮೊಹಮ್ಮದ್ ಅಲ್ ಗೊಲಾನಿ ಅವರು ಪ್ರಧಾನಿ ಮೊಹಮ್ಮದ್ ಘಾಜಿ ಜಲಾಲಿ ಮತ್ತು ಉಪಾಧ್ಯಕ್ಷ ಫೈಸಲ್‌ಮೆಕ್ದಾದ್‌ಅವರನ್ನುಭೇಟಿಮಾಡಿ,ಮಧ್ಯಂತರ ಸರ್ಕಾರ ರಚನೆ ಕುರಿತು ಚರ್ಚೆ ನಡೆಸಿದ್ದಾರೆ.

ಹೋರಾಟಗಾರರ ನಿಯಂತ್ರಣದಲ್ಲಿದ್ದ ಸಣ್ಣ ಪ್ರದೇಶವೊಂದರ ಆಡಳಿತ ನಡೆಸುತ್ತಿದ್ದ ಮೊಹಮದ್ ಅಲ್ ಬಶೀರ್ ಅವರು ಮಧ್ಯಂತರ ಸರ್ಕಾರದ ನೇತೃತ್ವ ವಹಿಸುವ ಸಾಧ್ಯತೆಯಿದೆ ಎಂದು ಅಲ್ ಜಜೀರಾ ವಾಹಿನಿ ವರದಿ ಮಾಡಿದೆ.

ಸಹಜ ಸ್ಥಿತಿಯತ್ತ: ಸಿರಿಯಾದಲ್ಲಿ ಜನರ ಬಂಡಾಯದಿಂದಾಗಿ ಅಲ್ಲಿನ ಅಧ್ಯಕ್ಷ ಬಶರ್ ಅಸಾದ್ ಸರ್ಕಾರ ಪತನವಾದ ಮರು ದಿನ ದೇಶ ಸಹಜ ಸ್ಥಿತಿಗೆ ಮರಳುತ್ತಿದ್ದು, ಸರ್ಕಾರವೂ ಕಾರ್ಯ ನಿರ್ವಹಿಸುತ್ತಿದೆ ಎಂದು ಪ್ರಧಾನಿ ಜಲಾಲಿ ಸೋಮವಾರ ಹೇಳಿದ್ದಾರೆ.

ಡಮಾಸ್ಕಸ್‌ನ ಕಾರ್ಯಾಲಯಗಳಲ್ಲಿ ಕೆಲ ಸಂಪುಟ ಸಚಿವರು ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಹೇಳುವ ಮೂಲಕ ಅವರು ದೇಶ ಸಹಜ ಸ್ಥಿತಿಯತ್ತ ಮರಳುತ್ತಿದೆ ಎಂದಿದ್ದಾರೆ.

'ಮಧ್ಯಂತರ ಅವಧಿಯ ಆಡಳಿತಕ್ಕಾಗಿ ನಾವು ತ್ವರಿತವಾಗಿ ಕೆಲಸ ಮಾಡುತ್ತಿದ್ದೇವೆ' ಎಂದು ಅವರು ಸುದ್ದಿವಾಹಿನಿಗೆ ತಿಳಿಸಿದ್ದಾರೆ. 'ದೇಶದಲ್ಲಿ ಭದ್ರತಾ ಸ್ಥಿತಿ ಸುಧಾರಿಸಿದ್ದು, ನಾಗರಿಕರು ಸಾರ್ವಜನಿಕ ಸ್ಥಳಗಳಲ್ಲಿ ಜಮಾಯಿಸಿ ಸಂಭ್ರಮ ಆಚರಿಸುತ್ತಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಹೋರಾಟಗಾರರ ಗುಂಪಿಗೆ 'ಪೂರ್ಣ ಸಹಕಾರ' ನೀಡುತ್ತೇವೆ. ನನ್ನ ಸರ್ಕಾರ ಇನ್ನು ಹೋರಾಟಗಾರರ ಸರ್ಕಾರವಾಗಿ ಬದಲಾಗಲಿದೆ' ಎಂದು ಜಲಾಲಿ ಭಾನುವಾರ ಪ್ರತಿಕ್ರಿಯಿಸಿದ್ದರು.

ಸಿರಿಯಾ ಕರೆನ್ಸಿ ಮುಂದುವರಿಯಲಿದೆ: ಸಿರಿಯಾದ ಬ್ಯಾಂಕ್‌ಗಳು ಮಂಗಳವಾರದಿಂದ ಪುನಃ ಕಾರ್ಯಾರಂಭ ಮಾಡಲಿವೆ. ಕಚೇರಿಗಳಿಗೆ ಹಿಂತಿರುಗುವಂತೆ ಸಿಬ್ಬಂದಿಗೆ ಸೂಚಿಸಲಾಗಿದೆ ಎಂದು ಸಿರಿಯಾದ ಸೆಂಟ್ರಲ್ ಬ್ಯಾಂಕ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಿರಿಯಾದ ಕರೆನ್ಸಿ ಮುಂದುವರಿಸಲಾಗುವುದು ಎಂದೂ ಅವರು ಹೇಳಿದ್ದಾರೆ.

ಅಸಾದ್ ಸಹೋದರನ ಸಹಾಯಕನ ಶವ ಪತ್ತೆ: ಪಲಾಯನ ಮಾಡಿದ ಅಸಾದ್ ಅವರ ಸಹೋದರ ಮಹತ್ ಅವರ ಹಿರಿಯ ಸಹಾಯಕರೊಬ್ಬರ ಶವ ಡಮಾಸ್ಕಸ್‌ನ ಅವರ ಕಚೇರಿಯಲ್ಲಿ ಪತ್ತೆಯಾಗಿದೆ. ಇದು ಕೊಲೆಯೋ ಅಥವಾ ಆತ್ಮಹತ್ಯೆಯೋ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಸಿರಿಯಾದ ಉತ್ತರ ಭಾಗದ ಮನ್‌ಬಿಜ್ ನಗರವನ್ನು ಪೂರ್ಣಪ್ರಮಾಣದಲ್ಲಿ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿರುವುದಾಗಿ ಟರ್ಕಿ ಅಧಿಕಾರಿಗಳು ತಿಳಿಸಿದ್ದಾರೆ. ಪೂರ್ವ ಸಿರಿಯಾದ ಅಲ್ ಮಿಸ್ತ್ರಿಹಾ ಗ್ರಾಮದಲ್ಲಿ ಟರ್ಕಿ ಡ್ರೋನ್ ದಾಳಿ ನಡೆಸಿದ್ದು, 12 ಜನರು ಮೃತಪಟ್ಟಿದ್ದಾರೆ ಎಂದು ಅವರು ಹೇಳಿದ್ದಾರೆ.

ಇರಾಕ್ ಪ್ರವೇಶಿಸಿದ ಸಿರಿಯಾದ 4,000 ಸೈನಿಕರು

ಬಾಗ್ದಾದ್ (ಎಪಿ): ಹೋರಾಟಗಾರರು ಡಮಾಸ್ಕಸ್ ಅನ್ನು ವಶಕ್ಕೆ ಪಡೆದ ಬಳಿಕ ಸಿರಿಯಾದ 4,000ಕ್ಕೂ ಹೆಚ್ಚು ಸೈನಿಕರು ಗಡಿ ದಾಟಿ, ಇರಾಕ್ ಪ್ರವೇಶಿಸಿದ್ದಾರೆ ಎಂದು ಇರಾಕ್ ಸೇನೆಯ ಅಧಿಕಾರಿಗಳು ತಿಳಿಸಿದ್ದಾರೆ.

ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಮತ್ತು ಶಸ್ತ್ರಸಜ್ಜಿತ ವಾಹನಗಳೊಂದಿಗೆ ಸಿರಿಯಾದ ಸೈನಿಕರು ಇರಾಕ್ ಪ್ರವೇಶಿಸಿದ್ದಾರೆ. ಅವರನ್ನು ಶಿಬಿರದಲ್ಲಿ ಇರಿಸಲಾಗುವುದು ಎಂದು ಇರಾಕ್‌ನ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅಸಾದ್‌ಗೆ ರಷ್ಯಾ ಆಶ್ರಯ

ಮಾಸ್ಕೊ (ಎಪಿ): ಸಿರಿಯಾದಿಂದ ಪಲಾಯನ ಮಾಡಿರುವ ಮಾಜಿ ಅಧ್ಯಕ್ಷ ಬಶರ್ ಅಸಾದ್ ಅವರಿಗೆ ರಷ್ಯಾ ರಾಜಕೀಯ ಆಶ್ರಯ ನೀಡಿದೆ ಎಂದು ಕ್ರೆಮ್ಲಿನ್ ಸೋಮವಾರ ತಿಳಿಸಿದೆ.

ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ವೈಯಕ್ತಿಕವಾಗಿ ಅಸಾದ್ ಅವರಿಗೆ ಆಶ್ರಯ ನೀಡಲು ನಿರ್ಧರಿಸಿದ್ದಾರೆ ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಸುದ್ದಿಗಾರರಿಗೆ ತಿಳಿಸಿದರು. ಅಸಾದ್ ಅವರನ್ನು ಎಲ್ಲಿ ಇರಿಸಲಾಗಿದೆ ಎಂಬುದರ ಬಗ್ಗೆ ಪೆಸ್ಕೋವ್ ಪ್ರತಿಕ್ರಿಯಿಸಲಿಲ್ಲ. ಪುಟಿನ್ ಅವರು ಅಸ್ಸಾದ್ ಅವರನ್ನು ಭೇಟಿಯಾಗಲು ಯೋಜಿಸಿಲ್ಲ ಎಂದು ಅವರು ಪ್ರತಿಕ್ರಿಯಿಸಿದರು.

ಸಿರಿಯಾ ಮೇಲೆ ಇಸ್ರೇಲ್ ದಾಳಿ

ಜೆರುಸಲೇಂ (ಎಪಿ): ಸಿರಿಯಾದಲ್ಲಿನ ಶಂಕಿತ ರಾಸಾಯನಿಕ ಶಸ್ತ್ರಾಸ್ತ್ರ ತಾಣಗಳು ಮತ್ತು ದೀರ್ಘ ಶ್ರೇಣಿಯ ಕ್ಷಿಪಣಿ, ರಾಕೆಟ್‌ಗಳಿರುವ ತಾಣಗಳ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ. ಈ ಶಸ್ತ್ರಾಸ್ತ್ರಗಳು ಹೋರಾಟಗಾರರ ಕೈ ಸೇರಬಾರದು ಎಂಬ ಉದ್ದೇಶದಿಂದ ದಾಳಿ ನಡೆಸಿದ್ದಾಗಿ ಇಸ್ರೇಲ್‌ನ ವಿದೇಶಾಂಗ ಸಚಿವ ಸೋಮವಾರ ತಿಳಿಸಿದ್ದಾರೆ.

ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿ: ಕ್ವಾರ್ಟರ್ ಫೈನಲ್‌ಗೆ ಬಂಗಾಳ

ಫಿಟ್ನೆಸ್ ಅನುಮಾನ ಬೆನ್ನಲ್ಲೇ ಶಮಿ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫಿಟ್‌ನೆಸ್ ಅನುಮಾನದ ಬೆನ್ನಲ್ಲೇ ಅನುಭವಿ ವೇಗದ ಬೌಲರ್ ಮೊಹಮ್ಮದ್ ಶಮಿ ಅವರು ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಹೀಗಾಗಿ, ಬಂಗಾಳ ತಂಡವು ಮೂರು ರನ್‌ಗಳಿಂದ ರೋಚಕ ಜಯ ಸಾಧಿಸಿ, ಎಂಟರ ಘಟ್ಟ ಪ್ರವೇಶಿಸಿದೆ.

ಮೊಣಕಾಲು ನೋವಿನಿಂದ ಗುಣಮುಖರಾಗಿ ಭಾರತ ಟೆಸ್ಟ್ ತಂಡಕ್ಕೆ ಮರಳುವ ನಿರೀಕ್ಷೆಯಲ್ಲಿರುವ 34 ವರ್ಷ ವಯಸ್ಸಿನ ಶಮಿ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ಚಂಡೀಗಢ ವಿರುದ್ಧ ನಡೆದ ಪಂದ್ಯದಲ್ಲಿ 17 ಎಸೆತಗಳಲ್ಲಿ ಅಜೇಯ 32 ರನ್ ಸಿಡಿಸಿದ್ದಾರೆ. ಬೌಲಿಂಗ್‌ನಲ್ಲಿ 25 ರನ್ನಿಗೆ ಒಂದು ವಿಕೆಟ್ ಮಾತ್ರ ಪಡೆದರೂ, 13 ಡಾಟ್‌ಬಾಲ್‌ಗಳನ್ನು ಹಾಕಿ ಗಮನ ಸೆಳೆದಿದ್ದಾರೆ.

ಮೊದಲು ಬ್ಯಾಟಿಂಗ್ ಮಾಡಿದ್ದ ಬಂಗಾಳ ತಂಡವು 114 ರನ್‌ಗೆ 8 ವಿಕೆಟ್ ಕಳೆದುಕೊಂಡು ಅಲ್ಪ ಮೊತ್ತಕ್ಕೆ ಕುಸಿಯುವ ಆತಂಕದಲ್ಲಿತ್ತು. ಈ ಹಂತದಲ್ಲಿ ಬ್ಯಾಟಿಂಗ್‌ಗೆ ಬಂದ ಶಮಿ ವೇಗವಾಗಿ ರನ್ ಸೇರಿಸಿದ್ದರಿಂದ 159 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಕಲೆ ಹಾಕಲು ಸಾಧ್ಯವಾಯಿತು. ಸಂದೀಪ್ ಶರ್ಮಾ ಹಾಕಿದ್ದ 20ನೇ ಓವರ್‌ನಲ್ಲಿ ಶಮಿ 19 ರನ್ ಸೂರೆಗೈದರು. ಅವರ ಇನಿಂಗ್ಸ್ ಮೂರು ಬೌಂಡರಿ ಮತ್ತು ಎರಡು ಭರ್ಜರಿ ಸಿಕ್ಸರ್ ಒಳಗೊಂಡಿತ್ತು.

ಗುರಿಯನ್ನು ಬೆನ್ನಟ್ಟಿದ ಚಂಡೀಗಢ ತಂಡವು ಹೋರಾಟ ತೋರಿದರೂ ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗೆ 156 ರನ್ ಗಳಿಸಿ ಅಲ್ಪ ಅಂತರದಲ್ಲಿ ಸೋತಿತು. ಬಂಗಾಳ ಪರ ಸಾಯನ್ ಘೋಷ್ ನಾಲ್ಕು ವಿಕೆಟ್ ಪಡೆದರೆ, ಕನಿಷ್ಕ್ ಸೇಠ್ ಎರಡು ವಿಕೆಟ್ ಕಬಳಿಸಿದರು.

ಇದೇ 11ರಂದು ಬೆಂಗಳೂರಿನಲ್ಲಿ ನಡೆಯುವ ಕ್ವಾರ್ಟರ್ ಫೈನಲ್‌ನಲ್ಲಿ ಬಂಗಾಳ ತಂಡವು, ಬರೋಡಾ ತಂಡವನ್ನು ಎದುರಿಸಲಿದೆ. ಬರೋಡಾ, ಬಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ನೇರವಾಗಿ ಎಂಟರ ಘಟ್ಟ ಪ್ರವೇಶಿಸಿತ್ತು.



ಮೊಹಮ್ಮದ್ ಶಮಿ ಬ್ಯಾಟಿಂಗ್ ವೈಖರಿ —ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಸಂಕ್ಷಿಪ್ತ ಸ್ಕೋರ್: ಬಂಗಾಳ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 159 (ಕರಣ್ ಲಾಲ್ 33, ವೃತ್ತಿಕ್ ಚಟರ್ಜಿ 28, ಪ್ರದೀಪ್ತ ಪ್ರಮಾಣಿಕ್ 30, ಮೊಹಮ್ಮದ್ ಶಮಿ ಔಟಾಗದೇ 32; ಜಗಜಿತ್ ಸಿಂಗ್ 21ಕ್ಕೆ 4, ರಾಜ್ ಬಾವಾ 27ಕ್ಕೆ 2). ಚಂಡೀಗಢ: 20 ಓವರ್‌ಗಳಲ್ಲಿ 9ಕ್ಕೆ 156 (ರಾಜ್ ಬಾವಾ 32, ಪ್ರದೀಪ್ ಯಾದವ್ 27; ಸಾಯನ್ ಘೋಷ್ 30ಕ್ಕೆ 4, ಕನಿಷ್ಕ್ ಸೇಠ್ 35ಕ್ಕೆ 2). ಫಲಿತಾಂಶ: ಬಂಗಾಳ ತಂಡಕ್ಕೆ 3 ರನ್‌ಗಳ ಜಯ

ಟೆಸ್ಟ್‌ಗೆ ಇನ್ನೂ ಸಿದ್ಧವಾಗದ ಶಮಿ?

ಬೆಂಗಳೂರು (ಪಿಟಿಐ): ಸಯ್ಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಬೌಲರ್ ಒಬ್ಬ ನಾಲ್ಕು ಓವರುಗಳನ್ನು ಮಾಡಬೇಕಾಗಿದ್ದು, ಮೊಹಮದ್ ಶಮಿ ಪಂದ್ಯದುದ್ದಕ್ಕೂ ಫಿಟ್ ಆಗಿದ್ದಂತೆ ಕಂಡರು. ಆದರೆ ಟೆಸ್ಟ್ ಪಂದ್ಯದಲ್ಲಿ ಅವರು ಜಸ್‌ಪ್ರೀತ್ ಬೂಮ್ರಾ ಜೊತೆ ಹೆಚ್ಚಿನ ಬೌಲಿಂಗ್ ಮಾಡಬೇಕಾಗುತ್ತದೆ. ಕನಿಷ್ಠ 3 ಅಥವಾ 4 ಸ್ಪೆಲ್‌ಗಳ 20 ಓವರುಗಳನ್ನಾದರೂ ಮಾಡುವ ಅಗತ್ಯ ಬೀಳುತ್ತದೆ. ಜೊತೆಗೆ ಫೀಲ್ಡಿಂಗ್‌ನಲ್ಲೂ ಇರಬೇಕಾಗುತ್ತದೆ. ಅವರು ಫಿಟ್ ಎಂಬ ಪ್ರಮಾಣಪತ್ರ ದೊರೆತ ತಕ್ಷಣ ಅವರನ್ನು ತಂಡಕ್ಕೆ ಆಯ್ಕೆ ಮಾಡಲು ರಾಷ್ಟ್ರೀಯ ಆಯ್ಕೆಗಾರರು ಮನಸ್ಸು ಮಾಡಿದ್ದಾರೆ ಎನ್ನಲಾಗುತ್ತಿದೆ. ಆದರೆ, ಬಿಸಿಸಿಐ ಮೊಗಸಾಲೆಯಲ್ಲಿ ನಡೆಯುತ್ತಿರುವ ಚರ್ಚೆಯ ಪ್ರಕಾರ, ಸ್ವತಃ ವೇಗದ ಬೌಲರ್ ಅವರೇ 'ನಾನು ಟೆಸ್ಟ್ ಪಂದ್ಯ ಆಡಲು ಇನ್ನೂ ಸಿದ್ಧಗೊಂಡಿಲ್ಲ' ಎಂದು ಎನ್‌ಸಿಎ ವೈದ್ಯಕೀಯ ತಂಡಕ್ಕೆ ಹೇಳಿದ್ದಾರೆ.

ಬೌಲಿಂಗ್ ವೇಳೆ ತಮಗೆ ಏನೂ ಸಮಸ್ಯೆಯಾಗುತ್ತಿಲ್ಲ. ಆದರೆ ಪಂದ್ಯದ ನಂತರ ಮೊಣಕಾಲು ಭಾಗದಲ್ಲಿ ಊತ ಕಾಣಿಸಿಕೊಳ್ಳುತ್ತಿದೆ ಎಂದು ಅವರು ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎನ್ನಲಾಗಿದೆ. ಅಡಿಲೇಡ್ ಪಂದ್ಯದ ನಂತರ, ನಾಯಕ ರೋಹಿತ್ ಶರ್ಮಾ ಇದೇ ಮಾತನ್ನು ಹೇಳಿದ್ದರು.

ವಿಪ್ರಜ್ ಆಟಕ್ಕೆ ಒಲಿದ ಜಯ

ಬೆಂಗಳೂರು: ವಿಪ್ರಜ್ ನಿಗಮ್ (20ಕ್ಕೆ 2; ಔಟಾಗದೇ 27) ಅವರ ಆಲ್‌ರೌಂಡ್ ಆಟದ ನೆರವಿನಿಂದ ಉತ್ತರ ಪ್ರದೇಶ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ನಾಲ್ಕು ವಿಕೆಟ್‌ಗಳಿಂದ ಆಂಧ್ರ ತಂಡವನ್ನು ಮಣಿಸಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಮತ್ತೊಂದು ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಂಧ್ರ ತಂಡವು ಎಸ್‌ಡಿಎನ್‌ವಿ ಪ್ರಸಾದ್ (ಔಟಾಗದೇ 34;22ಎ) ಅವರ ಬ್ಯಾಟಿಂಗ್ ನೆರವಿನಿಂದ 20 ಓವ‌ರ್‌ಗಳಲ್ಲಿ 6 ವಿಕೆಟ್‌ಗೆ 156 ರನ್ ಗಳಿಸಿತು. ಉತ್ತರ ಪ್ರದೇಶದ ವಿಪ್ರಜ್ ಮತ್ತು ಭುವನೇಶ್ವರ್ ಕುಮಾರ್ ತಲಾ ಎರಡು ವಿಕೆಟ್ ಪಡೆದರು.

ಗುರಿಯನ್ನು ಬೆನ್ನಟ್ಟಿದ ಉತ್ತರ ಪ್ರದೇಶ ತಂಡಕ್ಕೆ ಆರ್ಯನ್ ಜುಯಲ್ (19;20ಎ) ಮತ್ತು ಕರಣ್ ಶರ್ಮಾ (48;31ಎ) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 8.1 ಓವರ್‌ಗಳಲ್ಲಿ 70 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಆದರೆ, 109 ರನ್ ಆಗುವಷ್ಟರಲ್ಲಿ 6 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ಹಂತದಲ್ಲಿ ರಿಂಕು ಸಿಂಗ್ (ಔಟಾಗದೇ 27;22ಎ) ಮತ್ತು ವಿಪ್ರಜ್ ಅವರು ಜವಾಬ್ದಾರಿಯುತ ಆಟವಾಡಿದರು. ವಿಪ್ರಜ್ ಕೇವಲ 8 ಎಸೆತಗಳಲ್ಲಿ ಮೂರು ಬೌಂಡರಿ, ಎರಡು ಸಿಕ್ಸರ್ ಸೇರಿದಂತೆ 27 ರನ್ ಗಳಿಸಿದರು. ಹೀಗಾಗಿ, ಇನ್ನೂ 6 ಎಸೆತ ಬಾಕಿ ಇರುವಂತೆ ತಂಡವು 6 ವಿಕೆಟ್‌ಗೆ 157 ರನ್ ಗಳಿಸಿ ಜಯ ಸಾಧಿಸಿತು. ಉತ್ತರ ಪ್ರದೇಶ ಇದೇ 11ರಂದು ಎಂಟರ ಘಟ್ಟದ ಪಂದ್ಯದಲ್ಲಿ ದೆಹಲಿಯನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ಆಂಧ್ರ: 20 ಓವರ್‌ಗಳಲ್ಲಿ 6ಕ್ಕೆ 156 (ಎಸ್‌ಡಿಎನ್‌ವಿ ಪ್ರಸಾದ್ ಔಟಾಗದೇ 34; ವಿಪ್ರಜ್ ನಿಗಮ್ 20ಕ್ಕೆ 2, ಭುವನೇಶ್ವರ ಕುಮಾರ್ 30ಕ್ಕೆ 2). ಉತ್ತರ ಪ್ರದೇಶ: 19 ಓವರ್‌ಗಳಲ್ಲಿ 6ಕ್ಕೆ 157 (ಕರಣ್ ಶರ್ಮಾ 48, ವಿಪ್ರಜ್ ನಿಗಮ್ ಔಟಾಗದೇ 27, ರಿಂಕು ಸಿಂಗ್ ಔಟಾಗದೇ 27). ಫಲಿತಾಂಶ: ಉತ್ತರ ಪ್ರದೇಶ ತಂಡಕ್ಕೆ 4 ವಿಕೆಟ್ ಜಯ

'ರೋಹಿತ್ ಇನಿಂಗ್ಸ್ ಆರಂಭಿಸಲಿ...'

ಮಾಜಿ ಆಟಗಾರರಾದ ರವಿಶಾಸ್ತ್ರಿ, ಸುನಿಲ್ ಗಾವಸ್ಕರ್ ಸಲಹೆ

ಅಡಿಲೇಡ್ (ಪಿಟಿಐ): ಎಂದಿನಂತೆ ಆಕ್ರಮಣಕಾರಿ ಶೈಲಿಯ ಆಟ ಆಡುವಂತಾಗಲು ನಾಯಕ ರೋಹಿತ್ ಶರ್ಮಾ ಅವರು ಮತ್ತೆ ಆರಂಭ ಆಟಗಾರನ ಸ್ಥಾನಕ್ಕೆ ಮರಳಬೇಕು ಎಂದು ಭಾರತ ತಂಡದ ಮಾಜಿ ಆಟಗಾರರಾದ ಸುನೀಲ್ ಗಾವಸ್ಕರ್ ಮತ್ತು ರವಿಶಾಸ್ತ್ರಿ ಸಲಹೆ ನೀಡಿದ್ದಾರೆ.



ರೋಹಿತ್ ಶರ್ಮಾ

ಮೊದಲ ಟೆಸ್ಟ್ ತಪ್ಪಿಸಿಕೊಂಡಿದ್ದ ರೋಹಿತ್, ಅಡಿಲೇಡ್‌ನಲ್ಲಿ ನಡೆದ ಪಿಂಕ್‌ಬಾಲ್ ಟೆಸ್ಟ್ ಪಂದ್ಯದಲ್ಲಿ ಆರನೇ ಕ್ರಮಾಂಕದಲ್ಲಿ ಆಡಿದ್ದರು. ಆದರೆ ಈ ಕ್ರಮಾಂಕದಲ್ಲಿ ಅವರು ಸಪ್ಪೆಯಾಗಿ ಕಂಡರು. ಮೊದಲ ಟೆಸ್ಟ್‌ನಲ್ಲಿ ಆರಂಭಿಕನಾಗಿ ಉತ್ತಮವಾಗಿ ಆಡಿದ ಕೆ.ಎಲ್. ರಾಹುಲ್ ಅವರಿಗೆ ಮತ್ತೆ ಅದೇ ಸ್ಥಾನದಲ್ಲಿ ಆಡಲು ಬಿಟ್ಟಿದ್ದರು.

ಆದರೆ ಆರನೇ ಕ್ರಮಾಂಕದಲ್ಲಿ ಆಡಿದ ಭಾರತ ನಾಯಕ ಕೇವಲ 3 ಮತ್ತು 6 ರನ್ ಗಳಿಸಿ ವಿಫಲರಾಗಿದ್ದರು. ಭಾರತ ಆ ಪಂದ್ಯದಲ್ಲಿ 10 ವಿಕೆಟ್‌ಗಳಿಂದ ಸೋತಿತ್ತು.

'ಈ ಕಾರಣದಿಂದಲೇ ಅವರು ಆರಂಭದಲ್ಲಿ ಆಡುವುದನ್ನು ಬಯಸುತ್ತೇನೆ. ಅವರು ಅಲ್ಲಿ ಆಕ್ರಮಣಕಾರಿಯಾಗಿ ಮತ್ತು ಒತ್ತಡವಿಲ್ಲದೇ ಆಡಬಹುದು. ಎರಡನೇ ಪಂದ್ಯದಲ್ಲಿ ಅವರ ಹಾವಭಾವ ನೋಡಿದರೆ ಅವರು ಕಳಾಹೀನರಾಗಿದ್ದಂತೆ ಕಂಡರು' ಎಂದು ಶಾಸ್ತ್ರಿ 'ಸ್ಟಾರ್ ಸ್ಪೋರ್ಟ್ಸ್'ಗೆ ತಿಳಿಸಿದ್ದಾರೆ.

'ಪರ್ತ್ ಟೆಸ್ಟ್ ಪಂದ್ಯದ ಸಂಯೋಜನೆ ಬದಲಿಸಲು ಇಷ್ಟಪಡುವುದಿಲ್ಲ' ಎಂದಿದ್ದ ರೋಹಿತ್, ಕೆಳ ಕ್ರಮಾಂಕದಲ್ಲಿ ಆಡುವುದು ವೈಯಕ್ತಿಕವಾಗಿ ಕಠಿಣ ನಿರ್ಧಾರ ಎಂದೂ ಹೇಳಿದ್ದರು. 2018ರ ನಂತರ ಮೊದಲ ಬಾರಿ ಅವರು ಮಧ್ಯಮ ಕ್ರಮಾಂಕದಲ್ಲಿ ಆಡಿದ್ದರು.

'ರೋಹಿತ್ ಎಂದಿನಂತೆ ಆರಂಭ ಆಟಗಾರನ ಸ್ಥಾನದಲ್ಲಿ ಆಡಬೇಕು. ರಾಹುಲ್ ಆರಂಭ ಆಟಗಾರನಾಗಿ ಆಡಲು ಕಾರಣ ರೋಹಿತ್ ಮೊದಲ ಟೆಸ್ಟ್‌ಗೆ ಅಲಭ್ಯರಾಗಿದ್ದು ಎಂಬುದನ್ನು ನೆನಪಿನಲ್ಲಿಡಬೇಕು' ಎಂದು ಸುನೀಲ್ ಗಾವಸ್ಕರ್ 'ಸ್ಪೋರ್ಟ್ ತಕ್'ನಲ್ಲಿ ತಿಳಿಸಿದ್ದಾರೆ.

'ರಾಹುಲ್ ಎರಡನೇ ಟೆಸ್ಟ್‌ನಲ್ಲಿ ಹೆಚ್ಚಿನ ರನ್ ಗಳಿಸದ ಕಾರಣ ಅವರು 5 ಅಥವಾ 6ನೇ ಕ್ರಮಾಂಕಕ್ಕೆ ಹಿಂತಿರುಗಬೇಕು. ರೋಹಿತ್ ಇನಿಂಗ್ಸ್ ಆರಂಭಿಸಬೇಕು. ಆರಂಭದಲ್ಲಿ ಬೇಗ ರನ್ ಗಳಿಸುತ್ತ ಹೋದರೆ ಅವರು (ರೋಹಿತ್) ಭರ್ಜರಿ ಶತಕ ಗಳಿಸಲೂ ಶಕ್ತರು' ಎಂದು ಗಾವಸ್ಕರ್ ಅಭಿಪ್ರಾಯಪಟ್ಟಿದ್ದಾರೆ.

ಸಿರಾಜ್‌ಗೆ ದಂಡ, ಹೆಡ್‌ಗೆ ಎಚ್ಚರಿಕೆ

ಅಡಿಲೇಡ್ (ಪಿಟಿಐ): ಭಾನುವಾರ ಮುಕ್ತಾಯಗೊಂಡ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದ ವೇಳೆ ಕ್ರೀಡಾಂಗಣದಲ್ಲಿ ವಾಗ್ವಾದ ನಡೆಸಿದ್ದಕ್ಕೆ ಭಾರತದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರಿಗೆ ಐಸಿಸಿಯು ಪಂದ್ಯ ಶುಲ್ಕದ ಶೇ 20ರಷ್ಟು ದಂಡ ವಿಧಿಸಲಾಗಿದೆ. ಆಸ್ಟ್ರೇಲಿಯಾ ಬ್ಯಾಟರ್ ಹೆಡ್ ಅವರಿಗೂ ಎಚ್ಚರಿಕೆ ನೀಡಲಾಗಿದೆ.

ಐಸಿಸಿಯ ನೀತಿಸಂಹಿತೆ ಉಲ್ಲಂಘಿಸಿದ್ದ ಕಾರಣ ಸೋಮವಾರ ಈ ಇಬ್ಬರ ವಿಚಾರಣೆ ನಡೆಯಿತು. 'ಆಟಗಾರರಿಗೆ ಮತ್ತು ಆಟಗಾರರ ನೆರವು ಸಿಬ್ಬಂದಿಗೆ ಇರುವ ನೀತಿಸಂಹಿತೆಯ ವಿಧಿ 2.5ರ ಉಲ್ಲಂಘನೆ ಮಾಡಿದ್ದಕ್ಕೆ ಸಿರಾಜ್ ಅವರಿಗೆ ಪಂದ್ಯ ಶುಲ್ಕದ ಶೇ 20 ದಂಡ ವಿಧಿಸಲಾಗಿದೆ' ಎಂದು ಐಸಿಸಿ ಹೇಳಿಕೆಯಲ್ಲಿ ತಿಳಿಸಿದೆ. ಈ ವಿಧಿಯು ಎದುರಾಳಿಯನ್ನು ಪ್ರಚೋದಿಸುವ ರೀತಿಯಲ್ಲಿರುವ ಭಾಷೆ, ಸನ್ನೆಗೆ ಸಂಬಂಧಿಸಿದೆ.



ಸಿರಾಜ್

ಹೆಡ್ ಅವರು ವಿಧಿ 2.13 ಉಲ್ಲಂಘನೆ ಆಡಿದ್ದಾರೆ ಎಂದು ಐಸಿಸಿ ಹೇಳಿದ್ದು ಅವರಿಗೆ ಎಚ್ಚರಿಕೆ ಮಾತ್ರ ನೀಡಿದೆ. ಅವರು ದಂಡದಿಂದ ತಪ್ಪಿಸಿಕೊಂಡಿದ್ದಾರೆ.

ಇಬ್ಬರಿಗೂ ಶಿಸ್ತು ದಾಖಲೆಯ ಕಡತದಲ್ಲಿ ಒಂದೊಂದು ಡಿಮೆರಿಟ್ ಪಾಯಿಂಟ್ ಸೇರಿಸಲಾಗಿದೆ. ಇದು ಇಬ್ಬರಿಗೂ 24 ತಿಂಗಳಲ್ಲಿ ಮೊದಲನೆಯ ಡಿಮೆರಿಟ್ ಪಾಯಿಂಟ್ ಆಗಿದೆ.ಇಬ್ಬರೂ ತಪ್ಪು ಒಪ್ಪಿಕೊಂಡಿದ್ದಾರೆ ಎಂದು ಐಸಿಸಿ ತಿಳಿಸಿದೆ.ಪಂದ್ಯದ ಎರಡನೇ ದಿನ ಹೆಡ್ (140, 141ಎ), ಸಿರಾಜ್ ಬೌಲಿಂಗ್‌ನಲ್ಲಿ ಬೌಲ್ಡ್ ಔಟ್ ಆಗಿ ನಿರ್ಗಮಿಸುವಾಗ ಪರಿಸ್ಥಿತಿ ಕಾವೇರಿತ್ತು. ಸಿರಾಜ್ ಎದುರಾಳಿ ಬ್ಯಾಟರ್‌ಗೆ ಸೆಂಡ್‌ಆಫ್ ನೀಡಿದ ರೀತಿ ಅಕ್ರಮಣದ ರೀತಿಯಲ್ಲಿತ್ತು. ಹೆಡ್ ಬಳಸಿದ ಭಾಷೆಗೆ ಪ್ರತಿಯಾಗಿ ಸಿರಾಜ್ ಕೂಡ ಎದುರು ಆಡಿದ್ದರು. ಪ್ರೇಕ್ಷಕರು ಸಿರಾಜ್ ವಿರುದ್ಧ ಕೂಗೆಬ್ಬಿಸಿದ್ದರು. 'ನಾನು ವೆಲ್ ಬೌಲ್ಡ್' ಎಂದಷ್ಟೇ ಹೇಳಿದ್ದೆ' ಎಂದು ಹೆಡ್ ಸ್ಪಷ್ಟೀಕರಣ ನೀಡಿದ್ದರು. ಆದರೆ ಟಿವಿ ವಾಹಿನಿ ಮುಂದೆ ಮಾತನಾಡಿದ ವೇಳೆ ಇದನ್ನು ನಿರಾಕರಿಸಿದ್ದ ಸಿರಾಜ್, 'ಅವರು ಹಾಗೆ ಹೇಳಿಲ್ಲ. ನನ್ನನ್ನು ನಿಂದಿಸಿದ್ದರು. ಹೀಗಾಗಿ ನಾನೂ ಎದುರಾಡಿದ್ದೆ' ಎಂದು ಹೇಳಿದ್ದರು.

ವಿಜಯ್ ಮರ್ಚೆಂಟ್ ಟ್ರೋಫಿ ಕ್ರಿಕೆಟ್ ಟೂರ್ನಿ

ಕರ್ನಾಟಕ ತಂಡ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಕೃತ್ ಜೆ. (ಅಜೇಯ 81; 105) ಅವರ ಬ್ಯಾಟಿಂಗ್ ನೆರವಿನಿಂದ ಕರ್ನಾಟಕ ತಂಡವು ವಿಜಯ್ ಮರ್ಚೆಂಟ್ ಟ್ರೋಫಿ (16 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಆಂಧ್ರಪ್ರದೇಶದ ಮಂಗಳಗಿರಿಯ ಎಸಿಎ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಮೂರು ದಿನಗಳ ಪಂದ್ಯದ ಕೊನೆಯ ದಿನವಾದ ಸೋಮವಾರ ಕರ್ನಾಟಕ ತಂಡವು 6 ವಿಕೆಟ್‌ಗಳಿಂದ ವಿದರ್ಭ ತಂಡವನ್ನು ಮಣಿಸಿತು.

ಮೊದಲ ಇನಿಂಗ್ಸ್‌ನಲ್ಲಿ 25 ರನ್‌ಗಳ ಅಲ್ಪ ಮುನ್ನಡೆ ಪಡೆದಿದ್ದ ವಿದರ್ಭ ತಂಡವು ಎರಡನೇ ಇನಿಂಗ್ಸ್‌ನಲ್ಲಿ 68.2 ಓವರ್‌ಗಳಲ್ಲಿ 156 ರನ್‌ಗೆ ಕುಸಿಯಿತು. ಧ್ಯಾನ್ ಎಂ. ಹಿರೇಮಠ ಐದು ವಿಕೆಟ್ ಪಡೆದು, ಎದುರಾಳಿ ತಂಡವನ್ನು ಚೇತರಿಸಿಕೊಳ್ಳದಂತೆ ನೋಡಿಕೊಂಡರು.

ಗೆಲುವಿಗೆ 181 ರನ್‌ಗಳ ಗುರಿಯನ್ನು ಪಡೆದ ಕರ್ನಾಟಕಕ್ಕೆ ಆರಂಭದಲ್ಲಿ ಎದುರಾಳಿ ಬೌಲರ್‌ಗಳು ಪೆಟ್ಟು ನೀಡಿದ್ದರು. ಹೀಗಾಗಿ, 49 ರನ್‌ಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ಹಂತದಲ್ಲಿ ಸುಕೃತ್ ಮತ್ತು ಆರುಷ್ ಜೈನ್ (49;126ಎ) ತಾಳ್ಮೆಯ ಆಟವಾಡಿ, ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 133 ರನ್ ಸೇರಿಸಿದರು. ಹೀಗಾಗಿ, ತಂಡವು 51.1 ಓವರ್‌ಗಳಲ್ಲಿ 4 ವಿಕೆಟ್‌ಗೆ 182 ರನ್ ಗಳಿಸಿ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್: ವಿದರ್ಭ: ಮೊದಲ ಇನಿಂಗ್ಸ್: 77.5 ಓವರ್‌ಗಳಲ್ಲಿ 203 (ಕುಶ್ ಶರ್ಮಾ 49, ಸುಜಿತ್ ವೇಲನ್ ಬಿ. 23ಕ್ಕೆ2, ಅಯಾನ್ ಎಸ್.ಕೆ. 42ಕ್ಕೆ 2, ಧ್ಯಾನ್ ಎಂ. ಹಿರೇಮಠ 59ಕ್ಕೆ 3). ಕರ್ನಾಟಕ: 67 ಓವರ್‌ಗಳಲ್ಲಿ 178 (ಅರ್ಣವ್ ದ್ರಾವಿಡ್ 57; ವಿರಾಜ್ ಮಹೇಶ್ವರಿ 19ಕ್ಕೆ 2, ಕುಶ್ ಶರ್ಮಾ 27ಕ್ಕೆ 6). ಎರಡನೇ ಇನಿಂಗ್ಸ್: ವಿದರ್ಭ: 68.2 ಓವರ್‌ಗಳಲ್ಲಿ 156 (ಕುಶ್ ಶರ್ಮಾ 41; ಅಥರ್ವ್ ಎಸ್. ದೇಶಪಾಂಡೆ 26ಕ್ಕೆ 2, ಧ್ಯಾನ್ ಎಂ. ಹಿರೇಮಠ 49ಕ್ಕೆ 5, ಅಯಾನ್ ಎಸ್.ಕೆ. 30ಕ್ಕೆ 2). ಕರ್ನಾಟಕ: 51.1 ಓವರ್‌ಗಳಲ್ಲಿ 4ಕ್ಕೆ 182 (ಸುಕೃತ್ ಜೆ. ಔಟಾಗದೇ 81, ಆರುಷ್ ಜೈನ್ ಔಟಾಗದೇ 49; ಸ್ಪರ್ಶ ಬೋರ್ಕರ್ 44ಕ್ಕೆ 2). ಫಲಿತಾಂಶ: ಕರ್ನಾಟಕಕ್ಕೆ 6 ವಿಕೆಟ್ ಜಯ

ಡಬ್ಲ್ಯುಟಿಸಿ: ಲಂಕಾ ವಿರುದ್ಧ ಗೆದ್ದು ಅಗ್ರಸ್ಥಾನಕ್ಕೆ ಹರಿಣ ಪಡೆ

ದಕ್ಷಿಣ ಆಫ್ರಿಕಾಕ್ಕೆ ಸುಲಭ ಜಯ

ಗೆಬೆರ್ಹಾ (ದಕ್ಷಿಣ ಆಫ್ರಿಕಾ), (ಎಎಫ್‌ಪಿ/ ಎಪಿ): ಎಡಗೈ ಸ್ಪಿನ್ನರ್ ಕೇಶವ ಮಹಾರಾಜ್ (75ಕ್ಕೆ5) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ, ಸೇಂಟ್ ಜಾರ್ಜ್ ಪಾರ್ಕ್ ಕ್ರೀಡಾಂಗಣದಲ್ಲಿ ನಡೆದ ಎರಡನೇ ಟೆಸ್ಟ್ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು 109 ರನ್‌ಗಳಿಂದ ಸೋಲಿಸಿತು. ಸರಣಿಯನ್ನು ಆತಿಥೇಯರು 2–0 ಯಿಂದ ಗೆದ್ದುಕೊಂಡರು.

ಗೆಲ್ಲಲು 328 ರನ್ ಗುರಿ ಎದುರಿಸಿ ನಾಲ್ಕನೇ ದಿನದ ಕೊನೆಗೆ 5 ವಿಕೆಟ್‌ಗೆ 205 ರನ್ ಗಳಿಸಿದ್ದ ಪ್ರವಾಸಿ ತಂಡ, ಅಂತಿಮ ದಿನವಾದ ಸೋಮವಾರ ಹೆಚ್ಚು ಪ್ರತಿರೋಧ ತೋರಲಿಲ್ಲ. 17.1 ಓವರುಗಳ ಆಟದಲ್ಲಿ 238 ರನ್‌ಗಳಿಗೆ ಆಲೌಟ್ ಆಯಿತು.

ಆಟ ಮುಂದುವರಿಸಿದ ನಾಯಕ ಧನಂಜಯ ಡಿಸಿಲ್ವ ಮತ್ತು ಕುಶಲ್ ಮೆಂಡಿಸ್ ಇಬ್ಬರೂ 10 ಓವರುಗಳ ಒಳಗೆ ನಿರ್ಗಮಿಸಿದ್ದರು. ಕೇಶವ ಮಹಾರಾಜ್ ಬೌಲಿಂಗ್‌ನಲ್ಲಿ ಮೆಂಡಿಸ್, ಸ್ಲಿಪ್‌ನಲ್ಲಿ ಏಡನ್ ಮರ್ಕರಂ ಹಿಡಿದ ಕೆಳಮಟ್ಟದ ಕ್ಯಾಚಿಗೆ ನಿರ್ಗಮಿಸಬೇಕಾಯಿತು. ರಬಾಡ ನಂತರ ಲಂಕಾ ನಾಯಕನ ವಿಕೆಟ್ ಪಡೆದರು.

ಸರಣಿ ಸ್ವೀಪ್‌ನಿಂದ ದಕ್ಷಿಣ ಆಫ್ರಿಕಾ ತಂಡವು, ಆಸ್ಟ್ರೇಲಿಯಾವನ್ನು ಹಿಂದೆಹಾಕಿ ಟೆಸ್ಟ್ ಚಾಂಪಿಯನ್‌ಷಿಪ್ ಅಂಕ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಏರಿದೆ. ತಂಡವು ತವರಿನಲ್ಲಿ ಪಾಕಿಸ್ತಾನ ವಿರುದ್ಧ ಎರಡು ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಈ ಸರಣಿ ಡಿಸೆಂಬರ್ 26ರಂದು ಆರಂಭವಾಗಲಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 358; ಶ್ರೀಲಂಕಾ: 328; ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 317; ಶ್ರೀಲಂಕಾ: 69.1 ಓವರುಗಳಲ್ಲಿ 238 (ಧನಂಜಯ ಡಿ ಸಿಲ್ವ 50, ಕುಶಲ್ ಮೆಂಡಿಸ್ 46; ಕಗಿಸೊ ರಬಾಡ 63ಕ್ಕೆ2, ಕೇಶವ ಮಹಾರಾಜ್ 76ಕ್ಕೆ5, ಡೇನ್ ಪೀಟರ್ಸನ್ 33ಕ್ಕೆ2); ಪಂದ್ಯದ ಆಟಗಾರ: ಡೇನ್ ಪೀಟರ್ಸನ್ (7 ವಿಕೆಟ್), ಸರಣಿಯ ಆಟಗಾರ: ತೆಂಬಾ ಬವುಮಾ (327 ರನ್)

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್‌ಪಟ್ಟಿ

ಸ್ಥಾನ	ತಂಡ	ಪಂದ್ಯ	ಗೆಲುವು	ಸೋಲು	ಡ್ರಾ	ಪಾಯಿಂಟ್ಸ್	%
1	ದಕ್ಷಿಣ ಆಫ್ರಿಕಾ	10	6	3	1	76	63.33
2	ಆಸ್ಟ್ರೇಲಿಯಾ	14	9	4	1	102	60.71
3	ಭಾರತ	16	9	6	1	110	57.29
4	ಶ್ರೀಲಂಕಾ	11	5	6	0	60	45.45
5	ಇಂಗ್ಲೆಂಡ್	21	11	9	1	114	45.24
6	ನ್ಯೂಜಿಲೆಂಡ್	13	6	7	0	69	44.23
7	ಪಾಕಿಸ್ತಾನ	10	4	6	0	40	33.33
8	ಬಾಂಗ್ಲಾದೇಶ	12	4	8	0	45	31.25
9	ವೆಸ್ಟ್ ಇಂಡೀಸ್	11	2	7	2	32	24.24



ಕೇಶವ ಮಹಾರಾಜ್ ಎಪಿ/ಪಿಟಿಐ ಚಿತ್ರ



ಹರಿಯಾಣ ಸ್ಟೀಲರ್ಸ್ ತಂಡದ ಆಟಗಾರರು ಸೋಮವಾರ ನಡೆದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ತೆಲುಗು ಟೈಟನ್ಸ್ ತಂಡದ ರೇಡರ್‌ನನ್ನು ಹಿಡಿದರು.

ಕಬಡ್ಡಿ: ಸೇಡು ತೀರಿಸಿಕೊಂಡ ಸ್ಟೀಲರ್ಸ್

ಪುಣೆ (ಪಿಟಿಐ): ಶಿವಂ ಪತಾರೆ ಅವರ ಸ್ಫೂರ್ತಿಯುತ ರೇಡಿಂಗ್ (12 ಅಂಕ) ನೆರವಿನಿಂದ ಹರಿಯಾಣ ಸ್ಟೀಲರ್ಸ್ ತಂಡ, 11ನೇ ಪ್ರೊ ಕಬಡ್ಡಿ ಲೀಗ್‌ನ 101ನೇ ಪಂದ್ಯದಲ್ಲಿ ಸೋಮವಾರ 46–25 ರಿಂದ ತೆಲುಗು ಟೈಟನ್ಸ್ ತಂಡದ ಮೇಲೆ ಸುಲಭ ಜಯ ದಾಖಲಿಸಿತು.

ಬಾಲೇವಾಡಿ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ನಡೆಯುತ್ತಿರುವ ಲೀಗ್‌ನ ದಿನದ ಮೊದಲ ಪಂದ್ಯದಲ್ಲಿ ಸ್ಟೀಲರ್ಸ್ ವಿರಾಮದ ವೇಳೆಗೆ 28–9ರಲ್ಲಿ ದೊಡ್ಡ ಮುನ್ನಡೆ ಕಟ್ಟಿಕೊಂಡಿತ್ತು. ಆ ಮೂಲಕ ನೊಯ್ಡಾ ಚರಣದಲ್ಲಿ ತೆಲುಗು ಟೈಟನ್ಸ್ ಕೈಲಿ ಅನುಭವಿಸಿದ ಸೋಲಿಗೆ ಮುಯ್ಯಿ ತೀರಿಸಿಕೊಂಡಿತು. ಸ್ಟೀಲರ್ಸ್ ತಂಡ 18 ಪಂದ್ಯಗಳನ್ನಾಡಿದ್ದು ಇದು 14ನೇ ಗೆಲುವು. ಅದು 72 ಅಂಕಗಳೊಂದಿಗೆ ಅಗ್ರಸ್ಥಾನ ಗಳಿಸಿದೆ.

ಸ್ಟೀಲರ್ಸ್ ತಂಡ 9ನೇ ನಿಮಿಷದಲ್ಲೇ ಎದುರಾಳಿಗಳನ್ನು ಆಲೌಟ್ ಮಾಡಿತು.

ಹಾಕಿ:ಭಾರತ ತಂಡಕ್ಕೆ ಸುಲಭ ಜಯ

ಮಸ್ಕತ್: ದೀಪಿಕಾ ಅವರ ಹ್ಯಾಟ್ರಿಕ್ ನೆರವಿನಿಂದ ಭಾರತ ತಂಡವು, ಮಹಿಳಾ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿ ಪಂದ್ಯದಲ್ಲಿ ಸೋಮವಾರ 5-0 ಗೋಲುಗಳಿಂದ ಮಲೇಷ್ಯಾ ತಂಡವನ್ನು ಮಣಿಸಿತು.

ಮೊದಲಾರ್ಧ ಗೋಲು ರಹಿತವಾದ ನಂತರ ಭಾರತ ಉತ್ತರಾರ್ಧದಲ್ಲಿ ಲಯ ಕಂಡುಕೊಂಡಿತು.

ಎ ಗುಂಪಿನ ಈ ಪಂದ್ಯದಲ್ಲಿ ದೀಪಿಕಾ 37, 39 ಮತ್ತು 48ನೇ ನಿಮಿಷ ಗೋಲು ಗಳಿಸಿದರು. ವೈಷ್ಣವಿ ವಿಠಲ್ ಫಡ್ಕೆ 32ನೇ ನಿಮಿಷ ಮತ್ತು ಕನಿಕಾ ಸಿಂಗ್ 38ನೇ ನಿಮಿಷ ಉಳಿದ ಎರಡು ಗೋಲುಗಳನ್ನು ಗಳಿಸಿದರು. ಭಾರತ ತನ್ನ ಮುಂದಿನ ಪಂದ್ಯದಲ್ಲಿ ಚೀನಾ ವಿರುದ್ಧ ಬುಧವಾರ ಆಡಲಿದೆ.



ಕರ್ನಾಟಕ ರಾಜ್ಯ ಈಜು ಸಂಸ್ಥೆ ಆಶ್ರಯದಲ್ಲಿ ಬೆಂಗಳೂರಿನ ಬಸವನಗುಡಿ ಈಜು ಕೇಂದ್ರದಲ್ಲಿ ನಡೆದ ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ಸ್ ಅಪ್ ಆದ ನೆಟ್ಟಕಲ್ಲಪ್ಪ ಈಜು ಕೇಂದ್ರದ ಈಜುಪಟುಗಳು —ಪ್ರಜಾವಾಣಿ ಚಿತ್ರ

ಭಾರತ ಕಿವುಡರ ತಂಡಕ್ಕೆ ಏಕದಿನ ಸರಣಿ

ನವದೆಹಲಿ: ಭಾರತ ಶ್ರವಣದೋಷವುಳ್ಳ ಆಟಗಾರರ ತಂಡ ಏಕದಿನ ಕ್ರಿಕೆಟ್ ಸರಣಿಯಲ್ಲಿ ಶ್ರೀಲಂಕಾ ತಂಡವನ್ನು 5–0 ಯಿಂದ ಸೋಲಿಸಿತು.

ಡಿಸೆಂಬರ್ 2ರಿಂದ 8ರವರೆಗೆ ಏಕದಿನ ಸರಣಿ ನಡೆಯಿತು. ವೀರೇಂದ್ರ ಸಿಂಗ್ ನೇತೃತ್ವದ ಭಾರತ ತಂಡದಲ್ಲಿ ವಿವಿಧ ರಾಜ್ಯಗಳ 15 ಆಟಗಾರರಿದ್ದರು. ಗಿಮಾದು ಮಾಲ್ಕಮ್ ಲಂಕಾ ತಂಡವನ್ನು ಮುನ್ನಡೆಸಿದರು. ಐದನೇ ಮತ್ತು ಅಂತಿಮ ಏಕದಿನ ಪಂದ್ಯವನ್ನು ಭಾರತ 13 ರನ್‌ಗಳಿಂದ ಗೆದ್ದುಕೊಂಡಿತು. ಮೊದಲ ಬ್ಯಾಟಿಂಗ್ ಮಾಡಿದ ಭಾರತ 49.5 ಓವರ್‌ಗಳಲ್ಲಿ 289 ರನ್ ಗಳಿಸಿತು. ನಂತರ ಲಂಕಾ ತಂಡವನ್ನು 48.4 ಓವರ್‌ಗಳಲ್ಲಿ 276 ರನ್‌ಗಳಿಗೆ ಆಲೌಟ್ ಮಾಡಿತು.

ಅಂತಿಮ ಪಂದ್ಯದಲ್ಲಿ ಭಾರತದ ಸಾಯಿ ಪ್ರಕಾಶ್ ಪಂದ್ಯದ ಆಟಗಾರ ಪ್ರಶಸ್ತಿಗೆ ಭಾಜನರಾದರು. ನಾಲ್ಕು ಪಂದ್ಯಗಳಿಂದ 12 ವಿಕೆಟ್ ಪಡೆದ ಶ್ರೀಲಂಕಾದ ಅಲನ್‌ರೋಸ್ ಕಲೆಪ್ ಸರಣಿ ಶ್ರೇಷ್ಠರಾದರು. ಈ ಸರಣಿಯ ಆತಿಥ್ಯವನ್ನು ಭಾರತ ಕಿವುಡರ ಕ್ರಿಕೆಟ್ ಸಂಸ್ಥೆ (ಐಡಿಸಿಎ) ವಹಿಸಿತ್ತು.

'ಮೀಸಲು: ಬಿಜೆಪಿಯದ್ದೇ ತಪ್ಪು'

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ನ್ಯಾಯಾಲಯಕ್ಕೆ ನಿಮ್ಮ ಸರ್ಕಾರ ಸಲ್ಲಿಸಿದ ಪ್ರಮಾಣಪತ್ರ ಮತ್ತು ನ್ಯಾಯಾಲಯದ ಆದೇಶವನ್ನು ಮಂಗಳವಾರವೇ ಸದನಕ್ಕೆ ಮಂಡಿಸುತ್ತೇನೆ' ಎಂದರು.

'ನಮ್ಮ ಬಳಿಯೂ ದಾಖಲೆಗಳಿವೆ. ನೀವು ವೀರಶೈವ ಲಿಂಗಾಯತ ಸಮುದಾಯವನ್ನು ಒಬಿಸಿಗೆ ಸೇರಿಸಿ. ಕೇಂದ್ರದಲ್ಲಿ ಹೋರಾಟ ಮಾಡಿ ಅದಕ್ಕೆ ಒಪ್ಪಿಗೆ ಪಡೆದುಕೊಳ್ಳುತ್ತೇವೆ' ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಹೋರಾಟಕ್ಕೆ ಅನುಮತಿ: 'ಪಂಚಮಸಾಲಿ ಸಮುದಾಯದವರು 5 ಸಾವಿರ ಟ್ರ್ಯಾಕ್ಟರ್‌ಗಳಲ್ಲಿ ಬಂದು ಪ್ರತಿಭಟನೆ ನಡೆಸಲು ಉದ್ದೇಶಿಸಿದ್ದಾರೆ. ಅಷ್ಟು ಟ್ರ್ಯಾಕ್ಟರ್‌ಗಳಿಗೆ ಅವಕಾಶ ನೀಡಿದರೆ, ಕಾನೂನು ಸುವ್ಯವಸ್ಥೆಗೆ ತೊಂದರೆ ಆಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ವಾಹನ ತರಬಾರದು. ಜೀಪು ಮತ್ತು ಟೆಂಪೋಗಳಲ್ಲಿ ಬಂದು ಪ್ರತಿಭಟನೆ ನಡೆಸಬಹುದು' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸಚಿವರ ಭರವಸೆ ಬಳಿಕ ವಿರೋಧ ಪಕ್ಷದ ಬಿಜೆಪಿ ಸದಸ್ಯರು ಧರಣಿ ಕೈಬಿಟ್ಟರು.

ವಿಶ್ವ ಚೆಸ್ ಚಾಂಪಿಯನ್‌ಶಿಪ್: 12ನೇ ಪಂದ್ಯದಲ್ಲಿ ಎಡವಿದ ಗ್ರ್ಯಾಂಡ್‌ಮಾಸ್ಟರ್ ಗುಕೇಶ್

ಗೆದ್ದು ಸಮಬಲ ಸಾಧಿಸಿದ ಲಿರೆನ್

ಮುಖ್ಯಾಂಶಗಳು

- ಉಭಯ ಆಟಗಾರರ ಸ್ಕೋರ್ 6–6 ರಲ್ಲಿ ಸಮಬಲ
- ಕೊನೆಯ ಎರಡು ಸುತ್ತಿನ ಪಂದ್ಯಗಳು ಮಾತ್ರ ಬಾಕಿ

ಸಿಂಗಪುರ (ಪಿಟಿಐ): ಹಾಲಿ ಚಾಂಪಿಯನ್ ಡಿಂಗ್ ಲಿರೆನ್, ಸೋಮವಾರ ನಡೆದ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನ 12ನೇ ಪಂದ್ಯದಲ್ಲಿ ಚಾಲೆಂಜರ್, ಭಾರತದ ಡಿ.ಗುಕೇಶ್ ಅವರನ್ನು ಸೋಲಿಸಿ ಹಿನ್ನಡೆಯಿಂದ ಪುಟಿದೆದ್ದರು. ಇದರಿಂದ 14 ಪಂದ್ಯಗಳ ಫೈನಲ್‌ನಲ್ಲಿ ಸ್ಕೋರ್ ಈಗ 6–6 ರಲ್ಲಿ ಸಮಬಲವಾಗಿದೆ.

ಸತತ ಏಳು ಡ್ರಾಗಳ ನಂತರ ಭಾನುವಾರ ನಡೆದ 11ನೇ ಪಂದ್ಯದಲ್ಲಿ ಗೆದ್ದ ಗುಕೇಶ್ ಪ್ರಶಸ್ತಿ ಹಾದಿಯಲ್ಲಿ ಹೆಜ್ಜೆಯಿಟ್ಟಂತೆ ಕಂಡಿತ್ತು. ಆದರೆ ಮರು ಪಂದ್ಯದಲ್ಲೇ ಬಿಳಿ ಕಾಯಿಗಳಲ್ಲಿ ಆಡಿ ಜಯಶಾಲಿಯಾದ ಚೀನಾದ 32 ವರ್ಷ ವಯಸ್ಸಿನ ಆಟಗಾರ ಸ್ಕೋರ್ ಸಮ ಮಾಡಿಕೊಂಡಿದ್ದಾರೆ. ಇಬ್ಬರಲ್ಲಿ ಯಾರು ಮೊದಲು 7.5 ಪಾಯಿಂಟ್ಸ್ ತಲುಪುತ್ತಾರೆ ಎಂಬ ಕುತೂಹಲ ಇನ್ನೂ ಉಳಿದಿದೆ.

ಮಂಗಳವಾರ ಈ ಚಾಂಪಿಯನ್ ಷಿಪ್‌ಗೆ ಅಂತಿಮ ವಿರಾಮದ ದಿನವಾಗಿದ್ದು ಕೊನೆಯ ಎರಡು ಪಂದ್ಯಗಳು ಕ್ರಮವಾಗಿ ಬುಧವಾರ ಮತ್ತು ಗುರುವಾರ ನಡೆಯಲಿವೆ. 14 ಕ್ಲಾಸಿಕಲ್ (ಶಾಸ್ತ್ರೀಯ ರೀತಿಯ) ಪಂದ್ಯಗಳ ನಂತರವೂ ಸ್ಕೋರ್ 7–7 ಸಮನಾದಲ್ಲಿ ಅಲ್ಪಾವಧಿಯ ಟೈಬ್ರೇಕ್ ಪಂದ್ಯಗಳನ್ನು ಆಡಿಸಿ ವಿಜೇತರ ನಿರ್ಧಾರ ಮಾಡಲಾಗುತ್ತದೆ.

ಈ ಹಿಂದಿನ ಪಂದ್ಯಗಳಿಗೆ ಹೋಲಿಸಿದರೆ, ಸೋಮವಾರದ ಪಂದ್ಯದಲ್ಲಿ ಗುಕೇಶ್ ಅವರ ಸಿದ್ಧತೆ ಶ್ರೇಷ್ಠ ಮಟ್ಟದಲ್ಲಿದ್ದಂತೆ ಕಾಣಲಿಲ್ಲ. ಪಂದ್ಯದ ಮಧ್ಯಮ ಹಂತದಲ್ಲಿ ಗುಕೇಶ್ ಪ್ರತಿದಾಳಿ ನಡೆಸುವ ಕೆಲವು ಅವಕಾಶ-ಗಳನ್ನು ಕಳೆದುಕೊಂಡರು. ಪಂದ್ಯ 15 ನಡೆಗಳನ್ನು ಕಾಣುವಷ್ಟರಲ್ಲಿ ಲಿರೆನ್ ಅವರಿಗೆ ಸಮಯ ಕಡಿಮೆಯಿದ್ದರೂ ಪರಿಸ್ಥಿತಿ ಸ್ವಲ್ಪ ಅನುಕೂಲಕರವಾಗಿದ್ದಂ-ತೆ ಕಂಡಿತು. ಗುಕೇಶ್ ಅವರ 17ನೇ ನಡೆ ಉತ್ತಮವಾಗಿರಲಿಲ್ಲ. ಇದರಿಂದ ಬೋರ್ಡ್ ಮಧ್ಯದ ಭಾಗದಲ್ಲಿ ಬಿಳಿ ಪಡೆಗಳ ಸಂಚಾರಕ್ಕೆ ಸ್ವಲ್ಪ ಹೆಚ್ಚಿನ 'ಸ್ಪೇಸ್' ದೊರೆಯಿತು. 22ನೇ ನಡೆಯಲ್ಲಿ ಬಿಷಪ್ 'ಎಕ್ಸ್‌ಚೇಂಜ್'ಗೆ ಹೋಗಿದ್ದೂ ಅಂಥ ಉತ್ತಮ ನಡೆಯಾಗಲಿಲ್ಲ.



ವಿಶ್ವಾಸದ ನಡೆ... ಭಾರತದ ಗ್ರ್ಯಾಂಡ್‌ಮಾಸ್ಟರ್ ಗುಕೇಶ್ ವಿರುದ್ಧ ವಿಶ್ವ ಚಾಂಪಿಯನ್‌ಷಿಪ್‌ನ 12ನೇ ಪಂದ್ಯದಲ್ಲಿ ಚೀನಾದ ಡಿಂಗ್ ಲಿರೆನ್ ಅವರು ನಡೆಯೊಂದನ್ನು ಇರಿಸಿದ ಸಂದರ್ಭ. –ಪಿಟಿಐ ಚಿತ್ರ

ಗುಕೇಶ್ 26ನೇ ನಡೆ (Qd7) ಕೂಡ ಲಿರೆನ್‌ಗೆ ಹೆಚ್ಚಿನ ಮೇಲುಗೈ ಒದಗಿಸಿತು. ಇವೆಲ್ಲವೂ ಹಂತಹಂತವಾಗಿ ಗುಕೇಶ್ ಮೇಲೆ ಒತ್ತಡ ಹೆಚ್ಚಿಸಿದವು. 39ನೇ ನಡೆಯಲ್ಲಿ ಅವರು ಪಂದ್ಯ ತ್ಯಜಿಸಿದರು.

ತಾವು ಸುಲಭವಾಗಿ ಮಣಿಯುವ ಆಸಾಮಿಯಲ್ಲ ಎಂಬುದನ್ನು ಲಿರೆನ್ ಮತ್ತೊಮ್ಮೆ ಸಾಬೀತುಪಡಿಸಿದರು. ಈ ಹಿಂದಿನ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ (ರಷ್ಯಾದ ಇಯಾನ್ ನಿಪೊಮ್‌ನಿಷಿ ವಿರುದ್ಧ) ಕೂಡ ಲಿರೆನ್ ಮೂರು ಬಾರಿ ಹಿನ್ನಡೆಯಿಂದ ಚೇತರಿಸಿಕೊಂಡು ಸ್ಕೋರ್ ಸಮ ಮಾಡಿಕೊಂಡಿದ್ದರು. ಅಂತಿಮವಾಗಿ ಟೈಬ್ರೇಕರ್‌ನಲ್ಲಿ ಗೆದ್ದು ಚಾಂಪಿಯನ್ ಕಿರೀಟವನ್ನೂ ಮುಡಿಗೇ-ರಿಸಿಕೊಂಡಿದ್ದರು.

13ನೇ ಪಂದ್ಯದಲ್ಲಿ ಗುಕೇಶ್ ಬಿಳಿ ಕಾಯಿಗಳಲ್ಲಿ ಆಡಲಿದ್ದಾರೆ.

ಆರಿತ್: ಜಿಎಂ ಮೇಲೆ ಗೆದ್ದ ಕಿರಿಯ ಚೆಸ್ ಪ್ರತಿಭೆ



ಆರಿತ್ ಕಪಿಲ್

ಭುವನೇಶ್ವರ (ಪಿಟಿಐ): ದೆಹಲಿಯ 9 ವರ್ಷ ವಯಸ್ಸಿನ ಬಾಲಕ ಆರಿತ್ ಕಪಿಲ್, ಗ್ರ್ಯಾಂಡ್‌ಮಾಸ್ಟರ್ ಆಟಗಾರನನ್ನು ಸೋಲಿಸಿದ ಭಾರತದ ಅತಿ ಕಿರಿಯ ಆಟಗಾರ ಎನಿಸಿದನು. ಅರಿತ್, ಇಲ್ಲಿ ನಡೆದ ಕೆಐಐಟಿ ಇಂಟರ್ ನ್ಯಾಷನಲ್ ಓಪನ್ ಚೆಸ್ ಟೂರ್ನಿಯ 9ನೇ ಸುತ್ತಿನಲ್ಲಿ ಅಮೆರಿಕದ ರಸೆಟ್ ಜಿಯಾಟ್‌ದಿನೋವ್ ವಿರುದ್ಧ ಜಯಗಳಿಸಿದ.

ಆರಿತ್ ವಯಸ್ಸು 9 ವರ್ಷ 2 ತಿಂಗಳು 18 ದಿನ. ಜಿಎಂ ಆಟಗಾರನನ್ನು ಸೋಲಿಸಿದ ವಿಶ್ವದ ಮೂರನೇ ಅತಿ ಕಿರಿಯ ಆಟಗಾರನೀತ. ಭಾರತ ಮೂಲದ ಸಿಂಗಪುರ ಆಟಗಾರ ಅಶ್ವಥ್ ಕೌಶಿಕ್, ಈ ವರ್ಷದ ಆರಂಭದಲ್ಲಿ ಜೆಸೆಕ್ ಸ್ಟುಪಾ (ಪೋಲೆಂಡ್) ವಿರುದ್ಧ ಜಯಗಳಿಸಿ ಈ ಸಾಧನೆ ಮಾಡಿದ ಅತಿ ಕಿರಿಯ ಆಟಗಾರ ಎನಿಸಿದ್ದಾನೆ. ಆಗ ಅವನ ವಯಸ್ಸು 8 ವರ್ಷ 6 ತಿಂಗಳು. ಸರ್ಬಿಯಾದ ಲಿಯೊನಿದ್ ಇವಾನೊವಿಕ್ (8 ವರ್ಷ 11 ತಿಂಗಳು) ಜಿಎಂ ಆಟಗಾರನನ್ನು ಸೋಲಿಸಿದ ಎರಡನೇ ಅತಿ ಕಿರಿಯ ಆಟಗಾರ ಎನಿಸಿದ್ದಾನೆ.

ಭಾನುವಾರ ನಡೆದ ಪಂದ್ಯದಲ್ಲಿ ಬಿಳಿ ಕಾಯಿಗಳಲ್ಲಿ ಆಡಿದ ಆರಿತ್ ಎದುರು 66 ವರ್ಷದ ಜಿಯಾಟ್‌ದಿನೊವ್ ಆರಂಭದಲ್ಲಿ ಮೇಲುಗೈ ಸಾಧಿಸಿದ್ದರು. ಆದರೆ ಕೊನೆಯ ಹಂತದಲ್ಲಿ ಅವರಿಂದ ತಪ್ಪಾಗಿ 'ನೈಟ್' (ಅಶ್ವ) ಕಳೆದುಕೊಂಡರು. ನಂತರ ಎಳೆಯ ಆಟಗಾರನಿಗೆ ಗೆಲುವು ಕಷ್ಟ-ವಾಗಲಿಲ್ಲ.

ಅಂತಿಮವಾಗಿ ಈ ಟೂರ್ನಿಯನ್ನು ರಷ್ಯಾದ ಓರಿಸ್ ಸವ್ಚೆಂಕೊ (10 ಸುತ್ತುಗಳಿಂದ 8.5) ಗೆದ್ದುಕೊಂಡರು.

ಅಥ್ಲೆಟಿಕ್ಸ್: ಪುಷ್ಕರ್, ಇಶಾಗೆ ಕಂಚು



ಪುಷ್ಕರ್ ನೆಲವಾಡೆ

ಬೆಂಗಳೂರು: ಕರ್ನಾಟಕದ ಪುಷ್ಕರ್ ನೆಲವಾಡೆ ಮತ್ತು ಇಶಾ ರೆಂಜಿತ್ ಅವರು 39ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದರು.

ಭುವನೇಶ್ವರದ ಕಳಿಂಗ ಕ್ರೀಡಾಂಗಣ-ದಲ್ಲಿ ನಡೆಯುತ್ತಿರುವ ಕೂಟದಲ್ಲಿ ಪುಷ್ಕರ್ 16 ವರ್ಷದೊಳಗಿನ ಬಾಲಕರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ 62.88 ಮೀಟರ್ ಸಾಧನೆ ಮಾಡಿದರು. ಗುಜರಾತ್‌ನ ಧೈರ್ಯ ಭಂಡೇರಿ 70.12 ಮೀಟರ್ ದೂರ ಜಾವೆಲಿನ್ ಎಸೆದು ಚಿನ್ನಕ್ಕೆ ಕೊರಳೊಡ್ಡಿದರು. ಮಧ್ಯ-ಪ್ರದೇಶದ ಕೃಷ್ಣನ್ ಚಂದ್ರ (64.24) ಬೆಳ್ಳಿ ಗೆದ್ದರು.

18 ವರ್ಷದೊಳಗಿನ ಬಾಲಕಿಯರ 100 ಮೀಟರ್ ಹರ್ಡಲ್ಸ್ ನಲ್ಲಿ ಇಶಾ 14.52 ಸೆಕೆಂಡ್ ನಲ್ಲಿ ಗುರಿ ತಲುಪಿದರು. ತಮಿಳುನಾಡಿನ ಭಾವನಾ ಜಿ. (14.42ಸೆ) ಮತ್ತು ಮಹಾರಾಷ್ಟ್ರದ ನೇಹಾಲಿ ಬೋರವಾಲೆ (14.49ಸೆ) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು.